

# ಜ್ಞಾನ-ದೀಪ

## 7 ನೇ ತರಗತಿ

## ಸಮಾಜ ವಿಜ್ಞಾನ ಪ್ರಶ್ನೋತ್ತರ ಮಾಲಿಕೆ

*(2021–22)*



ಸಂಗ್ರಹ:

**ಶ್ರೀ ಸ್ವಾಮಿ ವಿವೇಕಾನಂದ ಸಮಾಜ ವಿಜ್ಞಾನ ಸಂಘ**

**ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಗುಡುದೂರು, ಬಳ್ಳಾರಿ ಜಿಲ್ಲೆ, ಮೊ: 9036653155**









*ಶಾರದಾಂಬೆ, ಭಾರತಾಂಬೆ, ಕನ್ನಡಾಂಬೆ, ಗುಂಜಲಾಂಬೆ & ವಿಜಯಗೌರಾಂಬೆ ಇವರ ಕೃಪೆಯಿಂದ*

**ಶ್ರೀ ಸ್ವಾಮಿ ವಿವೇಕಾನಂದ ಗುರೂಜಿ ಹವ್ಯಾಸಿ ಪ್ರಕಾಶನ, ಗುಡುದೂರು–ಮಾಗಳ**

## ಜ್ಞಾನ Knowledge :

"ವಿಷಯಗಳ ಗ್ರಹಣ, ತಿಳುವಳಿಕೆ, ಬುದ್ದಿಶಕ್ತಿ ಇವೆಲ್ಲವುಗಳನ್ನು ಒಳಗೊಂಡ ಮನಸ್ಸು ಮಾಡುವ ಪ್ರಕ್ರಿಯೆಯೇ ಜ್ಞಾನ"

## ವಿಜ್ಞಾನ : Science :

"ಜ್ಞಾನದ ಕ್ರಮಬದ್ದವಾದ ಅಧ್ಯಯನವೇ ವಿಜ್ಞಾನ."

### ವಿಜ್ಞಾನದ ಎರಡು ಶಾಖೆಗಳು

★ ನೈಸರ್ಗಿಕ ವಿಜ್ಞಾನ Natural Science

★ ಸಮಾಜ ವಿಜ್ಞಾನ Social Science

## ಸಮಾಜ ವಿಜ್ಞಾನ Social Science :

"ಸಾಮಾಜಿಕ ಪರಿಸರಕ್ಕಾಗಿ, ಸಾಮಾಜಿಕ ಪರಿಸರದ ಮೂಲಕ ಸಾಮಾಜಿಕ ಪರಿಸರದ ಅಧ್ಯಯನವೇ ಸಮಾಜ ವಿಜ್ಞಾನ."

### ಸಮಾಜ ವಿಜ್ಞಾನದ ಶಾಖೆಗಳು & ಅವುಗಳ ಪಿತಾಮಹರು

★ ಇತಿಹಾಸ : ಹೆರಡೋಟಸ್

★ ಪೌರನೀತಿ : ಬೆಂಜಮೀನ್ ಫ್ರಾಂಕ್ಲಿನ್

★ ರಾಜ್ಯಶಾಸ್ತ್ರ : ಅರಿಸ್ಟಾಟಲ್

★ ಭೂಗೋಳಶಾಸ್ತ್ರ : ಎರಟೋಸ್ತನೀಸ್

★ ಸಮಾಜಶಾಸ್ತ್ರ : ಆಗಸ್ಟ್ ಕಾಮ್ಟೆ

★ ಅರ್ಥಶಾಸ್ತ್ರ : ಆಡಂಸ್ಮಿತ್

★ ವ್ಯವಹಾರ ಅಧ್ಯಯನ : ....................

## ಇತಿಹಾಸ History :

"ಗತಕಾಲದಲ್ಲಿ ಗತಿಸಿ ಹೋದ ಘಟನೆಗಳ ಕ್ರಮಬದ್ದ ದಾಖಲೆಯೇ ಇತಿಹಾಸ."

## ಪೌರನೀತಿ Civics:

"ಮಾನವನ ಅಂತರ್ಗತ ಶಕ್ತಿಗಳ, ಅವನ ಕಾರ್ಯಗಳ ಒಟ್ಟು ಲಾಭವು ತನ್ನ ಸಹಚರರಿಗೆ ದೊರಕುವಂತೆ ಮಾಡುವ, ಪೌರನ ಹಕ್ಕು & ಕರ್ತವ್ಯಗಳ ಕುರಿತ ಕ್ರಮಬದ್ದ ಅಧ್ಯಯನ."

## ರಾಜ್ಯಶಾಸ್ತ್ರ Political Science :

"ಮಾನವನ ರಾಜಕೀಯ ಚಟುವಟಿಕೆಗಳು & ರಾಜ್ಯದ ರೂಪು ರೇಷೆಗಳಿಗೆ ಸಂಬಂಧಿಸಿದ ಕ್ರಮಬದ್ಧ ಅಧ್ಯಯನ."

## ಭೂಗೋಳಶಾಸ್ತ್ರ Geography :

"ಭೂ ಮೇಲ್ಮೈ ಲಕ್ಷಣಗಳು & ಭೂಮಿಯ ಮೇಲಿನ ಮಾನವನ ಚಟುವಟಿಕೆಗಳ ವೈಜ್ಞಾನಿಕ ಅಧ್ಯಯನ."

## ಅರ್ಥಶಾಸ್ತ್ರ Economics :

"ಮಾನವನ ಯೋಗಕ್ಷೇಮ, ಭೌತಿಕ ಸುಖ & ಅವನ ಆರ್ಥಿಕ ಚಟುವಟಿಕೆಗಳ ವೈಜ್ಞಾನಿಕ ಅಧ್ಯಯನ."

## ಸಮಾಜಶಾಸ್ತ್ರ Sociology :

"ಮಾನವನ ಸಾಮಾಜಿಕ ಚಟುವಟಿಗಳು, ಸಾಮಾಜಿಕ ಸಮಸ್ಯೆಗಳ ಕುರಿತ ವೈಜ್ಞಾನಿಕ ಅಧ್ಯಯನ."

## ವ್ಯವಹಾರ ಅಧ್ಯಯನ Business Study :

"ಮಾನವನ ದಿನನಿತ್ಯದ ವ್ಯವಹಾರಿಕ ಚಟುವಟಿಕಗಳ ಕ್ರಮಬದ್ದ ಅಧ್ಯಯನ."

## ಭಾರತ ದೇಶದ ಪ್ರಮುಖ ಐತಿಹಾಸಿಕ ಘಟನೆಗಳು

- ★ ಸಿಂದೂ ಬಯಲಿನ ನಾಗರಿಕತೆ ಸಾ.ಶ.ಪೂ. 3300–1700
- ★ ವೇದಗಳ ಕಾಲ ಸಾ.ಶ.ಪೂ. 1500–1100
- ★ ಮೌರ್ಯ ಸಾಮ್ರಾಜ್ಯ ಸಾ.ಶ.ಪೂ. 322–187
- ★ ಶಕ ವರ್ಷ ಸಾ.ಶ. 78
- ★ ವಾಸ್ಕೋಡಿಗಾಮಾ ಭಾರತದ ಕೇರಳದ ಕಲ್ಲಿಕೋಟೆ ತಲುಪಿದ್ದು: ಸಾ.ಶ.1498
- ★ ಭಾರತದಲ್ಲಿ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಸ್ಥಾಪನೆ: ಸಾ.ಶ.1600
- ★ ಪ್ಲಾಸೀ ಕದನ : ಸಾ.ಶ.1757
- ★ ಬಕ್ಸಾರ್ ಕದನ : ಸಾ.ಶ.1764
- ★ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ : ಸಾ.ಶ.1857
- ★ ಖಿಲಾಫತ್ ಚಳುವಳಿ/ಅಸಹಕಾರ ಚಳುವಳಿ: ಸಾ.ಶ.1920
- ★ ಭಾರತ ಬಿಟ್ಟು ತೊಲಗಿ/ಕ್ವಿಟ್ ಇಂಡಿಯಾ ಚಳುವಳಿ: ಸಾ.ಶ.1942
- ★ ಭಾರತ ದೇಶ ಸ್ವಾತಂತ್ರ್ಯ : ಸಾ.ಶ.1947
- ★ ಭಾರತ ದೇಶದ ನೂತನ ಸಂವಿಧಾನ ಜಾರಿ: ಸಾ.ಶ.1950
- ★ ಭಾರತ– ಚೀನಾ ಯುದ್ಧ : ಸಾ.ಶ.1962
- ★ ಭಾರತ–ಪಾಕ್ ಯುದ್ಧ : ಸಾ.ಶ. 1965
- ★ ಕಾರ್ಗಿಲ್ ಕದನ/ವಿಜಯ : ಸಾ.ಶ. 1999

**ಪ್ರಪಂಚದ ಪ್ರಥಮ ಮಹಾಯುದ್ಧ :**

28 ಜುಲೈ 1914– ನವೆಂಬರ್ 11 1918

**ಪ್ರಪಂಚದ ದ್ವಿತಿಯ ಮಹಾಯುದ್ಧ :**

1 ನೇ ಸೆಪ್ಟಂಬರ್ 1939– 2 ನೇ ಸೆಪ್ಟಂಬರ್ 1945

**ಪದಗಳ ಉತ್ಪತ್ತಿ**

- ★ **Science: Scientia :** (ಸೈನ್‌ಶಿಯಾ): ಜ್ಞಾನ
- ★ **History :** ಗ್ರೀಕ್ ಭಾಷೆಯ **Historia:** ವಿಚಾರಣೆ/ ತನಿಖೆ ಮಾಡು/ ಸತ್ಯಾನವೇಷಣೆ
- ★ **Civics:** ಲ್ಯಾಟಿನ್ ಭಾಷೆಯ **Civitas:** ನಗರ/ರಾಜ್ಯ & **Civis:** ಪೌರ
- ★ **Political Science :** ಗ್ರೀಕ್ ಬಾಷೆಯ **Polis :** ರಾಜ್ಯ **Scire :** ಶೋಧನೆ/ಅಧ್ಯಯನ
- ★ **Sociology:** ಲ್ಯಾಟಿನ್ ಭಾಷೆಯ **Socious :** ಸಮಾಜ & ಗ್ರೀಕ್ ಭಾಷೆಯ **Logos :** ಜ್ಞಾನ/ ಆಧ್ಯಯನ
- ★ **Gepgraphy:** ಗ್ರೀಕ್ ಭಾಷೆಯ **Geo :** ಭೂಮಿ & **Graphian :** ಬಿಡಿಸು/ಬರೆ/ರಚಿಸು/ಅಭ್ಯಸಿಸು
- ★ **Economics:** ಗ್ರೀಕ್ ಭಾಷೆಯ **Ocus :** ಗೃಹ & **Nomus:** ನಿರ್ಮಾಣ
- ★ **Business Study:** ಆಂಗ್ಲ ಭಾಷೆಯ **Busigness/Busy :** ಕಾಳಜಿ/ಕೆಲಸ/ಕಾರ್ಯನಿರತನಾಗು

## ಪರಿವಿಡಿ


| ಕ್ರ. ಸಂ | . ಇತಿಹಾಸ | ಪುಟ ಸಂಖ್ಯೆ |
|---|---|---|
| 01 | ವಿಜಯನಗರದ ಅರಸು ಮನೆತನಗಳು | 5–8 |
| 02 | ಬಹಮನಿ ಆದಿಲ್ ಷಾಹಿಗಳು | 8–10 |
| 03 | ಭಕ್ತಿ ಪಂಥ ಹಾಗೂ ಸೂಫಿ ಪರಂಪರೆ | 10–12 |
| 04 | ನಾಯಕರು, ಪಾಳೆಯಗಾರರು ಮತ್ತು ನಾಡ ಪ್ರಭುಗಳು | 12–17 |
| 05 | ಮೈಸೂರು ಒಡೆಯರು | 17–21 |
| 06 | ದಿಲ್ಲಿಯ ಸುಲ್ತಾನರು | 21–24 |
| 07 | ಮೊಗಲರು | 24–26 |
| 08 | ಮರಾಠರು | 26–27 |
| | ಪೌರನೀತಿ | |
| 09 | ನಮ್ಮ ಸಂವಿಧಾನ | 27 |
| 10 | ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳು | 28 |
| 11 | ರಾಜ್ಯ ನಿರ್ದೇಶಕ ತತ್ವಗಳು | 28–29 |
| | ಭೂಗೋಳ ವಿಜ್ಞಾನ | |
| 12 | ಉತ್ತರ ಅಮೆರಿಕ – ಪ್ರೈರೀಸ್‌ಗಳ ನಾಡು | 29–30 |
| 13 | ದಕ್ಷಿಣ ಅಮೆರಿಕ – ಆ್ಯಂಡೀಸ್‌ಗಳ ನಾಡು | 30–31 |

| | ದ್ವಿತೀಯ ಸೆಮಿಸ್ಟರ್ | |
|---|---|---|
| ಕ್ರ.ಸಂ. | ಇತಿಹಾಸ | ಪುಟ ಸಂಖ್ಯೆ |
| 01 | ಭಾರತಕ್ಕೆ ಯುರೋಪಿಯನ್ನರ ಆಗಮನ | 31–32 |
| 02 | ಭಾರತದಲ್ಲಿ ಬ್ರಿಟಿಷರ ರಾಜಕೀಯ ಏಳಿಗೆ | 32–33 |
| 03 | ಬ್ರಿಟಿಷ್ ಆಳ್ವಿಕೆಯ ಪರಿಣಾಮ | 33–34 |
| 04 | ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆ | 35–37 |
| 05 | ಸ್ವಾತಂತ್ರ್ಯ ಹೋರಾಟಗಳು | 37–41 |
| 06 | ಕರ್ನಾಟಕದ ಸಮಾಜಮುಖಿ ಚಳವಳಿಗಳು | 41–42 |
| 07 | ಕರ್ನಾಟಕದ ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆ | 42–43 |
| 08 | ಮಹಿಳಾ ಸ್ವಾತಂತ್ರ್ಯ ಹೋರಾಟಗಾರರು | 43–45 |
| 09 | ಕರ್ನಾಟಕದ ಏಕೀಕರಣ ಮತ್ತು ಗಡಿ ವಿವಾದಗಳು | 45 |
| | ಪೌರನೀತಿ | |
| 10 | ನಮ್ಮ ರಕ್ಷಣಾ ಪಡೆಗಳು | 45–46 |
| 11 | ಸಂವಿಧಾನ ತಿದ್ದುಪಡಿ | 46–47 |
| | ಭೂಗೋಳ ವಿಜ್ಞಾನ | |
| 12 | ಆಸ್ಟ್ರೇಲಿಯ ಅತ್ಯಂತ ಸಮತಟ್ಟಾದ ಭೂಖಂಡ | 47–48 |
| 13 | ಅಂಟಾರ್ಕ್‌ಟಿಕ್ ಶ್ವೇತ ಭೂಖಂಡ | 48 |


## ಅಧ್ಯಾಯ–1: ವಿಜಯನಗರದ ಅರಸು ಮನೆತನಗಳು

### ಪ್ರಶ್ನೆಗಳು ಮತ್ತು ಉತ್ತರಗಳು:

**I ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿ.**

**1.** ಶ್ರೀಲಂಕಾದ ರಾಜರನ್ನು ಸೋಲಿಸಿ ಕಪ್ಪಕಾಣಿಕೆ ಪಡೆದ ಎರಡನೆಯ ದೇವರಾಯನ ಸೇನಾನಿ__________

**ಉತ್ತರ: ಲಕ್ಕಣ್ಣ ದಂಡೇಶ**

**2.**ಕೃಷ್ಣದೇವರಾಯನು ಗಜಪತಿ ಪ್ರತಾಪರುದ್ರನ ಮಗಳಾದ__________ಅನ್ನು ಮದುವೆಯಾದನು.

**ಉತ್ತರ: ಜಗನ್ಮೋಹನಿ**

**3.** ವಿಜಯನಗರ ಸಾಮ್ರಾಜ್ಯದಲ್ಲಿ ವರಹ______ ನಾಣ್ಯವಾಗಿತ್ತು. **ಉತ್ತರ: ಚಿನ್ನದ**

4.ಎಲ್ಲಾ ಧರ್ಮಿಯರೂ ವಿಜಯನಗರ ಸಾಮ್ರಾಜ್ಯದಲ್ಲಿ ನಿಶ್ಚಿಂತೆಯಿಂದ ಜೀವಿಸಬಹುದಾಗಿತ್ತು ಎಂದು ಹೇಳಿದ ವಿದೇಶಿ ಪ್ರವಾಸಿಗ_________ **ಉತ್ತರ: ಬಾರ್ಬೋಸ**

**5.**ವಿಜಯನಗರವಾಸ್ತುಶೈಲಿಯು ದ್ರಾವಿಡ ಶೈಲಿಯ ಶ್ರೇಷ್ಠ ವಿಕಸಿತ ಸ್ವರೂಪ ಎಂದು ಹೇಳಿದ ಕಲಾ ಇತಿಹಾಸಕಾರ_______ **ಉತ್ತರ: ಪರ್ಸಿಬ್ರೌನ್**

**II ಈ ಕೆಳಕಂಡ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. **ವಿಜಯನಗರ ಸಾಮ್ರಾಜ್ಯದ ಸ್ಥಾಪಕರು ಯಾರು?**

**ಉತ್ತರ:** ವಿಜಯನಗರ ಸಾಮ್ರಾಜ್ಯದ ಸ್ಥಾಪಕರು ಹರಿಹರ, ಬುಕ್ಕರಾಯ, ಕಂಪಣ, ಮಾರಪ್ಪ ಮತ್ತು ಮುದ್ದಪ್ಪ

2. **ವಿಜಯನಗರ ಸಾಮ್ರಾಜ್ಯವನ್ನಾಳಿದ ವಂಶಗಳಾವುವು?**

**ಉತ್ತರ:** ವಿಜಯನಗರ ಸಾಮ್ರಾಜ್ಯವನ್ನಾಳಿದ ವಂಶಗಳಾವುವು ಎಂದರೆ ಸಂಗಮ ವಂಶ ಸಾಳುವ ವಂಶ ತುಳುವ ವಂಶ ಹಾಗೂ ಅರವೀಡು
ವಂಶ ಎಂಬ ನಾಲ್ಕು ವಂಶಗಳು ಆಳ್ವಿಕೆ ನಡೆಸಿದವು.

3. **ಸಂಗಮ ವಂಶದ ಪ್ರಖ್ಯಾತ ದೊರೆ ಯಾರು?**

**ಉತ್ತರ:** ಸಂಗಮ ವಂಶದ ಪ್ರಖ್ಯಾತ ದೊರೆ ಎರಡನೆಯ ಪ್ರೌಢ ದೇವರಾಯ

4. **ವಿಜಯನಗರ ಸಾಮ್ರಾಜ್ಯದ ಅರಸರಲ್ಲಿ ಅತ್ಯಂತ ಶ್ರೇಷ್ಠ ದೊರೆ ಯಾರು?**

**ಉತ್ತರ:** ವಿಜಯನಗರ ಸಾಮ್ರಾಜ್ಯದ ಅರಸರಲ್ಲಿ ಅತ್ಯಂತ ಶ್ರೇಷ್ಠ ದೊರೆ ಕೃಷ್ಣದೇವರಾಯ

5. **ರಕ್ಕಸ ತಂಗಡಿ ಕದನ ಯಾವಾಗ ನಡೆಯಿತು?**

**ಉತ್ತರ:** ರಕ್ಕಸ ತಂಗಡಿ ಕದನ ಸಾ.ಶ 1565 ಜನವರಿ 23 ರಂದು ನಡೆಯಿತು

6. **ವಿಜಯನಗರ ಸಾಮ್ರಾಜ್ಯದ ರಾಜ್ಯಾದಾಯದ ಮೂಲಗಳಾವುವು?**

**ಉತ್ತರ:** ವಾಣಿಜ್ಯ ತೆರಿಗೆ ,ವೃತ್ತಿ ತೆರಿಗೆ ,ದಾರಿ ಸುಂಕ ,ಸಂತೆ ಸುಂಕ ,ರಫ್ತು ತೆರಿಗೆ ,ಕಪ್ಪ ಕಾಣಿಕೆಗಳು

7. **ವಿಜಯನಗರ ಸಾಮ್ರಾಜ್ಯದಲ್ಲಿ ಆಚರಿಸುತ್ತಿದ್ದ ಹಬ್ಬಗಳಾವುವು?**

**ಉತ್ತರ:** ದೀಪಾವಳಿ ಮತ್ತು ದಸರಾ ಹಬ್ಬಗಳು ವಿಜಯನಗರ ಸಾಮ್ರಾಜ್ಯದಲ್ಲಿ ಆಚರಿಸುತ್ತಿದ್ದ ಹಬ್ಬಗಳಾಗಿವೆ

8. **ವಿಜಯನಗರ ಸಾಮ್ರಾಜ್ಯದಲ್ಲಿ ಬೆಳೆಯುತ್ತಿದ್ದ ಪ್ರಮುಖ ಬೆಳೆಗಳಾವುವು?**

**ಉತ್ತರ:** ವಿಜಯನಗರ ಸಾಮ್ರಾಜ್ಯದಲ್ಲಿ ಅಕ್ಕಿ ,ಜೋಳ ,ಕಬ್ಬು ,ಹತ್ತಿ

9. **ಕೃಷ್ಣದೇವರಾಯನ ಕೃತಿಗಳನ್ನು ತಿಳಿಸಿ.**

**ಉತ್ತರ:** ಕೃಷ್ಣದೇವರಾಯನು 'ಜಾಂಬವತಿ ಕಲ್ಯಾಣ', 'ಮದಾಲಸ ಚರಿತಂ', 'ರಸಮಂಜರಿ' ಅಮುಕ್ತ ಮೌಲ್ಯ
ಎಂಬ ಕೃತಿಗಳನ್ನು ರಚಿಸಿದರು.

10. **ವಿಜಯನಗರಕ್ಕೆ ಭೇಟಿ ನೀಡಿದ ವಿದೇಶಿ ಪ್ರವಾಸಿಗರನ್ನು ಹೆಸರಿಸಿ.**

**ಉತ್ತರ:** ಅಬ್ದುಲ್ ಅಜಾಕ್ ,ಡೊಮಿಂಗೋ ಪೆಯಸ್ ,ಬಾರ್ಬೋಸ್

11. **ವಿಜಯನಗರ ಕಾಲದ ಪ್ರಮುಖ ದೇವಾಲಯಗಳಾವುವು?**

**ಉತ್ತರ:** ಹಂಪೆಯ ವಿರೂಪಾಕ್ಷ ದೇವಾಲಯದ ಕಲ್ಯಾಣ ಮಂಟಪ, ಹಜಾರ ರಾಮಸ್ವಾಮಿ ದೇವಾಲಯ, ವಿಠ್ಠಲಸ್ವಾಮಿ ದೇವಾಲಯ,
ಕಾಳಹಸ್ತಿ, ಶ್ರೀಶೈಲ, ತಿರುಪತಿ, ಚಿದಂಬರಂ, ಶ್ರೀರಂಗಂ, ಕುಂಭಕೋಣಂ, ಕಾಂಚಿ ವಿಜಯನಗರ

ಕಾಲದ ಪ್ರಮುಖ ದೇವಾಲಯಗಳಾಗಿವೆ

**ಈ ಕೆಳಕಂಡ ಪ್ರಶ್ನೆಗಳಿಗೆ ಗುಂಪಿನಲ್ಲಿ ಚರ್ಚಿಸಿ ಉತ್ತರಿಸಿ.**

**1. ಕೃಷ್ಣದೇವರಾಯನ ದಿಗ್ವಿಜಯಗಳನ್ನು ಕುರಿತು ಬರೆಯಿರಿ.**

**ಕೃಷ್ಣದೇವರಾಯ (ಸಾ.ಶ 1509–1529) :–**

- ಕೃಷ್ಣದೇವರಾಯನು ವಿಜಯನಗರ ಅರಸರಲ್ಲಿಯೇ ಅತ್ಯಂತ ಪ್ರಸಿದ್ಧ ದೊರೆಯಾಗಿದ್ದನು.
- ಅಸಾಮಾನ್ಯ ಪರಾಕ್ರಮಿ, ಚತುರ ಸೇನಾನಿ ಮತ್ತು ರಾಜತಾಂತ್ರಿಕ ನಿಪುಣನಾಗಿದ್ದ ಸಾ.ಶ. 1510ರಲ್ಲಿ ಉಮ್ಮತ್ತೂರಿನ ಪಾಳೆಯಗಾರ ಗಂಗರಾಜನಿಂದ ಶಿವನಸಮುದ್ರ ಕೋಟೆ ಗೆದ್ದ. ರಾಯಚೂರು ಕೋಟೆಯನ್ನು ಗೆದ್ದನು.
- ಬಿಜಾಪುರದ ಸುಲ್ತಾನನಿಂದ ಗೋವೆಯನ್ನು ವಶಪಡಿಸಿಕೊಳ್ಳುವಲ್ಲಿ ಪೋರ್ಚುಗೀಸರಿಗೆ ಸಹಾಯ ಮಾಡಿದನು.
- ಸಾ.ಶ. 1513 ರಲ್ಲಿ ಉದಯಗಿರಿ ಕೋಟೆಯನ್ನು ವಶಪಡಿಸಿಕೊಂಡ.
- ಸಾ.ಶ. 1518 ಕಳಿಂಗದ ದೊರೆ ಗಜಪತಿ ಪ್ರತಾಪರುದ್ರನನ್ನು ಸೋಲಿಸಿ ರಾಜಧಾನಿ ಕಟಕ್ ಅನ್ನು ವಶಪಡಿಸಿಕೊಂಡನು ಹಾಗೂ ಗಜಪತಿಯ ಮಗಳಾದ ಜಗನ್ಮೋಹಿನಿಯನ್ನು ಮದುವೆಯಾದನು.
- ಬಿರುದುಗಳು: 'ಯವನ ರಾಜ್ಯ ಪ್ರತಿಷ್ಠಾಪನಾಚಾರ್ಯ', ಕನ್ನಡ ರಾಜ್ಯ ರಮಾರಮಣ, ಮತ್ತು ಆಂಧ್ರ ಭೋಜ
- ಈತನ ಆಸ್ಥಾನಕ್ಕೆ ಭೇಟಿ ನೀಡಿದ ಡೊಮಿಂಗೊ ಪೆಯಸ್ "ಕೃಷ್ಣದೇವರಾಯನು ಸೌಮ್ಯ ಸ್ವಭಾವದ ವ್ಯಕ್ತಿತ್ವ ಹೊಂದಿದ್ದು, ದೃಢಕಾಯದವನಾಗಿದ್ದನು" ಎಂದಿದ್ದಾರೆ.

**2. ವಿಜಯನಗರ ಕಾಲದ ಸಾಹಿತ್ಯ ಕೃತಿಗಳನ್ನು ಪಟ್ಟಿ ಮಾಡಿ.**

- ಸಂಸ್ಕೃತ, ತೆಲುಗು ಮತ್ತು ಕನ್ನಡ ಭಾಷೆಗಳ ಸಾಹಿತ್ಯವು ವಿಶೇಷವಾಗಿ ಬೆಳೆಯಿತು.
- ವಿದ್ಯಾರಣ್ಯ – ಶಂಕರ ವಿಜಯ, ಸರ್ವದರ್ಶನ ಸಂಗ್ರಹ
- ಸಾಯಣಾಚಾರ್ಯ : 'ವೇದಾರ್ಥಪ್ರಕಾಶ' ಮತ್ತು 'ಆಯುರ್ವೇದ ಸುಧಾನಿಧಿ'
- ಗಂಗಾದೇವಿ – 'ಮಧುರಾ ವಿಜಯಂ'
- ಪ್ರೌಢದೇವರಾಯ – ಮಹಾನಾಟಕ 'ಸುಧಾನಿಧಿ'
- ಕೃಷ್ಣದೇವರಾಯ – 'ಜಾಂಬವತಿ ಕಲ್ಯಾಣ', 'ಮದಾಲಸ ಚರಿತಂ', 'ರಸಮಂಜರಿ' ಆಮುಕ್ತಮಾಲ್ಯ
- ಕನ್ನಡ ಭಾಷೆಗೆ ಸಂಬಂಧಿಸಿದಂತೆ ಕುಮಾರವ್ಯಾಸ – 'ಗದುಗಿನ ಭಾರತ',
- ರತ್ನಾಕರವರ್ಣಿ – 'ಭರತೇಶ ವೈಭವ',
- ಚಾಮರಸ – 'ಪ್ರಭುಲಿಂಗಲೀಲೆ'

- ಲಕ್ಕಣ್ಣ ದಂಡೇಶ – 'ಶಿವತತ್ವ ಚಿಂತಾಮಣಿ',
- ಭೀಮ ಕವಿಯ 'ಬಸವ ಪುರಾಣ'
- ಅಷ್ಟ ದಿಗ್ಗಜರು – ಅಲ್ಲಸಾನಿ ಪೆದ್ದಣ್ಣ, ನಂದಿ ತಿಮ್ಮಣ್ಣ, ಶ್ರೀನಾಥ, ಸೂರಣ್ಣ, ತೆನಾಲಿ ರಾಮಕೃಷ್ಣ

**XIII ಈ ಕೆಳಗಿನ 'ಎ' ಪಟ್ಟಿಗೆ ಸಂಬಂಧಿಸಿದ 'ಬಿ' ಪಟ್ಟಿಯಲ್ಲಿನ ವಿಷಯಗಳನ್ನು ಹೊಂದಿಸಿ ಬರೆಯಿರಿ.**

| ಎ | ಬಿ | ಉತ್ತರ: |
|---|---|---|
| ಗಂಗಾದೇವಿ | ಆಂಧ್ರಭೋಜ | **ಮಧುರಾ ವಿಜಯಂ** |
| ಎರಡನೆಯ ದೇವರಾಯ | ಮಧುರಾ ವಿಜಯಂ | **ಗಜಬೇಂಟೆಗಾರ** |
| ಕೃಷ್ಣದೇವರಾಯ | ವಿದ್ಯಾಶಂಕರ ದೇವಾಲಯ | **ಆಂಧ್ರಭೋಜ** |
| ಶೃಂಗೇರಿ | ಗಜಬೇಂಟೆಗಾರ | **ವಿದ್ಯಾಶಂಕರ ದೇವಾಲಯ** |

## ಅಧ್ಯಾಯ –2 ಬಹಮನಿ ಆದಿಲ್ ಷಾಹಿಗಳು

### ಪ್ರಶ್ನೆಗಳು ಮತ್ತು ಉತ್ತರಗಳು:

**XI ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿ.**

1. ಬಹಮನಿ ಸಾಮ್ರಾಜ್ಯವು____________ ರಲ್ಲಿ ಸ್ಥಾಪನೆಯಾಯಿತು.

**ಉತ್ತರ: 1347**

2. ಕಲಬುರಗಿ____________ ಸುಲ್ತಾನರ ರಾಜಧಾನಿಯಾಗಿತ್ತು.

ಉತ್ತರ: **ಬಹಮನಿ**

3. ಫಿರೋಜ್ ಷಾ ಸುಲ್ತಾನನು ಭೀಮಾ ನದಿಯ ದಂಡೆಯ ಮೇಲೆ ________ ನಗರವನ್ನು ನಿರ್ಮಿಸಿದನು. **ಉತ್ತರ: ಫಿರೋಜಾಬಾದ್**

4. ಮಹಮದ್ ಗವಾನನು____________ ಅಲ್ಲಿ ಮದರಸವನ್ನು ಕಟ್ಟಿಸಿದನು.

**ಉತ್ತರ: ಬೀದರ್**

5.ಬರೀದ್ ಷಾಹಿ ಮನೆತನದ ಸ್ಥಾಪಕ________

**ಉತ್ತರ: ಖಾಸಿಂಬರೀದ್**

6. ಗೋಲ್ಕೊಂಡದ ಕುತಬ್ ಷಾಹಿ ರಾಜ್ಯದ ಸ್ಥಾಪಕ_________ **ಉತ್ತರ: ಖುಲಿಕುತುಬ್ ಷಾ**

7. ಇಮಾದ್ ಷಾಹಿ ಮನೆತನದ ಸ್ಥಾಪಕ_________ **ಉತ್ತರ: ಫಿತಾ–ಉಲ್ಲಾ**

**XII ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

**1. ಬಹಮನಿ ಮನೆತನದ ಸ್ಥಾಪಕನು ಯಾರು?**

**ಉತ್ತರ:** ಅಲ್ಲಾವುದ್ದೀನ್ ಹಸನ್ ಗಂಗು ಬಹಮನ್ ಷಾ

**2. ಮಹಮದ್ ಗವಾನ್ ಯಾರು?**

**ಉತ್ತರ:** ಪರ್ಷಿಯನ್ ಮೂಲದವನಾಗಿದ್ದ ಮಹಮದ್ ಗವಾನ್ 3ನೇ ಮಹಮದ್ ಷಾ ಸುಲ್ತಾನನ ಮುಖ್ಯ ಮಂತ್ರಿಯಾಗಿದ್ದನು

**3. ಸೋಲಾಖಾಂಬ್ ಮಸೀದಿ ಎಲ್ಲಿದೆ?**

**ಉತ್ತರ:** ಸೋಲಾಖಾಂಬ್ ಮಸೀದಿ ಬೀದರ್‌ನಲ್ಲಿದೆ

**4. ಆದಿಲ್‌ಷಾಹಿ ಸುಲ್ತಾನರಲ್ಲಿ ಗಣ್ಯನು ಯಾರು?**

**ಉತ್ತರ:** ಆದಿಲ್‌ಷಾಹಿ ಸುಲ್ತಾನರಲ್ಲಿ ಗಣ್ಯನು ಎರಡನೇ ಇಬ್ರಾಹಿಂ ಆದಿಲ್ ಷಾ

**5. ದಕ್ಷಿಣ ಭಾರತದ ತಾಜ್‌ಮಹಲ್ ಎಂದು ಯಾವ ಸ್ಮಾರಕವನ್ನು ಕರೆಯುತ್ತಾರೆ?**

**ಉತ್ತರ:** ದಕ್ಷಿಣ ಭಾರತದ ತಾಜ್‌ಮಹಲ್ ಎಂದು ಇಬ್ರಾಹಿಂ ರೋಜಾ ಸ್ಮಾರಕವನ್ನು ಕರೆಯುತ್ತಾರೆ

**6. ಗೋಲಗುಮ್ಮಟ ಏಕೆ ಪ್ರಸಿದ್ಧವಾಗಿದೆ?**

**ಉತ್ತರ:** ಗೋಲಗುಮ್ಮಟ ಒಳ ಭಾಗದಲ್ಲಿ 'ಪಿಸುಗುಟ್ಟುವ 'ಮೊಗಸಾಲೆ ಇರುವುದರಿಂದ ಗೋಲಗುಮ್ಮಟ ಪ್ರಸಿದ್ಧವಾಗಿವೆ

**7. ಜಗದ್ಗುರು ಬಾದಾಷಾ ಎಂಬ ಬಿರುದು ಯಾರಿಗಿತ್ತು?**

**ಉತ್ತರ:** ಜಗದ್ಗುರು ಬಾದಾಷಾ ಎಂಬ ಬಿರುದು ಎರಡನೇ ಇಬ್ರಾಹಿಂಗೆ ಇತ್ತು

**ಖಖಖ ಈ ಕೆಳಗಿನ ಪ್ರಶ್ನೆಗಳಿಗೆ ಗುಂಪಿನಲ್ಲಿ ಚರ್ಚಿಸಿ ಉತ್ತರಿಸಿ.**

**1. ಮಹಮದ್ ಗವಾನನ ಸಾಧನೆಗಳನ್ನು ತಿಳಿಸಿರಿ.**

• ಮಹಮದ್‌ಗವಾನನು ವಿಜಯನಗರ ಸಾಮ್ರಾಜ್ಯದಿಂದ ಹುಬ್ಬಳ್ಳಿ, ಬೆಳಗಾವಿ ಮತ್ತು ಗೋವಾ ಪ್ರದೇಶಗಳನ್ನು ವಶಪಡಿಸಿಕೊಂಡನು.

• ಆಡಳಿತವು ಇಸ್ಲಾಮೀ ಕಾನೂನುಗಳನ್ನು ಆಧರಿಸಿತ್ತು.

• ಕಂದಾಯ ಮತ್ತು ಅಂಚೆ ವ್ಯವಸ್ಥೆಯನ್ನು ಚುರುಕುಗೊಳಿಸಿದನು.

• ಭೂಮಿಯ ಫಲವತ್ತತೆ, ನೀರಾವರಿ ಸೌಲಭ್ಯಗಳನ್ನು ಗಮನಿಸಿ, ಕಂದಾಯವನ್ನು ನಿಗದಿ ಮಾಡಿದನು. ಕಂದಾಯವನ್ನು ನಗದು ರೂಪದಲ್ಲಿ ಮಾತ್ರ ಸಂಗ್ರಹಿಸಲಾಗುತ್ತಿತ್ತು.

• ಜನರಿಗೆ ಕಿರುಕುಳ ಕೊಡುವ ತೆರಿಗೆಗಳನ್ನು ರದ್ದುಪಡಿಸಿದನು.

• ಸ್ವತಃ ವಿದ್ವಾಂಸನಾಗಿದ್ದ ಮಹಮದ್ ಗವಾನ್ **ಬೀದರ್‌ನಲ್ಲಿ ಮದರಸಾ (ಮಹಾವಿದ್ಯಾಲಯ) ಸ್ಥಾಪಿಸಿದನು.** ಇದು ಇಸ್ಲಾಂ ಧರ್ಮ ಮತ್ತು ಕಾನೂನು ಶಿಕ್ಷಣವನ್ನು ಪ್ರೋತ್ಸಾಹಿಸಿತು. ಇಲ್ಲಿ ಖಗೋಳಶಾಸ್ತ್ರ, ಗಣಿತ, ಇತಿಹಾಸ ಮುಂತಾದವುಗಳ ಅಧ್ಯಯನ ಕೂಡ ನಡೆಯುತ್ತಿದ್ದವು.

**2. ಐದು ಷಾಹಿ ಮನೆತನಗಳನ್ನು ಹೆಸರಿಸಿರಿ.**

1. ವಿಜಯಪುರ(ಬಿಜಾಪುರ)ದ ಆದಿಲ್ ಷಾಹಿ.
2. ಬೀದರ್‌ನ ಬರೀದ್ ಷಾಹಿ
3. ಗೋಲ್ಕಂಡದ ಕುತುಬ್ ಷಾಹಿ
4. ಅಹಮದ್ ನಗರದ ನಿಜಾಂ ಷಾಹಿ
5. ಬೀರಾರನ ಇಮಾದ್ ಷಾಹಿ

**3. ಎರಡನೇ ಇಬ್ರಾಹಿಂ ಆದಿಲ್ ಷಾ ಧರ್ಮ ಸಹಿಷ್ಣು ಸುಲ್ತಾನನಾಗಿದ್ದನು ಎಂಬುದನ್ನು ಚರ್ಚಿಸಿ.**

- ಈತನಿಗೆ 'ಜಗದ್ಗುರು ಬಾದಾಷಾ' ಎಂಬ ಬಿರುದು ಇತ್ತು.

- ಧರ್ಮ ಸಹಿಷ್ಣು ಸುಲ್ತಾನನಾಗಿದ್ದನು. ಅನೇಕ ಹಿಂದೂ ವಿದ್ವಾಂಸರು, ಕವಿಗಳು, ಮತ್ತು ಸಂಗೀತಗಾರರಿಗೆ ಆಶ್ರಯ ನೀಡಿದ್ದನು. ತನ್ನ ಅರಮನೆ ಕೋಟೆಯಲ್ಲಿನ ದೇವಾಲಯಗಳನ್ನು ದುರಸ್ತಿ ಮಾಡಿಸಿ ಪೂಜೆಗೆ ವ್ಯವಸ್ಥೆ ಮಾಡಿದ್ದನು.
- ಉರ್ದು ಭಾಷೆಯಲ್ಲಿ "ಕಿತಾಬ್-ಇ- ನವರಸ್" ಎಂಬ ಸಂಗೀತ ಪುಸ್ತಕವನ್ನು ಬರೆದನು.
- ಈ ಕೃತಿ ಹಿಂದೂ ದೇವತೆಗಳಾದ ಸರಸ್ವತಿ, ಗಣಪತಿ, ಭೈರವ ಮುಂತಾದವರ ಸ್ತುತಿಯಿಂದ ಆರಂಭವಾಗುತ್ತದೆ.
- ಇವನು ಸ್ವತಃ ಒಳ್ಳೆಯ ಸಂಗೀತಗಾರನಾಗಿದ್ದನು.
- ಭವ್ಯ ವಾಸ್ತುಶಿಲ್ಪವಾದ 'ಇಬ್ರಾಹಿಂ ರೋಜಾ' ಇವನದೇ ರಚನೆಯಾಗಿದೆ..

**IV ಈ ಕೆಳಗಿನ 'ಎ' ಪಟ್ಟಿಗೆ ಸಂಬಂಧಿಸಿದ 'ಬಿ' ಪಟ್ಟಿಯಲ್ಲಿನ ವಿಷಯಗಳನ್ನು ಹೊಂದಿಸಿ ಬರೆಯಿರಿ.**

| ಎ | ಬಿ | ಉತ್ತರ: |
|---|---|---|
| ಆದಿಲ್ ಷಾಹಿ | ಅಹಮದ್‌ನಗರ | **ವಿಜಯಪುರ** |
| ಕುತಬ್ ಷಾಹಿ | ಬೀರಾರ್ | **ಗೋಲ್ಕಂಡ** |
| ನಿಜಾಮ್ ಷಾಹಿ | ವಿಜಯಪುರ | **ಅಹಮದ್‌ನಗರ** |
| ಇಮಾದ್ ಷಾಹಿ | ಬೀದರ್ | **ಬೀರಾರ್** |
| ಬರೀದ್ ಷಾಹಿ | ಗೋಲ್ಕಂಡ | **ಬೀದರ್** |

## ಅಧ್ಯಾಯ -3: ಭಕ್ತಿ ಪಂಥ ಹಾಗೂ ಸೂಫಿ ಪರಂಪರೆ

### ಪ್ರಶ್ನೆಗಳು ಮತ್ತು ಉತ್ತರಗಳು:

**I ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿ.**

1. ಅಕ್ಕಮಹಾದೇವಿಯವರ ವಚನದ ಅಂಕಿತನಾಮ________

**ಉತ್ತರ: ಚೆನ್ನಮಲ್ಲಿಕಾರ್ಜುನ**

2. ಪುರಂದರದಾಸರು__________ ಆಸ್ಥಾನದಲ್ಲಿ ಇದ್ದರು.

**ಉತ್ತರ: ಕೃಷ್ಣದೇವರಾಯ**

3. 'ಆದಿಕೇಶವ' ಎಂಬುದು__________ ಅಂಕಿತನಾಮ.

**ಉತ್ತರ: ಕನಕದಾಸ**

**4.** ಕರ್ನಾಟಕದ ಕಬೀರ ಎಂದು__________ ಅವರನ್ನು ಕರೆಯುತ್ತಾರೆ.

**ಉತ್ತರ: ಶಿಶುನಾಳ ಷರೀಫ**

**5.** ಚೈತನ್ಯರ ಮೊದಲ ಹೆಸರು_________ **ಉತ್ತರ: ವಿಶ್ವಂಬರ**

**6.** ಸೂಫಿ ಸಂತ ಖ್ವಾಜ ಬಂದೇನವಾಜರಿಗಿದ್ದ ಇನ್ನೊಂದು ಹೆಸರು_______

**ಉತ್ತರ: ಗೇಸುದರಾಜ್**

**II ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

**1. ಆಂಡಾಳ್‌ರ ಮೂಲ ಹೆಸರೇನು?** **ಉತ್ತರ:** ಆಂಡಾಳ್‌ರ ಮೂಲ ಗೋದಾದೇವಿ

**2. ಅಕ್ಕಮಹಾದೇವಿ ಎಲ್ಲಿ ಜನಿಸಿದರು?**

**ಉತ್ತರ:** ಅಕ್ಕಮಹಾದೇವಿ ಶಿವಮೊಗ್ಗ ಜಿಲ್ಲೆಯ ಉಡುತಡಿಯಲ್ಲಿ ಜನಿಸಿದರು

**3. ಕರ್ನಾಟಕ ಸಂಗೀತದ ಪಿತಾಮಹ ಯಾರು?**

**ಉತ್ತರ:** ಕರ್ನಾಟಕ ಸಂಗೀತದ ಪಿತಾಮಹ ಪುರಂದರದಾಸ

**4. ಕನಕದಾಸರ ತಂದೆ–ತಾಯಿಗಳನ್ನು ಹೆಸರಿಸಿರಿ.**

**ಉತ್ತರ:** ಕನಕದಾಸರ ತಂದೆ– ಬೀರಪ್ಪ ತಾಯಿ–ಬಚ್ಚಮ್ಮ

**5. ಕನ್ನಡದ ಮೊದಲ ಮುಸ್ಲಿಂ ಕವಿ ಯಾರು?**

**ಉತ್ತರ:** ಕನ್ನಡದ ಮೊದಲ ಮುಸ್ಲಿಂ ಕವಿ ಶಿಶುನಾಳ ಷರೀಫ

**5. ಸಿಖ್ಖರ ಪವಿತ್ರ ಗ್ರಂಥ ಯಾವುದು?**

**ಉತ್ತರ:** ಸಿಖ್ಖರ ಪವಿತ್ರ ಗ್ರಂಥ 'ಗ್ರಂಥ ಸಾಹೀಬ್'

**6. ಕಲಿಯುಗದ ರಾಧಾ ಎಂದು ಯಾರನ್ನು ಕರೆಯುತ್ತಿದ್ದರು?**

**ಉತ್ತರ:** ಕಲಿಯುಗದ ರಾಧಾ ಎಂದು ಮೀರಾಬಾಯಿಯನ್ನು ಕರೆಯುತ್ತಿದ್ದರು

**7. ಸೂಫಿ ಪದದ ಅರ್ಥವೇನು?**

**ಉತ್ತರ:** ಸೂಫಿ ಎಂಬ ಪದ 'ಸಾಫ್'ಎಂಬ ಪದದಿಂದ ಬಂದಿದೆ.ಸಾಫ್ ಎಂದರೆ ಶುದ್ಧಿ ಅಥವಾ ಶುಚಿ ಎಂದರ್ಥ.

**8. ಭಾರತದ ಸೂಫಿ ಸಂತರು ಯಾರ್‍ಯಾರು?**

**ಉತ್ತರ:** ಭಾರತದ ಸೂಫಿ ಸಂತರೆಂದರೇ ನಿಜಾಮುದ್ದೀನ್ ಔಲಿಯ ಖ್ವಾಜಾ ಬಂದೇ ನವಾಜ್

**9. ಚಿಸ್ತಿ ಪಂಗಡದ ಸ್ಥಾಪಕ ಯಾರು?**

**ಉತ್ತರ:** ಚಿಸ್ತಿ ಪಂಗಡದ ಸ್ಥಾಪಕ ಮುಯಿನಿದ್ದೀನ್ ಚಿಸ್ತಿ

**III ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

**1. ಕಬೀರ್‌ದಾಸರು ನೀಡಿದ ಸಂದೇಶಗಳನ್ನು ತಿಳಿಸಿ.**

- ★ಅಲ್ಲಾ ಮತ್ತು ರಾಮ ಎಂಬುದು ಒಂದೇ ದೇವರ ಎರಡು ಹೆಸರುಗಳು. ಹಿಂದೂ ಮತ್ತು ಮುಸ್ಲಿಮರು ಒಂದು ಮಣ್ಣಿನಿಂದ ತಯಾರಿಸಿದ ಮಡಿಕೆಗಳು ಎಂದು ಬಣ್ಣಿಸಿದರು.
- ★ಕಬೀರರು ತಾನು ರಾಮ ಮತ್ತು ಅಲ್ಲಾಹನ ಮಗನೆಂದು ಸಾರಿದರು.
- ★ ದೇಹ ದಂಡನೆ, ಉಪವಾಸ, ತೀರ್ಥಯಾತ್ರೆ, ಪವಿತ್ರ ಸ್ಥಾನದಿಂದ ದೇವರನ್ನು ಕಾಣಲು ಸಾಧ್ಯವಿಲ್ಲ. ಆದರೆ ಪವಿತ್ರವಾದ ಭಕ್ತಿಮಾರ್ಗದಿಂದ ಮಾತ್ರ ದೇವರನ್ನು ಕಾಣಲು ಸಾಧ್ಯ ಎಂದರು.
- ★ತಮ್ಮ ತತ್ವಗಳನ್ನು ಜನರಿಗೆ, ಅರ್ಥವಾಗುವಂತೆ 'ದೋಹ' (ಎರಡು ಸಾಲಿನ ಪದ್ಯ) ಗಳೆಂಬ ಸಣ್ಣ ಕಾವ್ಯಗಳಲ್ಲಿ ಬೋಧಿಸಿದರು.
- ★ಇವರ ಅನುಯಾಯಿಗಳನ್ನು ಕಬೀರ್ ಪಂಥಿಗಳೆಂದು ಕರೆಯುತ್ತಾರೆ.

**2. ಗುರುನಾನಕರ ಬೋಧನೆಗಳೇನು?**

- ಸ್ತ್ರೀ–ಪುರುಷರ ಸಮಾನತೆಯನ್ನು ಅದು ಒತ್ತಿ ಹೇಳಿದೆ

- ವಿಶ್ವಕ್ಕೆ ದೇವರು ಒಬ್ಬನೆ, ಅವನು ಸತ್ಯ ನಿತ್ಯನೆಂದು ಸಾರಿದರು.
- ಜೀವನದಲ್ಲಿ ಮೋಸ, ವಂಚನೆ, ಕಳ್ಳತನ, ಹಿಂಸೆ ಮಾಡಬಾರದು, ಗುರುವಿನಿಂದ ಭಕ್ತಿಯನ್ನು, ಭಕ್ತಿಯಿಂದ ಮುಕ್ತಿಯನ್ನು ಪಡೆಯಬಹುದು ಎಂದರು.
- ಸಾಮಾಜಿಕ ಅನಿಷ್ಟಗಳಾದ ಮೂರ್ತಿಪೂಜೆ, ಜಾತಿಪದ್ಧತಿ, ಸತಿಪದ್ಧತಿ, ವಿರೋಧಿಸಿದರು.

**3. ಭಕ್ತಿ ಪಂಥದ ಪರಿಣಾಮಗಳು ಯಾವುವು?**

- ಹಿಂದೂ–ಮುಸ್ಲಿಂ ಸಾಮರಸ್ಯ ಸಾಧಿಸುವ ಪ್ರಯತ್ನ.
- ಸ್ಥಳೀಯ ಭಾಷೆಯಲ್ಲಿ ಸಾಹಿತ್ಯ ರಚನೆ
- ಭಾರತೀಯ ದೇಶಿ ಭಾಷೆಗಳು ಶ್ರೀಮಂತಗೊಂಡವು.

**4. ಸೂಫಿ ಪಂಥದ ಸಾರವನ್ನು ಸಂಗ್ರಹಿಸಿ ಬರೆಯಿರಿ.**

1) ದೇವರು ಒಬ್ಬನೇ ಆತನು ಸರ್ವಶಕ್ತನಾಗಿದ್ದಾನೆ. ನಾವೆಲ್ಲರೂ ಆತನ ಮಕ್ಕಳು ಎಂದು ಪ್ರತಿಪಾದಿಸಿತು.

2) ಉತ್ತಮ ಕಾಯಕ (ಕೆಲಸ)ಕ್ಕೆ ಮಹತ್ವ ನೀಡಿತು.

3) ಎಲ್ಲಾ ಮಾನವರು ಸಮಾನರು ಎಂದು ಸಾರಿತು.

4) ಜಾತಿಪದ್ಧತಿಯನ್ನು ವಿರೋಧಿಸಿತು.

**ಗಿ ಈ ಕೆಳಗಿನ 'ಎ' ಪಟ್ಟಿಗೆ ಸಂಬಂಧಿಸಿದ 'ಬಿ' ಪಟ್ಟಿಯಲ್ಲಿನ ವಿಷಯಗಳನ್ನು ಹೊಂದಿಸಿ ಬರೆಯಿರಿ.**

| ಎ | ಬಿ | ಉತ್ತರ: |
|---|---|---|
| ಗುರುನಾನಕ್ | ಸೂಫಿಸಂತ | **ಸಿಖ್‌ಧರ್ಮ** |
| ಚೈತನ್ಯ | ಸಿಖ್‌ಧರ್ಮ | **ಹರೇಕೃಷ್ಣ ಪಂಥ** |
| ನಿಜಾಮುದ್ದಿನ್‌ಔಲಿಯ | ಕಲಿಯುಗದ ರಾಧ | **ಸೂಫಿ ಪಂಥ** |
| ಮೀರಾಬಾಯಿ | ಹರೇಕೃಷ್ಣ ಪಂಥ | **ಕಲಿಯುಗದ ರಾಧ** |

## ಅಧ್ಯಾಯ –4 : ನಾಯಕರು, ಪಾಳೆಯಗಾರರು ಮತ್ತು ನಾಡ ಪ್ರಭುಗಳು

**ಪ್ರಶ್ನೆಗಳು ಮತ್ತು ಉತ್ತರಗಳು:**

**I ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿ.**

**1.** ಪೋರ್ಚುಗೀಸರನ್ನು ಸೋಲಿಸಲು ಹಿರಿಯ ವೆಂಕಟಪ್ಪ ನಾಯಕನಿಗೆ ನೆರವಾದ ಉಳ್ಳಾಲದ ರಾಣಿ__________ **ಉತ್ತರ: ಅಬ್ಬಕ್ಕ**

**2.** ರಾಣಿ ಚನ್ನಮ್ಮಾಜಿಯು ಮೊಗಲರನ್ನು ಹಿಮ್ಮೆಟ್ಟಿಸಿ__________ ಗೆ ರಕ್ಷಣೆ ನೀಡಿದಳು.
**ಉತ್ತರ: ರಾಜರಾಮನಿಗೆ**

**II ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

**1. ಕೆಳದಿಯ ಇತಿಹಾಸದಲ್ಲಿ ಪಡುಗಡಲೊಡೆಯ ಎಂಬುದಾಗಿ ಯಾರನ್ನು ಕರೆಯಲಾಗುತ್ತದೆ?**

**ಉತ್ತರ:** ಕೆಳದಿಯ ಇತಿಹಾಸದಲ್ಲಿ ಪಡುಗಡಲೊಡೆಯ ಎಂಬುದಾಗಿ ಶಿವಪ್ಪ ನಾಯಕನನ್ನು ಕರೆಯಲಾಗುತ್ತದೆ

**2. ಗೋವೆಯ ಕ್ರೈಸ್ತರನ್ನು ಶಿವಪ್ಪ ನಾಯಕನು ಹೇಗೆ ಪ್ರೋತ್ಸಾಹಿಸಿದನು?**

**ಉತ್ತರ:** ಗೋವೆಯ ಕ್ರೈಸ್ತರು ಕೃಷಿಯಲ್ಲಿ ನಿಪುಣರಾದುದರಿಂದ ಅವರಿಗೂ ತನ್ನ ರಾಜ್ಯಕ್ಕೆ ವಲಸೆ ಬರಲು ಪ್ರೋತ್ಸಾಹಿಸಿ, ಭೂಮಿ ಹಾಗೂ
ಇನ್ನಿತರ ಕಾಣಿಕೆಗಳನ್ನು ಕೊಟ್ಟನು.

**3. 'ಸಿಸ್ತು' ಎಂದರೇನು?**

**ಉತ್ತರ:** ಶಿವಪ್ಪ ನಾಯಕನು ಆಳವಡಿಸಿದ ಕಂದಾಯ ವ್ಯವಸ್ಥೆಯನ್ನು 'ಸಿಸ್ತು' ಎಂದು ಕರೆಯಲಾಗಿದೆ.

**4. ರಾಣಿ ಚನ್ನಮ್ಮಾಜಿ ಯಾರು?**

**ಉತ್ತರ:** ರಾಣಿ ಚನ್ನಮ್ಮಾಜಿ ಶಿವಪ್ಪ ನಾಯಕನ ಸೊಸೆಯಾಗಿ ,ಬ್ರಿಟಿಷರ ವಿರುದ್ಧ ಹೋರಾಡಿದವಳು

**ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

**1. ಹಿರಿಯ ವೆಂಕಟಪ್ಪ ನಾಯಕನ ಸಾಧನೆಗಳು ಯಾವುವು?**

**ಹಿರಿಯ ವೆಂಕಟಪ್ಪ ನಾಯಕ (ಸಾ.ಶ. 1582–1629) :**

★ ಇವನ ಕಾಲದಲ್ಲಿ ಕೆಳದಿ ರಾಜ್ಯವು ಪೂರ್ಣಸ್ವತಂತ್ರವಾಯಿತು.

★ ಈತನು ಕರಾವಳಿಯಲ್ಲಿ ಚಂದ್ರಗಿರಿ ನದಿಯವರೆಗೆ ವಿಜಯಯಾತ್ರೆ ಮಾಡಿದನು.

★ ಉಳ್ಳಾಲದ ರಾಣಿ ಅಬ್ಬಕ್ಕಳ ನೆರವಿನಿಂದ ಪೋರ್ಚುಗೀಸರನ್ನು ಮಂಗಳೂರಿನಲ್ಲಿ ಸೋಲಿಸಿದನು. ವಿಜಯಪುರದ ಆದಿಲ್‌ಷಾಹಿ ಸೇನೆಯನ್ನು ಸೋಲಿಸಿ ಹಾನಗಲ್‌ನಲ್ಲಿ ವಿಜಯಸ್ತಂಭ ಸ್ಥಾಪನೆ. ಎಲ್ಲಾ ಧರ್ಮಗಳಿಗೂ ಈತನು ಪ್ರೋತ್ಸಾಹ ನೀಡಿದನು.

**2. ಕೆಳದಿಯ ನಾಯಕರು ಮಾಡಿರುವ ಮುಖ್ಯ ಸಾಧನೆಗಳನ್ನು ಕುರಿತು ಬರೆಯಿರಿ.**

**ಶಿವಪ್ಪ ನಾಯಕ (ಸಾ.ಶ. 1645–1660): –**

- ಶಿವಪ್ಪ ನಾಯಕ ಕೆಳದಿಯ ಪ್ರಸಿದ್ಧ ಅರಸನಾಗಿದ್ದನು.
- ಬಿರುದು : 'ಪಡುಗಡಲೊಡೆಯ' : ಕರಾವಳಿಯ ಪೋರ್ಚುಗೀಸರ ಕೋಟೆ ವಶಮಾಡಿದ್ದಕ್ಕೆ .
- ಬೇಕಲ್ ಮತ್ತು ಚಂದ್ರಗಿರಿ (ಕೇರಳ), ಮಂಗಳೂರುಗಳಲ್ಲಿ ಭದ್ರವಾದ ಕೋಟೆ ಕಟ್ಟಿಸಿದನು.
- ಶಿವಪ್ಪ ನಾಯಕನು ಧರ್ಮ ಶ್ರದ್ಧೆಯುಳ್ಳವನಾಗಿದ್ದನು.
- ವ್ಯಾಪಾರದ ಅಭಿವೃದ್ಧಿಗಾಗಿ ಗೋವೆಯ ವ್ಯಾಪಾರಿ ವರ್ಗದವರಿಗೆ ತನ್ನ ರಾಜ್ಯದಲ್ಲಿ ಬಂದು ನೆಲೆಸಲು ಪ್ರೋತ್ಸಾಹ ನೀಡಿದನು.
- ಗೋವೆಯ ಕ್ರೈಸ್ತರು ಕೃಷಿಯಲ್ಲಿ ನಿಪುಣರಾದುದರಿಂದ ಅವರಿಗೂ ತನ್ನ ರಾಜ್ಯಕ್ಕೆ ವಲಸೆ ಬರಲು ಪ್ರೋತ್ಸಾಹಿಸಿ, ಭೂಮಿ ಹಾಗೂ ಇನ್ನಿತರ ಕಾಣಿಕೆಗಳನ್ನು ಕೊಟ್ಟನು.

- ಅವನು ತನ್ನ ರಾಜ್ಯದಲ್ಲಿ ಪಾದ್ರಿಗಳು ಮಾತ್ರ ಸ್ಥಳೀಯರೇ ಇರಬೇಕೆಂದು ಕಟ್ಟಳೆ ಮಾಡಿದ್ದನು.
- **ಶಿವಪ್ಪ ನಾಯಕನ ಸಿಸ್ತು :** ಶಿವಪ್ಪ ನಾಯಕನು ಆಳವಡಿಸಿದ ಕಂದಾಯ ವ್ಯವಸ್ಥೆಯನ್ನು 'ಸಿಸ್ತು' ಎಂದು ಕರೆಯಲಾಗಿದೆ.
- ಭೂಕಂದಾಯವನ್ನು ಭೂಮಿಯನ್ನು ಫಲವತ್ತತೆಯ ಆಧಾರದ ಮೇಲೆ ವರ್ಗೀಕರಿಸಲಾಗುತ್ತಿತ್ತು.
- ಬೆಳೆಯ 1/3 ಭಾಗವನ್ನು ಕಂದಾಯ ರೂಪದಲ್ಲಿ ಸಂಗ್ರಹಿಸಲಾಗುತ್ತಿತ್ತು.
- ಇಂಥ ಕ್ರಮಬದ್ಧ ಕಂದಾಯ ಪದ್ಧತಿಯನ್ನು 'ಶಿವಪ್ಪ ನಾಯಕನ ಸಿಸ್ತು' ಎನ್ನುವರು.
- ಸಿಸ್ತು ಮಲೆನಾಡಿನ ಸಮೃದ್ಧಿಗೆ ಕಾರಣವಾಯಿತು.

**I ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

**1. ಮತ್ತಿ ತಿಮ್ಮಣ್ಣನಾಯಕ ಯಾರು?**

**ಉತ್ತರ:** ಮತ್ತಿ ತಿಮ್ಮಣ್ಣನಾಯಕ ಚಿತ್ರದುರ್ಗ ಸಂಸ್ಥಾನದ ಮೊದಲ ಅರಸ

**2. ರಾಜವೀರ ಮದಕರಿನಾಯಕನನ್ನು ಕುರಿತು ಟಿಪ್ಪಣಿ ಬರೆಯಿರಿ.**

**ರಾಜಾವೀರ ಮದಕರಿ ನಾಯಕ (ಸಾ.ಶ. 1754–1779) :–**

- ಈತನು ಚಿತ್ರದುರ್ಗದ ನಾಯಕರಲ್ಲಿ ಅತ್ಯಂತ ಪ್ರಬಲ ಹಾಗೂ ಪ್ರಸಿದ್ಧನಾದವನು.
- ಕೇವಲ ಹನ್ನೆರಡು ವರ್ಷದವನಾಗಿದ್ದಾಗಲೇ ಸಿಂಹಾಸನವನ್ನೇರಿದನು.
- ಮದಕರಿಯು ಹೈದರಾಲಿಗೆ ಹಲವಾರು ಯುದ್ಧಗಳಲ್ಲಿ ಸಹಾಯ ಮಾಡಿದನು.
- ಆದರೆ ಮದಕರಿಯ ಸಾಹಸವನ್ನು ಮನಗಂಡ ಹೈದರಾಲಿ ಒಳಗೊಳಗೆ ಮತ್ಸರಪಟ್ಟನು.
- ಈತನನ್ನು ಹತ್ತಿಕ್ಕಲು ಚಿತ್ರದುರ್ಗದ ಏಳು ಸುತ್ತಿನ ಕೋಟೆಗೆ ಮುತ್ತಿಗೆ ಹಾಕಿದನು.
- ಒನಕೆ ಓಬವ್ವ ಅದನ್ನು ಕಾಪಾಡಿದಳು.
- ಇಂದಿಗೂ ಚಿತ್ರದುರ್ಗದ ಕೋಟೆಯ ಪಶ್ಚಿಮದಲ್ಲಿ ವೀರವನಿತೆ 'ಓಬವ್ವನ ಕಿಂಡಿ' ಇದೆ.
- ಸೋಲನ್ನೊಪ್ಪದ ಹೈದರಾಲಿಯು ಚಿತ್ರದುರ್ಗಕ್ಕೆ ಮತ್ತೊಮ್ಮೆ ಮುತ್ತಿಗೆಹಾಕಿದನು. ಭೀಕರ ಯುದ್ಧವೊಂದು ನಡೆದು ಮದಕರಿಗೆ ಸೋಲಾಯಿತು.
- ಮದಕರಿಯ ಆಳ್ವಿಕೆಯ ನಂತರ ಚಿತ್ರದುರ್ಗದ ನಾಯಕರ ವಂಶ ಅಳಿಯಿತು.

**3. ಒನಕೆ ಓಬವ್ವಳನ್ನು ನಾವು ಇಂದಿಗೂ ಏಕೆ ನೆನೆಯುತ್ತೇವೆ?**

ಹೈದರಾಲಿ ಚಿತ್ರದುರ್ಗದ ಕೋಟೆಯ ಮೇಲೆ ದಾಳಿ ಮಾಡಿದ. ಆದರೆ ಅಭೇದ್ಯವಾದ ಕೋಟೆಯನ್ನು ವಶಪಡಿಸಿಕೊಳ್ಳುವುದು ಅಸಾಧ್ಯದ ಮಾತಾಗಿತ್ತು. ಆದುದರಿಂದ ಆತನ ಸೈನಿಕರು ಕೋಟೆಯ ರಹಸ್ಯದಾರಿಯನ್ನು ಪತ್ತೆಮಾಡಿ, ಕಾವಲುಗಾರನಿಲ್ಲದ ವೇಳೆ ಕಳ್ಳಗಿಂಡಿಯಿಂದ ಕೋಟೆ ಪ್ರವೇಶಿಸಲು ಯತ್ನಿಸಿದರು.ಆ ವೇಳೆಗೆ ಕಾವಲುಗಾರನ ಹೆಂಡತಿ ಓಬವ್ವ ತನ್ನ ಒನಕೆಯಿಂದ ಅನೇಕ ಶತ್ರುಗಳನ್ನು ಕೊಂದು ಹಾಕಿದಳು. ಇಂದಿಗೂ ಚಿತ್ರದುರ್ಗದ ಕೋಟೆಯ ಪಶ್ಚಿಮದಲ್ಲಿ ವೀರವನಿತೆ 'ಓಬವ್ವನ ಕಿಂಡಿ' ಇದೆ

**4. ಚಿತ್ರದುರ್ಗ ನಾಯಕರು ಕಟ್ಟಿಸಿದ ಕೆರೆಗಳನ್ನು ಹೆಸರಿಸಿ.**

**ಉತ್ತರ:** ಭರಮಸಾಗರ ಮತ್ತು ಭೀಮಸಮುದ್ರ ಜಲಾಶಯ

**I ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

**1. ಸುರಪುರ ಸಂಸ್ಥಾನದ ಸ್ಥಾಪಕ ಯಾರು?**

**ಉತ್ತರ:** ಸುರಪುರ ಸಂಸ್ಥಾನದ ಸ್ಥಾಪಕ ಗಡ್ಡಿಪಿಡ್ಡನಾಯಕ

**2. ಸುರಪುರ ರಾಜಧಾನಿಯನ್ನು ನಿರ್ಮಿಸಿದ ಅರಸನ ಹೆಸರೇನು?**

**ಉತ್ತರ:** ಸುರಪುರ ರಾಜಧಾನಿಯನ್ನು ನಿರ್ಮಿಸಿದ ಅರಸ ಬಹರಿಪಿಡ್ಡನಾಯಕ

**II ಈ ಕೆಳಗಿನ ಪ್ರಶ್ನೆಗಳಿಗೆ ಗುಂಪಿನಲ್ಲಿ ಚರ್ಚಿಸಿ ಉತ್ತರಿಸಿರಿ.**

**1. ನಾಲ್ವಡಿ ವೆಂಕಟಪ್ಪ ನಾಯಕನ ಸಾಧನೆಯ ಕುರಿತು ಟಿಪ್ಪಣಿ ಬರೆಯಿರಿ.**

- ಈತ ಅಧಿಕಾರಕ್ಕೆ ಬಂದ ವೇಳೆಯಲ್ಲಿ ಉತ್ತರ ಭಾರತದಲ್ಲಿ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ (ಸಾ.ಶ 1857) ದ ಕಾವು ಸುರಪುರವನ್ನು ತಟ್ಟಿತು.
- ನಾಲ್ವಡಿ ವೆಂಕಟಪ್ಪ ನಾಯಕನು ದಕ್ಷಿಣ ಭಾರತದ ರಾಜರನ್ನೆಲ್ಲಾ ಒಂದುಗೂಡಿಸಿ ಬ್ರಿಟಿಷರ ವಿರುದ್ಧ ಸಮರ ಸಾರಲು ಹವಣಿಕೆಯಲ್ಲಿದ್ದನು.
- ಅರಬ್, ರೋಹಿಲ್ಲರನ್ನು ಸೈನ್ಯದಲ್ಲಿ ಸೇರಿಸಿಕೊಂಡನು. ಅಲ್ಲದೇ ಸೈನ್ಯವನ್ನು ತರಬೇತಿಗೊಳಿಸಲು ಪ್ರಾರಂಭಿಸಿದನು. ಬ್ರಿಟಿಷರ ಬಣವು 1858ರಲ್ಲಿ ಸುರಪುರದ ಮೇಲೆ ನುಗ್ಗಿತು. ಎರಡೂ ಬಣಗಳ ನಡುವೆ ಗುಂಡಿನ ಚಕಮಕಿ ನಡೆಯಿತು. ರೊಚ್ಚಿಗೆದ್ದ ಸುರಪುರ ಸೈನ್ಯವು ಸ್ಟೂಆರ್ಟ್‌ನ ಮೊಳೆ ಮುರಿಯಿತು. ನ್ಯೂಬೆರಿ ನೆಲಕ್ಕುರುಳಿದ.
- ಇತ್ತ, ನಾಲ್ವಡಿ ವೆಂಕಟಪ್ಪ ನಾಯಕ ವಿಶೇಷ ಅರಬ್, ರೋಹಿಲ್‌ರ ಸೈನ್ಯವನ್ನು ತರಲು ಹೈದರಾಬಾದ್‌ಗೆ ಪ್ರಯಾಣ ಬೆಳೆಸಿದನು. ಅತ್ತ, ಬ್ರಿಟಿಷ್ ಪಡೆಯು ಸುರಪುರದೊಳಗೆ ನುಗ್ಗಿತು. ಸುರಪುರವು ಪತನವಾಯಿತು. ಹೈದರಾಬಾದ್‌ನಲ್ಲಿ ಸುತ್ತಾಡುತ್ತಿದ್ದ ನಾಲ್ವಡಿ ವೆಂಕಟಪ್ಪ ನಾಯಕನನ್ನು ನೋಡಿದ ಹೈದರಾಬಾದ್ ನಿಜಾಮನ ಪ್ರಧಾನಮಂತ್ರಿ ಸಾಲಾರಜಂಗನು, ಬ್ರಿಟಿಷರಿಂದ ತನಗೇನಾದರು ಲಾಭ ಸಿಗಬಹುದೆಂದು ತಿಳಿದು ಆತನನ್ನು ಬ್ರಿಟಿಷರಿಗೆ ಒಪ್ಪಿಸಿದನು. ನಂತರ ನಾಲ್ವಡಿ ವೆಂಕಟಪ್ಪ ನಾಯಕನನ್ನು ಬ್ರಿಟಿಷರು ಮೋಸದಿಂದ ಗುಂಡಿಟ್ಟು ಕೊಂದರು. ಆತ್ಮಹತ್ಯೆ ಮಾಡಿಕೊಂಡನೆಂದು ಸುಳ್ಳು ಸುದ್ದಿ ಹಬ್ಬಿಸಿದರು.
- ನಂತರ ಸುರಪುರವನ್ನು ಬ್ರಿಟಿಷರು ಹೈದರಾಬಾದ್ ನಿಜಾಮನಿಗೆ ಕಾಣಿಕೆಯಾಗಿ ನೀಡಿದರು.

ಕೊನೆಗೆ 1948 ಸೆಪ್ಟೆಂಬರ್ 17ರಂದು ಹೈದರಾಬಾದ್ ನಿಜಾಮ ಸಂಸ್ಥಾನವು ಭಾರತದ ಒಕ್ಕೂಟವನ್ನು ಸೇರಿದ ಮೇಲೆ ಸುರಪುರವೂ ಭಾರತದ ಒಕ್ಕೂಟವನ್ನು ಸೇರಿತು

**2. ಸುರಪುರ ನಾಯಕರ ಸಾಂಸ್ಕೃತಿಕ ಕೊಡುಗೆಗಳನ್ನು ವಿವರಿಸಿರಿ.**

**ಉತ್ತರ:**

* ಇವರ ಕುಲದೇವರಾದ ತಿರುಪತಿ ವೆಂಕಟರಮಣ ಮತ್ತು ಗೋಪಾಲಸ್ವಾಮಿಯ ನಿತ್ಯ ಪೂಜೆಗಾಗಿ ಹಾಗೂ ಉತ್ಸವಗಳಿಗಾಗಿ ಜಹಗೀರು, ಇನಾಮು ಭೂಮಿಯನ್ನು ನೀಡಿದ್ದಾರೆ.
* ಇವರ ಆಸ್ಥಾನದಲ್ಲಿ ಅನೇಕ ಕಲಾಕಾರರು, ಗಾಯಕರು, ಚಿತ್ರಕಾರರು, ಶಿಲ್ಪಿಗಳು, ಸಾಹಿತಿಗಳು ಆಶ್ರಯಿತರಾಗಿದ್ದರು.
* ಅನೇಕ ಮೌಲ್ಯಯುತ ಸಾಹಿತ್ಯ ಕೃತಿಗಳು ಹೊರಬಂದಿವೆ. ಸರ್ವಧರ್ಮ ಸಹಿಷ್ಣುಗಳಾಗಿದ್ದರು.

**I ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

**1. ಯಲಹಂಕ ನಾಡಪ್ರಭುಗಳ ಮನೆತನದ ಸ್ಥಾಪಕ ಯಾರು?**

ಉತ್ತರ: ಯಲಹಂಕ ನಾಡಪ್ರಭುಗಳ ಮನೆತನದ ಸ್ಥಾಪಕ ರಣಭೈರೇಗೌಡ

**2. ಬೆಂಗಳೂರು ನಗರದ ಸ್ಥಾಪಕ ಯಾರು?**

**ಉತ್ತರ:** ಬೆಂಗಳೂರು ನಗರದ ಸ್ಥಾಪಕ ಹಿರಿಯ ಕೆಂಪೇಗೌಡ

**3. ಯಲಹಂಕ ನಾಡ ಪ್ರಭುಗಳ ರಾಜಧಾನಿಗಳನ್ನು ಹೆಸರಿಸಿ.**

**ಉತ್ತರ: ಉತ್ತರ:** ಯಲಹಂಕ ನಾಡ ಪ್ರಭುಗಳ ರಾಜಧಾನಿ ಬೆಂಗಳೂರು ಮತ್ತು ಮಾಗಡಿ

**4. ಇಮ್ಮಡಿ ಹಿರಿಯ ಕೆಂಪೇಗೌಡನಿಗಿದ್ದ ಬಿರುದು ಯಾವುದು?**

**ಉತ್ತರ:** ಇಮ್ಮಡಿ ಹಿರಿಯ ಕೆಂಪೇಗೌಡನಿಗಿದ್ದ ಬಿರುದು 'ಪ್ರಜಾವತ್ಸಲ'

**ಖಖ ಈ ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯದಲ್ಲಿ ಉತ್ತರಿಸಿರಿ.**

**1. ಹಿರಿಯ ಕೆಂಪೇಗೌಡನ ಸಾಧನೆಗಳು ಯಾವುವು?**

**ಹಿರಿಯ ಕೆಂಪೇಗೌಡ (ಸುಮಾರು ಸಾ.ಶ. 1532–1597) :–**

- ಹಿರಿಯ ಕೆಂಪೇಗೌಡ ಬೆಂಗಳೂರು ನಗರವನ್ನು ಸಾ.ಶ 1537ರಲ್ಲಿ ಸ್ಥಾಪಿಸಿದನು.
- ಈತನು ಬೆಂಗಳೂರಿನಲ್ಲಿ ಕೋಟೆಯೊಂದನ್ನು ಕಟ್ಟಿ ಅಲ್ಲಿಂದ ಆಳ್ವಿಕೆ ನಡೆಸಿದ.
- ಬೆಂಗಳೂರಿನ ಬಸವನಗುಡಿಯ ಬಸವನ ದೇವಾಲಯ, ಹಲಸೂರಿನ ಸೋಮೇಶ್ವರ ದೇವಾಲಯಗಳ , ಗವಿಗಂಗಾಧರೇಶ್ವರ ದೇವಾಲಯದವಿಸ್ತರಣೆ ಈತನ ಸಾಧನೆಯಾಗಿದೆ.
- ಬೆಂಗಳೂರಿನಲ್ಲಿ ಅನೇಕ ಕೆರೆಗಳನ್ನು ನಿರ್ಮಿಸಿದ ಕೀರ್ತಿ ಈತನಿಗೆ ಸಲ್ಲುತ್ತದೆ. ಅವುಗಳಲ್ಲಿ ಕೆಂಪಾಂಬುಧಿ ಕೆರೆ, ಧರ್ಮಾಂಬುಧಿ ಕೆರೆ, ಹಲಸೂರು ಕೆರೆ ಹಾಗೂ ಸಂಪಂಗಿ ಪ್ರಮುಖ.
- ಶಿವಗಂಗೆಯ ಗಂಗಾಧರೇಶ್ವರನ ಪರಮ ಭಕ್ತನಾದ ಹಿರಿಯ ಕೆಂಪೇಗೌಡನು ಅನೇಕ ಛತ್ರ ಮತ್ತು ಅಗ್ರಹಾರಗಳನ್ನು ಕಟ್ಟಿಸಿದನು. ಈತನ ಬಿರುದು: 'ಪ್ರಜಾವತ್ಸಲ'

**2. ಇಮ್ಮಡಿ ಕೆಂಪೇಗೌಡನನ್ನು ಕುರಿತು ಟಿಪ್ಪಣಿ ಬರೆಯಿರಿ.**

**ಇಮ್ಮಡಿ ಕೆಂಪೇಗೌಡ (ಸುಮಾರು ಸಾ.ಶ. 1597–1641) :–**

- ಇಮ್ಮಡಿ ಕೆಂಪೇಗೌಡನು ಹಿರಿಯ ಕೆಂಪೇಗೌಡನ ಮಗ. ಇವನ ಕಾಲದಲ್ಲಿ ವಿಜಯಪುರದ ಆದಿಲ್ ಷಾಹಿಗಳ ದಂಡನಾಯಕನಾದ ರಣದುಲ್ಲಾಖಾನ್ ಸಾ.ಶ 1638ರಲ್ಲಿ ಬೆಂಗಳೂರನ್ನು ವಶಪಡಿಸಿಕೊಂಡನು.
- ಅನಂತರ ಇಮ್ಮಡಿ ಕೆಂಪೇಗೌಡನು ಮಾಗಡಿಯನ್ನು ರಾಜಧಾನಿಯಾಗಿ ಮಾಡಿಕೊಂಡು ಮಾಗಡಿ ಮತ್ತು ಕುಣಿಗಲ್ ಸೀಮೆಗಳನ್ನು ಆಳತೊಡಗಿದನು.
- ಬೆಂಗಳೂರು ನಗರದ ಎಲ್ಲೆಕಟ್ಟುಗಳನ್ನು ಗುರುತಿಸಿ ನಾಲ್ಕು ಕಾವಲು ಗೋಪುರಗಳನ್ನು ಕಟ್ಟಿಸಿದನು. ಅವು ಉತ್ತರದಲ್ಲಿ–ಮೇಖ್ರಿವೃತ್ತ; ದಕ್ಷಿಣದಲ್ಲಿ–ಲಾಲ್‌ಬಾಗ್; ಪೂರ್ವದಲ್ಲಿ–ಅಲಸೂರು; ಮತ್ತು ಪಶ್ಚಿಮದಲ್ಲಿ–ಗವಿಗಂಗಾಧರೇಶ್ವರ.
- ಇವನ ಕಾಲದಲ್ಲಿ ಬೆಂಗಳೂರು ನೇಯ್ಗೆಯ ದೊಡ್ಡ ಕೇಂದ್ರವಾಗಿ ಬೆಳೆಯಿತು.
- ಮಾಗಡಿ, ಸಾವನದುರ್ಗ, ಹುಲಿಯೂರುದುರ್ಗ, ಹುತ್ರಿದುರ್ಗ ಕೋಟೆಗಳನ್ನು ಕಟ್ಟಿಸಿದನು.
- ತನ್ನ ತಂದೆಯಂತೆ ಇವನು ಕೂಡ ಹೊಸ ಹಳ್ಳಿಗಳು, ದೇವಾಲಯಗಳು ಮತ್ತು ಕೆರೆಗಳನ್ನು ನಿರ್ಮಾಣ ಮಾಡಿಸಿದನು.
- ಬಿರುದು: 'ನವ ಕವಿತಾ ಗುಂಭಪುಂಭವಾಣಿ' ಎಂಬ ಬಿರುದಿತ್ತು.

## ಅಧ್ಯಾಯ –5 ಮೈಸೂರು ಒಡೆಯರು

### ಪ್ರಶ್ನೆಗಳು ಮತ್ತು ಉತ್ತರಗಳು:

**೧) ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿ.**

1. ಮೈಸೂರು ಒಡೆಯರ ಆರಂಭಿಕ ರಾಜಧಾನಿ____________ ಆಗಿತ್ತು.

**ಉತ್ತರ: ಶ್ರೀರಂಗ ಪಟ್ಟಣ**

2. ಎರಡನೇ ಆಂಗ್ಲೋ ಮೈಸೂರು ಯುದ್ಧದ ನಂತರ ಬ್ರಿಟಿಷರು ಟಿಪ್ಪು ಸುಲ್ತಾನನೊಡನೆ ____________ ಒಪ್ಪಂದ ಮಾಡಿಕೊಂಡರು.

**ಉತ್ತರ: ಮಂಗಳೂರು ಶಾಂತಿ**

3. 'ಮೈಸೂರು ಹುಲಿ' ಎಂದು ಪ್ರಸಿದ್ಧರಾದ ವ್ಯಕ್ತಿ_________ **ಉತ್ತರ: ಟಿಪ್ಪು**

4. ಮುಮ್ಮಡಿ ಕೃಷ್ಣರಾಜ ಒಡೆಯರ ದಿವಾನರು____________

**ಉತ್ತರ: ಪೂರ್ಣಯ್ಯ**

5. ಮೈಸೂರು ಸಂಸ್ಥಾನದಲ್ಲಿ ನ್ಯಾಯವಿಧಾಯಕ ಸಭೆಯು__________ರಲ್ಲಿ ಆರಂಭವಾಯಿತು.

**ಉತ್ತರ: 1907 ರಲ್ಲಿ**

6. ಮೈಸೂರು ಸಂಸ್ಥಾನವನ್ನು ಗಾಂಧೀಜಿ ಅವರು __________ ಎಂದು ಬಣ್ಣಿಸಿದರು.

**ಉತ್ತರ: ರಾಮರಾಜ್ಯ**

7. 'ಭಾರತ ರತ್ನ' ಪ್ರಶಸ್ತಿ ಪಡೆದ ಮೊದಲ ಕನ್ನಡಿಗ____________

**ಉತ್ತರ: ಸರ್ .ಎಂ. ವಿಶ್ವೇಶ್ವರಯ್ಯ**

8. ಇರ್ವಿನ್ ಕಾಲುವೆಯನ್ನು ನಿರ್ಮಾಣ ಮಾಡಿಸಿದ ದಿವಾನರು_______________

**ಉತ್ತರ: ಸರ್ ಮಿರ್ಜಾ ಇಸ್ಮಾಯಿಲ್**

**ಖಖ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

**1. ಅಠಾರ ಕಛೇರಿಯನ್ನು ಯಾರು ಸ್ಥಾಪಿಸಿದರು?**

**ಉತ್ತರ:** ಅಠಾರ ಕಛೇರಿಯನ್ನು ಚಿಕ್ಕ ದೇವರಾಜ ಒಡೆಯರು ಸ್ಥಾಪಿಸಿದರು

**2. ದರಿಯಾ ದೌಲತ್ ಎಲ್ಲಿದೆ?**

**ಉತ್ತರ:** ದರಿಯಾ ದೌಲತ್ ಶ್ರೀರಂಗ ಪಟ್ಟಣದಲ್ಲಿದೆ.

**3. ಲಾಲ್‌ಬಾಗ್ ಉದ್ಯಾನವನ ಎಲ್ಲಿದೆ? ಅದನ್ನು ಆರಂಭಿಸಿದವರು ಯಾರು?**

**ಉತ್ತರ:** ಲಾಲ್‌ಬಾಗ್ ಉದ್ಯಾನವನ ಬೆಂಗಳೂರಿನಲ್ಲಿದೆ. ಅದನ್ನು ಹೈದರಾಲಿ ಆರಂಭಿಸಿದವರು

**4. ಟಿಪ್ಪುವಿನ ಮರಣಾನಂತರ ಮೈಸೂರಿನ ಸಿಂಹಾಸನ ಯಾರಿಗೆ ಸೇರಿತು?**

**ಉತ್ತರ:** ಟಿಪ್ಪುವಿನ ಮರಣಾನಂತರ ಮೈಸೂರಿನ ಸಿಂಹಾಸನ ಬ್ರಿಟಿಷರಿಗೆ ಸೇರಿತು

**5. ಮೈಸೂರು ಸಂಸ್ಥಾನದಲ್ಲಿ ಕಮಿಷನರ್ ಆಡಳಿತ ಏಕೆ ಜಾರಿಗೆ ಬಂತು?**

**ಉತ್ತರ:** ಮುಮ್ಮಡಿ ಕೃಷ್ಣರಾಜ ಒಡೆಯರು ಶಿವಮೊಗ್ಗ ದಂಗೆಯನ್ನು ಸರಿಯಾಗಿ ಹತ್ತಿಕ್ಕಲಿಲ್ಲವೆಂಬ ಕಾರಣದಿಂದ ಬ್ರಿಟಿಷರು ಕಮಿಷನರ್ ಆಡಳಿತ ಜಾರಿಗೆ ತಂದರು.

**6. ಮೈಸೂರಿನ ಪ್ರಮುಖ ಕಮಿಷನರ್‌ಗಳನ್ನು ಹೆಸರಿಸಿ?**

**ಉತ್ತರ:** ಮಾರ್ಕ್‌ಕಬ್ಬನ್ ಮತ್ತು ಲೂಯಿಬೆಂಥಾಮ್ ಬೌರಿಂಗ್,

**7. ಪುನರ್ದಾನ ಎಂದರೇನು?**

**ಉತ್ತರ:** ಕಮಿಷನರ್ ಆಡಳಿತದಿಂದ ಬ್ರಿಟಿಷರು ರಾಜ್ಯವನ್ನು ಚಾಮರಾಜ ಒಡೆಯರಿಗೆ ಪುನಃ ವಹಿಸಿಕೊಟ್ಟಿದ್ದನ್ನು ಪುರ್ನದಾನ ಎನ್ನುವರು

**8. ಪ್ರಜಾಪ್ರತಿನಿಧಿ ಸಭೆ ಯಾವಾಗ ಆರಂಭವಾಯಿತು?**

**ಉತ್ತರ:** ಪ್ರಜಾಪ್ರತಿನಿಧಿ ಸಭೆ 1881ರಲ್ಲಿ ಯಾವಾಗ ಆರಂಭವಾಯಿತು

**9. ಕನ್ನಡ ಸಾಹಿತ್ಯ ಪರಿಷತ್ತು ಎಲ್ಲಿದೆ? ಇದು ಯಾವಾಗ ಸ್ಥಾಪನೆಯಾಯಿತು?**

**ಉತ್ತರ:** ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರಿನಲ್ಲಿದೆ ಇದು 1915 ರಲ್ಲಿ ಸ್ಥಾಪನೆಯಾಯಿತು.

**10. ಅರಮನೆ ಸತ್ಯಾಗ್ರಹದ ನೇತೃತ್ವ ವಹಿಸಿದ್ದವರು ಯಾರು?**

**ಉತ್ತರ:** ಅರಮನೆ ಸತ್ಯಾಗ್ರಹದ ನೇತೃತ್ವ ವಹಿಸಿದ್ದವರು ಕೆ.ಸಿ ರೆಡ್ಡಿ

**III ಕೆಳಗಿನ ಪ್ರಶ್ನೆಗಳಿಗೆ ಗುಂಪಿನಲ್ಲಿ ಚರ್ಚಿಸಿ ಉತ್ತರಿಸಿ.**

**1. ಹೈದರಾಲಿಯ ಸಾಧನೆಗಳು ಯಾವುವು?**

**ಹೈದರಾಲಿ (ಸಾ.ಶ. 1761 –1782) :–**

- ಕೆಳದಿ ರಾಜರನ್ನು ಸೋಲಿಸಿದನು. ಅಲ್ಲಿನ ಅಪಾರವಾದ ಧನಕನಕಾದಿಗಳನ್ನು ವಶಪಡಿಸಿಕೊಂಡು ತನ್ನ ಧನಬಲವನ್ನು ಇನ್ನಷ್ಟು ಹೆಚ್ಚಿಸಿಕೊಂಡನು.
- ಚಿತ್ರದುರ್ಗ ಕೋಟೆಯನ್ನು ಪ್ರಯಾಸದಿಂದ ವಶಪಡಿಸಿಕೊಂಡನು.

•ಬ್ರಿಟಿಷರೊಡನೆ  ಒಂದನೇ ಮತ್ತು ಎರಡನೇ ಆಂಗ್ಲೋ ಮೈಸೂರು ಯುದ್ಧ ಮಾಡಿದನು.

•ಹೈದರಾಲಿ ಸಮಕಾಲೀನ ರಾಜಕೀಯವನ್ನು ಚೆನ್ನಾಗಿತಿಳಿದುಕೊಂಡಿದ್ದನು.

•ಇವನಿಗೆ ಓದುಬರಹ ಬರುತ್ತಿರಲಿಲ್ಲವಾದರೂ ಕನ್ನಡ ಸೇರಿದಂತೆ ಹಲವು ಭಾಷೆಗಳನ್ನು ಚೆನ್ನಾಗಿ ಬಲ್ಲವನಾಗಿದ್ದನು.

•ಇವನು ಮೈಸೂರು ರಾಜ್ಯದ ವಿಸ್ತಾರವನ್ನು ಇಮ್ಮಡಿಗೊಳಿಸಿದನು.

•ಶೂರ ಯೋಧನೂ ದಕ್ಷ ಆಡಳಿತಗಾರನೂ ಆಗಿದ್ದನು.

•ಬೆಂಗಳೂರಿನ ಸುಂದರ ಉದ್ಯಾನವನ ಲಾಲ್‌ಬಾಗ್ ಇವನಿಂದಲೇ ಆರಂಭವಾಯಿತು.

**2. ಮೂರನೆಯ ಮೈಸೂರು ಯುದ್ಧದ ಪರಿಣಾಮವೇನು?**

* ಮೂರನೆಯ ಆಂಗ್ಲೋ ಮೈಸೂರು ಯುದ್ಧದಲ್ಲಿ ಬ್ರಿಟಿಷರು ಕ್ರಮಣ ಮಾಡುತ್ತಾ ರಾಜಧಾನಿಯಾದ ಶ್ರೀರಂಗಪಟ್ಟಣವನ್ನು ಮುತ್ತಿಗೆ ಹಾಕಿದರು.
* ಬೇರೆ ಮಾರ್ಗ ತೋಚದೆ ಟಿಪ್ಪು ಬ್ರಿಟಿಷರೊಡನೆ ಶ್ರೀರಂಗಪಟ್ಟಣ ಶಾಂತಿ ಒಪ್ಪಂದ ಮಾಡಿಕೊಂಡನು.
* ಶಾಂತಿ ಒಪ್ಪಂದದಂತೆ ಇವನು ತನ್ನ ಅರ್ಧರಾಜ್ಯವನ್ನು ಬ್ರಿಟಿಷರಿಗೆ ಒಪ್ಪಿಸಿದನು.
* ಯುದ್ಧ ನಷ್ಟವಾಗಿ 330 ಲಕ್ಷ ರೂಪಾಯಿ ಪರಿಹಾರ ಧನವನ್ನು ಅವರಿಗೆ ನೀಡಬೇಕಾಯಿತು. ಅದನ್ನು ಕೊಡುವವರೆಗೆ ತನ್ನಿಬ್ಬರು ಮಕ್ಕಳನ್ನು ಬ್ರಿಟಿಷರಿಗೆ ಒತ್ತೆಯಾಳಾಗಿ ಕೊಡಬೇಕಾಯಿತು.
* ಯುದ್ಧದ ಪರಿಣಾಮವಾಗಿ ಟಿಪ್ಪು ಅವಮಾನಗೊಂಡನು.  ಬ್ರಿಟಿಷರನ್ನು ಭಾರತದಿಂದ ಹೊರದಬ್ಬಲು ದೃಢಸಂಕಲ್ಪ ಮಾಡಿದನು.
* ಇದು **ನಾಲ್ಕನೆಯ ಆಂಗ್ಲೋ ಮೈಸೂರು ಯುದ್ಧಕ್ಕೆ** ನಾಂದಿಯಾಯಿತು.

**3. ಟಿಪ್ಪು ಸುಲ್ತಾನನ ಸಾಧನೆಗಳು ಯಾವುವು?**

• ವಿಜ್ಞಾನ ಕ್ಷೇತ್ರದ ಸಾಧನೆಗಳ ಬಗ್ಗೆ ಅವನಿಗೆ ಉತ್ತಮ ತಿಳುವಳಿಕೆ ಇತ್ತು.

• ಅವನು ಒಳ್ಳೆಯ ಗ್ರಂಥಾಲಯವನ್ನು ಹೊಂದಿದ್ದನು.

• ಬೆಂಗಳೂರಿನ ಅರಮನೆ, ಶ್ರೀರಂಗಪಟ್ಟಣದ ಬೇಸಿಗೆ ಅರಮನೆ (ದರಿಯಾ ದೌಲತ್) ಕಟ್ಟಿಸಿದ.

• ರೇಷ್ಮೆ ವ್ಯವಸಾಯವನ್ನು ಜನಪ್ರಿಯಗೊಳಿಸಿದ.

• ಫ್ರೆಂಚ್ ಅಧಿಕಾರಿಗಳ ನೆರವಿನಿಂದ ತನ್ನ ಸೈನ್ಯವನ್ನು ಆಧುನಿಕವಾಗಿ ಸಜ್ಜುಗೊಳಿಸಿದನು.

• ಶ್ರೀರಂಗಪಟ್ಟಣದಲ್ಲಿ ಫಿರಂಗಿಗಳನ್ನು ಎರಕ ಹೊಯ್ಯುತ್ತಿದ್ದರು.

• ಟಿಪ್ಪು ರಾಕೆಟ್ ಬಳಸುವ ತಂತ್ರಜ್ಞಾನವನ್ನು ಕರಗತ ಮಾಡಿಕೊಂಡದ್ದು ಒಂದು ವಿಶೇಷ.

• ಟಿಪ್ಪು ಕೆಲವು ಹಿಂದೂ ದೇವಾಲಯಗಳಿಗೆ ದಾನದತ್ತಿಯನ್ನೂ ಶೃಂಗೇರಿ ಮಠಕ್ಕೆ ದೇಣಿಗೆಯನ್ನೂ ನೀಡಿದನು.

- ಭೂಹಿಡುವಳಿಯಲ್ಲಿ ಸುಧಾರಣೆ ಮಾಡಿ ರೈತರಿಗೆ ಸುಲಭ ಕಂತಿನ ಸಾಲ ನೀಡಿದ.
- ಶ್ರೀರಂಗಪಟ್ಟಣದಲ್ಲಿರುವ ಹೈದರಾಲಿಯ ಸಮಾಧಿ ಮತ್ತು ಜುಮ್ಮಾ ಮಸೀದಿ ನಿರ್ಮಿಸಿದ.
- ಶ್ರೀರಂಗಪಟ್ಟಣ ಮತ್ತು ಬೆಂಗಳೂರಿನಲ್ಲಿ ಟಂಕಶಾಲೆಗಳನ್ನು ನಿರ್ಮಿಸಿದನು.

**4. ನಾಲ್ವಡಿ ಕೃಷ್ಣರಾಜ ಒಡೆಯರ ಪ್ರಮುಖ ಸಾಧನೆಗಳನ್ನು ಪಟ್ಟಿ ಮಾಡಿ.**

- ಜೆ.ಎನ್. ಟಾಟಾ ಅವರು ಬೆಂಗಳೂರಿನಲ್ಲಿ ವಿಜ್ಞಾನ ಸಂಸ್ಥೆಯನ್ನು ಸ್ಥಾಪಿಸಲು 371 ಎಕರೆ ಭೂಮಿ ಹಾಗೂ ಐದು ಲಕ್ಷಕ್ಕೂ ಅಧಿಕ ಮೊತ್ತದ ಧನ ಸಹಾಯ ನೀಡಿದರು.
- 1907ರಲ್ಲಿ 'ನ್ಯಾಯ ವಿಧಾಯಕ ಸಭೆ'ಯನ್ನು ಸ್ಥಾಪಿಸಿ ಜನಪ್ರತಿನಿಧಿಗಳ ಮೂಲಕ ಜನರ ಸಮಸ್ಯೆಗಳನ್ನು ಚರ್ಚಿಸಲು ಅವಕಾಶ ಕಲ್ಪಿಸಿದರು.
- ಇಂದಿನ ಮೈಸೂರು ಅರಮನೆಯನ್ನು 1910ರಲ್ಲಿ ಪೂರ್ಣಗೊಳಿಸಿದರು.
- ಕೃಷ್ಣರಾಜಸಾಗರ (ಕೆ.ಆರ್.ಎಸ್) ಅಣೆಕಟ್ಟನ್ನು ನಿರ್ಮಾಣ ಮಾಡಿಸುವ ಮೂಲಕ ಸಂಸ್ಥಾನದಲ್ಲಿ ಕೃಷಿ ಅಭಿವೃದ್ಧಿಪಡಿಸಿದರು.
- 1911ರಲ್ಲಿ ಮೈಸೂರು ಸಂಪತ್ ಅಭ್ಯುದಯ ಪರಿಷತ್ತು (ದಿ ಮೈಸೂರು ಎಕನಾಮಿಕ್ ಕಾನ್ಫರೆನ್ಸ್) ಪ್ರಾರಂಭಿಸಿದರು.
- ಹಿಂದುಳಿದ ವರ್ಗಗಳಿಗೆ ಸರ್ಕಾರಿ ಸೇವೆಯಲ್ಲಿ ವಿಶೇಷ ಪ್ರಾತಿನಿಧ್ಯ ನೀಡುವ ಆಜ್ಞೆ ಹೊರಡಿಸಿದರು.
- ಮೊದಲ ಬಾರಿಗೆ ಸ್ತ್ರೀಯರಿಗೂ ಮತಾಧಿಕಾರ ನೀಡಲು ಅನುವು ಮಾಡಿದರು.
- ದಿವಾನರು : ಸರ್.ಎಂ. ವಿಶ್ವೇಶ್ವರಯ್ಯ ಹಾಗೂ ಸರ್. ಮಿರ್ಜಾ ಇಸ್ಮಾಯಿಲ್
- ನಾಲ್ವಡಿ ಅವರ ಮೈಸೂರು ಸಂಸ್ಥಾನವನ್ನು ಮಹಾತ್ಮ ಗಾಂಧೀಜಿ ಅವರು 'ರಾಮರಾಜ್ಯ'ವೆಂದು ಬಣ್ಣಿಸಿದರು. ನಾಲ್ವಡಿ ಅವರನ್ನು 'ರಾಜರ್ಷಿ' ಎಂದು ಕರೆದರು.

.

**5. ಸರ್ ಎಂ. ವಿಶ್ವೇಶ್ವರಯ್ಯನವರ ಸಾಧನೆಗಳು ಯಾವುವು?**

**ಸರ್. ಎಂ. ವಿಶ್ವೇಶ್ವರಯ್ಯ (ಸಾ.ಶ. 1912–1918) :**

- ಬಿರುದು: 'ಆಧುನಿಕ ಮೈಸೂರಿನ ಶಿಲ್ಪಿ ಮತ್ತು ನಿರ್ಮಾತೃ'
- ಪ್ರತಿಭಾವಂತ ಇಂಜನಿಯರ್ ಆಗಿದ್ದ ಇವರು 1909–1912ರ ವರೆಗೆ ಮೈಸೂರು ಸಂಸ್ಥಾನದ ಮುಖ್ಯ ಇಂಜನಿಯರ್ ಆಗಿ ಕಾರ್ಯನಿರ್ವಹಿಸಿದರು.
- ನಾಲ್ವಡಿ ಕೃಷ್ಣರಾಜ ಒಡೆಯರು ಇವರನ್ನು 1912 ರಲ್ಲಿ ಮೈಸೂರಿನ ದಿವಾನರನ್ನಾಗಿ ನೇಮಿಸಿಕೊಂಡರು.
- 'ಕೈಗಾರೀಕರಣ ಇಲ್ಲವೆ ವಿನಾಶ' ಎಂಬುದು ಸರ್. ಎಂ. ವಿಶ್ವೇಶ್ವರಯ್ಯನವರ ಪ್ರಸಿದ್ಧ ಘೋಷಣೆಯಾಗಿತ್ತು.

ಪ್ರಮುಖ ಕೈಗಾರಿಕೆಗಳು :

• ಭದ್ರಾವತಿಯಲ್ಲಿನ ಕಬ್ಬಿಣದ ಕಾರ್ಖಾನೆ, ಮೈಸೂರಿನಲ್ಲಿ ಗಂಧದ ಎಣ್ಣೆ ಕಾರ್ಖಾನೆ, ಬೆಂಗಳೂರಿನಲ್ಲಿ ಸಾಬೂನು ಕಾರ್ಖಾನೆ, ಕೇಂದ್ರ ಕೈಗಾರಿಕಾ ಕಾರ್ಯಗಾರ, ಚರ್ಮ ಹದ ಮಾಡುವ ಕಾರ್ಖಾನೆ ಹಾಗೂ ಲೋಹದ ಕೈಗಾರಿಕೆ ಸ್ಥಾಪನೆ.

• ವ್ಯಾಪಾರ ಹಾಗೂ ವಾಣಿಜ್ಯಕ್ಕೆ ಪ್ರೋತ್ಸಾಹ ನೀಡಲು ಬೆಂಗಳೂರಿನಲ್ಲಿ ಮೈಸೂರು ಛೇಂಬರ್ ಆಫ್ ಕಾಮರ್ಸ್ ಆಂಡ್ ಇಂಡಸ್ಟ್ರಿಯನ್ನು ಸ್ಥಾಪಿಸಲಾಯಿತು.

• ವ್ಯಾಪಾರ ಮತ್ತು ವಾಣಿಜ್ಯಗಳನ್ನು ಅಭಿವೃದ್ಧಿಪಡಿಸುವುದಕ್ಕಾಗಿ 1913 ರಲ್ಲಿ ಮೈಸೂರು ಬ್ಯಾಂಕನ್ನು ಸ್ಥಾಪಿಸಲಾಯಿತು.

• ಇವರು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಜಾರಿಗೊಳಿಸಿದರು.

• ತಾಂತ್ರಿಕ ಶಿಕ್ಷಣಕ್ಕೆ ಮಹತ್ವ ನೀಡಲಾಯಿತು.

• ಬೆಂಗಳೂರಿನ ಹೆಬ್ಬಾಳದಲ್ಲಿ ಕೃಷಿ ಶಾಲೆಯೊಂದನ್ನು ಸ್ಥಾಪಿಸಿದರು.

• 1916 ರಲ್ಲಿ ಮೈಸೂರು ವಿಶ್ವವಿದ್ಯಾಲಯ ಸ್ಥಾಪನೆ.

• 1915 ರಲ್ಲಿ ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಲಾಯಿತು.

• ಕೃಷ್ಣರಾಜ ಸಾಗರ ಆಣೆಕಟ್ಟೆಯ ನಿರ್ಮಾಣ ಕಾರ್ಯ ಇವರ ಕಾಲದಲ್ಲಿ ಮುಂದುವರೆದು 1932ರ ಹೊತ್ತಿಗೆ ಪೂರ್ಣಗೊಂಡಿತು.

•ಮೈಸೂರು-ಅರಸೀಕೆರೆ ಮತ್ತು ಬೌರಿಂಗ್‌ಪೇಟೆ-ಕೋಲಾರ ರೈಲ್ವೆ ಮಾರ್ಗಗಳನ್ನು ಹಾಕಲಾಯಿತು.

• ಬ್ರಿಟಿಷ್ ಸರಕಾರವು ಇವರ ಸೇವೆಗಾಗಿ 'ಸರ್' ಎಂಬ ಬಿರುದನ್ನು ನೀಡಿತು.

• 1955 ರಲ್ಲಿ ಭಾರತ ೯ರ್ಕಾರವು ಇವರಿಗೆ 'ಭಾರತ ರತ್ನ' ಪ್ರಶಸ್ತಿಯನ್ನು ನೀಡಿ ಗೌರವಿಸಿತು.

**IV ಈ ಕೆಳಗಿನ 'ಎ' ಪಟ್ಟಿಗೆ ಸಂಬಂಧಿಸಿದ 'ಬಿ' ಪಟ್ಟಿಯಲ್ಲಿನ ವಿಷಯಗಳನ್ನು ಹೊಂದಿಸಿ ಬರೆಯಿರಿ.**

| ಎ | ಬಿ | **ಉತ್ತರ** |
|---|---|---|
| ಚಿಕ್ಕದೇವರಾಜ ಒಡೆಯರ್ | ರಾಜರ್ಷಿ | **ನವಕೋಟಿ ನಾರಾಯಣ** |
| ಟಿಪ್ಪುಸುಲ್ತಾನ್ | ಭಾರತರತ್ನ | **ಮೈಸೂರುಹುಲಿ** |
| ನಾಲ್ವಡಿ ಕೃಷ್ಣರಾಜ ಒಡೆಯರ್ | ನವಕೋಟಿ ನಾರಾಯಣ | **ರಾಜರ್ಷಿ** |
| ಸರ್.ಎಂ. ವಿಶ್ವೇಶ್ವರಯ್ಯ | ಮೊದಲ ರಾಜ್ಯಪಾಲರು | **ಭಾರತರತ್ನ** |
| ಜಯಚಾಮರಾಜ ಒಡೆಯರ್ | ಮೈಸೂರುಹುಲಿ | **ಮೊದಲ ರಾಜ್ಯಪಾಲರು** |

## ಅಧ್ಯಾಯ -6: ದಿಲ್ಲಿಯ ಸುಲ್ತಾನರು

### ಪ್ರಶ್ನೆಗಳು ಮತ್ತು ಉತ್ತರಗಳು:

**I ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿ.**

1. ಮೊದಲ ತರೈನ್ ಯುದ್ಧದಲ್ಲಿ ಪೃಥ್ವೀರಾಜ ಚೌಹಾಣನಿಂದ ______________ ಸೋತನು.

**ಉತ್ತರ: ಮಹಮ್ಮದ್ ಘೋರಿ**

2. ಅಲ್ಲಾವುದ್ದೀನ್ ಖಿಲ್ಜಿಯು ದಿಲ್ಲಿಯಲ್ಲಿ__________ ಎಂಬ ರಾಜಧಾನಿಯನ್ನು ಕಟ್ಟಿಸಿದನು.

**ಉತ್ತರ:** ಸಿರಿ

3. ಇಬ್ರಾಹಿಂ ಲೂದಿಯನ್ನು ಮೊದಲ ಪಾಣಿಪತ್ ಕದನದಲ್ಲಿ ಸೋಲಿಸಿದವನು__________

**ಉತ್ತರ: ಮೊಗಲ್ ದೊರೆ ಬಾಬರ್**

**II ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

**1. ಮಹಮದ್ ಘೋರಿಯು ಎರಡನೇ ತರೈನ್ ಯುದ್ಧದಲ್ಲಿ ಯಾರ ವಿರುದ್ಧ ಜಯ ಸಾಧಿಸಿದನು?**

**ಉತ್ತರ:** ಮಹಮದ್ ಘೋರಿಯು ಎರಡನೇ ತರೈನ್ ಯುದ್ಧದಲ್ಲಿ ಪೃಥ್ವಿ ರಾಜನನ್ನು ಸೋಲಿಸಿ ಜಯ ಸಾಧಿಸಿದನು

**2. ಕುತುಬ್ ಮಿನಾರನ್ನು ಕಟ್ಟಿಸಿದವರು ಯಾರು?**

**ಉತ್ತರ:** ಕುತುಬ್ ಮಿನಾರನ್ನು ಕಟ್ಟಿಸಿದವರು ಕುತ್ಬುದ್ದೀನ್ ಐಬಕ್

**3. ದಿಲ್ಲಿ ಸುಲ್ತಾನರ ಕಾಲದಲ್ಲಿ ಆಳ್ವಿಕೆ ನಡೆಸಿದ ಏಕೈಕ ಮಹಿಳೆ ಯಾರು?**

**ಉತ್ತರ:** ದಿಲ್ಲಿ ಸುಲ್ತಾನರ ಕಾಲದಲ್ಲಿ ಆಳ್ವಿಕೆ ನಡೆಸಿದ ಏಕೈಕ ರಜಿಯಾ ಸುಲ್ತಾನಾ

**4. ದಕ್ಷಿಣ ಭಾರತದ ಮೇಲೆ ದಾಳಿ ನಡೆಸಿದ ಅಲ್ಲಾವುದ್ದೀನ್ ಖಿಲ್ಜಿಯ ದಂಡನಾಯಕ ಯಾರು?**

**ಉತ್ತರ:** ದಕ್ಷಿಣ ಭಾರತದ ಮೇಲೆ ದಾಳಿ ನಡೆಸಿದ ಅಲ್ಲಾವುದ್ದೀನ್ ಖಿಲ್ಜಿಯ ದಂಡನಾಯಕ ಮಲ್ಲಿಕಾಫರ್

**5. ಮಹಮದ್ ಬಿನ್ ತುಘಲಕನು ರಾಜಧಾನಿಯನ್ನು ಎಲ್ಲಿಂದ ಎಲ್ಲಿಗೆ ವರ್ಗಾಯಿಸಿದನು?**

**ಉತ್ತರ:** ಮಹಮದ್ ಬಿನ್ ತುಘಲಕನು ರಾಜಧಾನಿಯನ್ನು ದಿಲ್ಲಯಿಂದ 700 ಮೈಲು ದೂರದಲ್ಲಿದ್ದ ದೇವಗಿರಿಗೆ ದೌಲತಾಬಾದ್ ಎಂದು ಹೆಸರಿಟ್ಟು ವರ್ಗಾಯಿಸಿದನು

**6. 'ತಾನು ದೇವರ ಪ್ರತಿನಿಧಿ' ಎಂದು ಹೇಳಿಕೊಂಡ ದಿಲ್ಲಿ ಸುಲ್ತಾನ ಯಾರು?**

**ಉತ್ತರ:** 'ತಾನು ದೇವರ ಪ್ರತಿನಿಧಿ' ಎಂದು ಹೇಳಿಕೊಂಡ ದಿಲ್ಲಿ ಸುಲ್ತಾನ ಸುಲ್ತಾನ ಬಲ್ಬನ್

**ಖಖಖ ಈ ಕೆಳಗಿನ ಪ್ರಶ್ನೆಗಳಿಗೆ ಗುಂಪಿನಲ್ಲಿ ಚರ್ಚಿಸಿ ಉತ್ತರಿಸಿ.**

**1. ಮಹಮದ್ ಘಜನಿಯ ದಾಳಿಗಳ ಪರಿಣಾಮಗಳೇನು?**

**ಉತ್ತರ.** ಅಫ್ಘಾನಿಸ್ತಾನದ ಘಜನಿ ಎಂಬ ಚಿಕ್ಕ ರಾಜ್ಯದ ಸುಲ್ತಾನನಾಗಿದ್ದ ಇವನು ಹದಿನೇಳು ಬಾರಿ ದಾಳಿ ನಡೆಸಿದನು. ಇದರ ಪರಿಣಾಮವಾಗಿ ಭಾರತದ ಹಲವಾರು ಸಂಪದ್ಭರಿತ ನಗರಗಳು ಸೂರೆಗೊಂಡವು. ಧಾರ್ಮಿಕ ಕೇಂದ್ರಗಳು ನಾಶವಾದವು.

**2 . ದಿಲ್ಲಿಯ ಸುಲ್ತಾನ ಮನೆತನಗಳನ್ನು ಹೆಸರಿಸಿ.**

**ಉತ್ತರ:** ದಿಲ್ಲಿಯ ಸುಲ್ತಾನ ಮನೆತನಗಳೆಂದರೆ ಗುಲಾಮಿ, ಖಿಲ್ಜಿ, ತುಘಲಕ್, ಸಯ್ಯದ್ ಮತ್ತು ಲೂದಿ ಎಂಬ 5 ಸಂತತಿಗಳು ಆಳಿದವು.

**2. ಕುತ್ಬುದ್ದೀನ್ ಐಬಕ್‌ನ ಸಾಧನೆಗಳನ್ನು ತಿಳಿಸಿ.**

**ಗುಲಾಮಿ ಸಂತತಿ ಮತ್ತು ಕುತ್ಬುದ್ದೀನ್ ಐಬಕ್:**

★ ಕುತ್ಬುದ್ದೀನ್ ಪ್ರಾರಂಭದಲ್ಲಿ ಮಹಮದ್ ಘೋರಿಯ ಗುಲಾಮನಾಗಿದ್ದ. ಈ ಕಾರಣದಿಂದಾಗಿ ಇವನದು 'ಗುಲಾಮಿ' ಸಂತತಿ ಎಂದಾಯಿತು.

★ ಇವನು ಶತ್ರುಗಳನ್ನು ಗೆದ್ದು, ಟರ್ಕರ ಆಳ್ವಿಕೆಯನ್ನು ಭದ್ರಗೊಳಿಸಿದನು.

★ ತನ್ನ ವಿಜಯದ ದ್ಯೋತಕವಾಗಿ ದಿಲ್ಲಿಯ ಸಮೀಪದ ಮೆಹರೌಲಿ ಎಂಬಲ್ಲಿ ಕುತುಬ್ ಮಿನಾರಿನ ನಿರ್ಮಾಣಕಾರ್ಯ ಆರಂಭಿಸಿದನು. ಇಲ್ತುಮಶ್‌ನ ಕಾಲದಲ್ಲಿ ಇದು ಪೂರ್ಣಗೊಂಡಿತು.

**3. ಅಲ್ಲಾವುದ್ದೀನ್ ಖಿಲ್ಜಿಯ ಸುಧಾರಣೆಗಳನ್ನು ಪಟ್ಟಿ ಮಾಡಿ.**

**ಖಿಲ್ಜಿ ಸಂತತಿ :- ಮತ್ತು ಅಲಾವುದ್ದೀನ್ ಖಿಲ್ಜಿ :-**

* ಗುಲಾಮಿ ಸಂತತಿಯ ಅನಂತರ ಖಿಲ್ಜಿ ಸಂತತಿ ಅಧಿಕಾರಕ್ಕೇರಿತು.
* ಖಿಲ್ಜಿಗಳಲ್ಲಿ ಅಲ್ಲಾವುದ್ದೀನ್ ದಿಲ್ಲಿಯ ಸುಲ್ತಾನರಲ್ಲೇ ಬಲಶಾಲಿಯಾಗಿದ್ದನು.
* ಈತನದು ಸೈನಿಕ ಆಡಳಿತವಾಗಿತ್ತು. ಅಲ್ಲಾವುದ್ದೀನನು ಆಡಳಿತ, ಸೈನ್ಯ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಸುಧಾರಣೆಗಳನ್ನು ಜಾರಿಗೆ ತಂದನು.
* ಅಗತ್ಯವಸ್ತುಗಳ ಮಾರಾಟದ ಮೇಲೆ ಹತೋಟಿಯಲ್ಲಿಟ್ಟುಕೊಂಡನು.
* ಮಾದಕ ಪದಾರ್ಥ ಸೇವನೆ, ಜೂಜಾಟಗಳನ್ನು ನಿಷೇಧ ಮಾಡಿದನು. ತಪ್ಪಿತಸ್ಥರೆಂದು ಕಂಡವರನ್ನು ಕ್ರೂರವಾಗಿ ದಂಡಿಸಿದ.

**4. ಮಹಮದ್ ಬಿನ್ ತುಘಲಕನು ನಡೆಸಿದ ಪ್ರಯೋಗಗಳನ್ನು ವಿವರಿಸಿ.**

* **ಉತ್ತರ:** ರಾಜಧಾನಿಯ ವರ್ಗಾವಣೆ. ದಿಲ್ಲಿಯ ಬದಲು ಭಾರತದ ಮಧ್ಯಭಾಗದಲ್ಲಿರುವ ದೇವಗಿರಿಯನ್ನು ರಾಜಧಾನಿಯನ್ನಾಗಿ ಮಾಡಿದರೆ ದಕ್ಷಿಣ ಭಾರತದ ಮೇಲೆ ನಿಯಂತ್ರಣ ಸಾಧಿಸಬಹುದು ಎಂಬುದು ಮಹಮದನ ನಂಬಿಕೆಯಾಗಿತ್ತು.

*ದಿಲ್ಲಿಯಿಂದ 700 ಮೈಲು ದೂರದಲ್ಲಿದ್ದ ದೇವಗಿರಿಗೆ ದೌಲತಾಬಾದ್ ಎಂದು ಹೆಸರಿಟ್ಟು, ದಿಲ್ಲಿಯ ಜನ ಅಲ್ಲಿಗೆ ಹೋಗಬೇಕೆಂದು ಕಟ್ಟಾಜ್ಞೆ ಹೊರಡಿಸಿದನು. ಆದರೆ ವಲಸೆ ಹೊರಟ. ಎಷ್ಟೋ ಜನ ದಾರಿಯಲ್ಲೇ ಮಡಿದರು.

*ತಾನು ಮಾಡಿದ್ದು ಪ್ರಮಾದವಾಯಿತೆಂದು ನಿಧಾನವಾಗಿ ಮನಗಂಡ ಅವನು ಜನರು ಮತ್ತೆ ದಿಲ್ಲಿಗೆ ಹಿಂದಿರುಗುವಂತೆ ಅಪ್ಪಣೆ ಮಾಡಿದನು. ಕೊನೆಗೆ ಬದುಕಿ ಉಳಿದು ದಿಲ್ಲಿಗೆ ಮರಳಿದವರು ಕೆಲವೇ ಮಂದಿ.

*ಮಹಮದನ ಇನ್ನೊಂದು ಸುಧಾರಣೆಯೆಂದರೆ ಬೆಳ್ಳಿಯ ನಾಣ್ಯಗಳ ಬದಲು ಅಷ್ಟೇ ಮುಖಬೆಲೆಯ ತಾಮ್ರದ ಸಂಕೇತ ನಾಣ್ಯಗಳನ್ನು ಚಲಾವಣೆಗೆ ತಂದುದು. ಪರಿಣಾಮವಾಗಿ ಸಿಕ್ಕಸಿಕ್ಕವರೆಲ್ಲ ತಾಮ್ರದ ನಾಣ್ಯಗಳನ್ನು ತಯಾರಿಸಿದರು. ಇದರಿಂದ ನಾಣ್ಯಗಳು ಅಪಮೌಲ್ಯಗೊಂಡವು. ಖಜಾನೆ ಬರಿದಾಯಿತು

**5. ವಾಸ್ತುಶಿಲ್ಪ ಮತ್ತು ಸಾಹಿತ್ಯ ಕ್ಷೇತ್ರಗಳಿಗೆ ದಿಲ್ಲಿಯ ಸುಲ್ತಾನರು ನೀಡಿದ ಕೊಡುಗೆಗಳು ಯಾವುವು?**

**ವಾಸ್ತು ಶಿಲ್ಪ ಮತ್ತು ಸಾಹಿತ್ಯ:**

★ ಪ್ರಸಿದ್ಧವಾದ ಕುತುಬ್ ಮಿನಾರ್ (71 ಮಿ. ಎತ್ತರ),

★ ಅಲ್ಯೆ ದರ್ವಾಜಾ ಎಂಬ ಸುಂದರ ದ್ವಾರ,

★ ಕವ್ವತ್‌ವುಲ್ ಇಸ್ಲಾಮ್ ಮಸೀದಿ ಮತ್ತು ಸಿರಿ ಕೋಟೆ.

★ ಇದೇ ಕಾಲದಲ್ಲಿ ಉರ್ದು ಭಾಷೆ ರೂಪುಗೊಂಡಿತು.

★ ಅಮೀರ್ ಖುಸ್ರು ಮತ್ತು ಅಮೀರ್ ಹಸನ್ ಪರ್ಷಿಯನ್ ಭಾಷೆಯ ಹೆಸರಾಂತ ಕವಿಗಳು.

★ ಖುಸ್ರು ಸಂಗೀತಗಾರನಾಗಿದ್ದು ತಬಲಾ, ಸಿತಾರ್ ಮುಂತಾದ ವಾದ್ಯಗಳನ್ನು ರೂಪಿಸಿದನು.

★ ಜೈಸಿ ಎಂಬ ಕವಿ ಉರ್ದುವಿನಲ್ಲಿ 'ಪದ್ಮಾವತ್' ಎಂಬ ಸೂಫಿ ಕಾವ್ಯ ಬರೆದನು.

★ ರಾಮಾನಂದ, ಕಬೀರ, ರಾಯಿದಾಸ, ಮೀರಾ ಈ ಕಾಲದಲ್ಲಿದ್ದ ಭಕ್ತಿ ಸಂತರು

**ⅢⅢ ಕೆಳಗಿನ 'ಎ' ಪಟ್ಟಿ ಮತ್ತು 'ಬಿ' ಪಟ್ಟಿಯಲ್ಲಿನ ವಿಷಯಗಳನ್ನು ಹೊಂದಿಸಿ ಬರೆಯಿರಿ.**

| ಎ | ಬಿ | ಉತ್ತರ: |
|---|---|---|
| ಜೈಸಿ | ಅಲ್ಯೆ ದರ್ವಾಜ | **ಪದ್ಮಾವತ್** |
| ದೌಲತಾಬಾದ್ | ಸಿತಾರ್ | **ದೇವಗಿರಿ** |
| ಅಲ್ಲಾವುದ್ದೀನ್ ಖಿಲ್ಜಿ | ಪದ್ಮಾವತ್ | **ಸಿತಾರ್** |
| ಅಮೀರ್‌ಖುಸ್ರು | ದೇವಗಿರಿ | **ಅಲ್ಯೆ ದರ್ವಾಜ** |

## ಅಧ್ಯಾಯ –7 ಮೊಗಲರು

### ಪ್ರಶ್ನೆಗಳು ಮತ್ತು ಉತ್ತರಗಳು:

**Ⅰ ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿ.**

1. ಹಾಲ್ದಿಘಾಟ್ ಕದನದಲ್ಲಿ ಅಕ್ಬರ್‌ನಿಂದ ಸೋತ ರಜಪೂತ ದೊರೆ________

**ಉತ್ತರ: ರಾಣಾ ಪ್ರತಾಪಸಿಂಹ**

2. ಭೂಕಂದಾಯ ಪದ್ಧತಿಯನ್ನು ರೂಪಿಸಿದ ಅಕ್ಬರನ ಮಂತ್ರಿ___________

**ಉತ್ತರ: ತೋದರ್ ಮಲ್**

3. ಚಿತ್ರಕಲೆಯ ಬೆಳವಣಿಗೆಗೆ ಪ್ರೋತ್ಸಾಹ ನೀಡಿದ ಮೊಗಲ್ ದೊರೆ_________

**ಉತ್ತರ: ಅಕ್ಬರ್**

4. ಸಂಗೀತವನ್ನು ನಿಷೇಧಿಸಿದ ಮೊಗಲ್ ದೊರೆ___________

**ಉತ್ತರ: ಔರಂಗಜೇಬ್**

**ⅠⅠ ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

**1. ಮೊಗಲ್ ಸಾಮ್ರಾಜ್ಯದ ಸ್ಥಾಪಕ ಯಾರು?**

**ಉತ್ತರ:** ಮೊಗಲ್ ಸಾಮ್ರಾಜ್ಯದ ಸ್ಥಾಪಕ ಬಾಬರ್

**2. ಅಕ್ಬರನನ್ನು ವಿರೋಧಿಸಿದ ಮೇವಾಡದ ರಾಣಾ ಯಾರು?**

**ಉತ್ತರ:** ಅಕ್ಬರನನ್ನು ವಿರೋಧಿಸಿದ ಮೇವಾಡದ ರಾಣಾ ಪ್ರತಾಪಸಿಂಹ

**3. ತಾಜ್ ಮಹಲ್ ಎಲ್ಲಿದೆ? ಇದನ್ನು ಯಾರು ಕಟ್ಟಿಸಿದರು?**

**ಉತ್ತರ:** ತಾಜ್ ಮಹಲ್ ಆಗ್ರಾದಲ್ಲಿದೆ ಇದನ್ನು ಕಟ್ಟಿಸಿದವರು ಷಹಾಜಹಾನ್

**4. ಮೊಗಲರ ಕಾಲದ ಪ್ರಮುಖ ಇತಿಹಾಸಕಾರರನ್ನು ಹೆಸರಿಸಿ.**

**ಉತ್ತರ:** ಮೊಗಲರ ಕಾಲದ ಪ್ರಮುಖ ಇತಿಹಾಸಕಾರರು ಜಹಾಂಗೀರ್ ಔರಂಗಜೇಬ್ ಅಕ್ಬರ್ ಷಹಾಜಹಾನ್

**ಖಖಖ ಈ ಕೆಳಗಿನ ಪ್ರಶ್ನೆಗಳಿಗೆ ಗುಂಪಿನಲ್ಲಿ ಚರ್ಚಿಸಿ ಉತ್ತರಿಸಿ.**

**1. ಇಬಾದತ್‌ಖಾನ ಕುರಿತು ಟಿಪ್ಪಣಿ ಬರೆಯಿರಿ.**

**ಉತ್ತರ:** ಅಕ್ಬರನು ಧಾರ್ಮಿಕ ಸಹಿಷ್ಣುವಾಗಿದ್ದನು. ತನ್ನ ಹೊಸ ರಾಜಧಾನಿಯಾದ ಫತೇಪುರ್ ಸಿಕ್ರಿಯಲ್ಲಿ **'ಇಬಾದತ್ ಖಾನಾ'** ಎಂಬ ಪ್ರಾರ್ಥನಾ ಮಂದಿರ ಕಟ್ಟಿಸಿದನು. ಇಲ್ಲಿ ಇಸ್ಲಾಂ, ಹಿಂದೂ, ಜೈನ, ಬೌದ್ಧ, ಪಾರ್ಸಿ, ಕ್ರಿಶ್ಚಿಯನ್ ಮುಂತಾದ ಧಾರ್ಮಿಕ ಮುಖಂಡರನ್ನೂ ಆಹ್ವಾನಿಸಿ ಧಾರ್ಮಿಕ ಚರ್ಚೆಗಳನ್ನು ನಡೆಸುತ್ತಿದ್ದನು.

**2. ಅಕ್ಬರನ ಧಾರ್ಮಿಕ ನೀತಿಯನ್ನು ಪರಿಚಯಿಸಿ.**

**ಧಾರ್ಮಿಕ ನೀತಿ:**

- ✓ ಅಕ್ಬರನು ಧಾರ್ಮಿಕ ಸಹಿಷ್ಣುವಾಗಿದ್ದನು. ತನ್ನ ಹೊಸ ರಾಜಧಾನಿಯಾದ ಫತೇಪುರ್ ಸಿಕ್ರಿಯಲ್ಲಿ **'ಇಬಾದತ್ ಖಾನಾ'** ಎಂಬ ಪ್ರಾರ್ಥನಾ ಮಂದಿರ ಕಟ್ಟಿಸಿದನು.
- ✓ ಇಲ್ಲಿ ಇಸ್ಲಾಂ, ಹಿಂದೂ, ಜೈನ, ಬೌದ್ಧ, ಪಾರ್ಸಿ, ಕ್ರಿಶ್ಚಿಯನ್ ಮುಂತಾದ ಧಾರ್ಮಿಕ ಚರ್ಚೆಗಳನ್ನು ನಡೆಸುತ್ತಿದ್ದನು.
- ✓ ಅಕ್ಬರ್ ಸ್ಥಾಪಿಸಿದ ಪಂಥ : 'ದೀನ್-ಇ-ಇಲಾಹಿ'

- ➢ ಅದು ಎಲ್ಲ ಮತಧರ್ಮಗಳ ಉತ್ತಮ ಅಂಶಗಳನ್ನು ಒಳಗೊಂಡಿತ್ತು. ಆದರೆ ಕೇವಲ ಬೆರಳೆಣಿಕೆಯಷ್ಟು ಮಂದಿ ಮಾತ್ರವೇ ಅದರ ಅನುಯಾಯಿಗಳಾಗಿದ್ದರು.

**3. ಮೊಗಲರ ಕಾಲದ ವಾಸ್ತುಶಿಲ್ಪಗಳನ್ನು ಪಟ್ಟಿಮಾಡಿ.**

- ➢ ದಿಲ್ಲಿಯಲ್ಲಿರುವ ಹುಮಾಯೂನನ ಸಮಾಧಿಯು ಅಕ್ಬರನ ಆರಂಭ ಕಾಲದ ನಿರ್ಮಾಣವಾಗಿದೆ. ಅವನು ಫತೇಪುರ ಸಿಕ್ರಿಯಲ್ಲಿ (ಆಗ್ರಾದ ಸಮೀಪ) ನೂತನ ರಾಜಧಾನಿಯನ್ನು ಕಟ್ಟಿಸಿದನು.
- ➢ ಇಲ್ಲಿಯ ಜಾಮೀ ಮಸೀದಿಯ ಪ್ರವೇಶ ದ್ವಾರ (ಬುಲುಂದ್ ದರ್ವಾಜಾ) ಭಾರತದಲ್ಲಿಯೇ ಅತ್ಯುನ್ನತವಾಗಿದೆ.
- ➢ ಮೊಗಲರ ವಾಸ್ತುಶಿಲ್ಪವು ತನ್ನ ಉಚ್ಛ್ರಾಯ ಸ್ಥಿತಿಯನ್ನು ಕಂಡದ್ದು ಷಹಜಹಾನನ ಕಾಲದಲ್ಲಿ. ಈತನು ಆಗ್ರಾ ಕೋಟೆಯೊಳಗೆ ಕಟ್ಟಿಸಿದ ಅರಮನೆ, ಮೋತಿ ಮಹಲ್ ಅಮೋಘವಾಗಿವೆ.
- ➢ **ಆಗ್ರಾದಲ್ಲಿ ನಿರ್ಮಿಸಿದ ತಾಜ್‌ಮಹಲ್** ಮೊಗಲ್ ವಾಸ್ತುಶಿಲ್ಪಕ್ಕೆ ಕಳಸಪ್ರಾಯವಾಗಿದೆ. ಅವನ ರಾಣಿ ಮಮ್ತಾಜ್ ಮಹಲ್‌ಳ ನೆನಪಿಗಾಗಿ ಈ ಜಗತ್ಪ್ರಸಿದ್ಧ ಕಲಾಕೃತಿಯ ನಿರ್ಮಾಣವಾಯಿತು (17ನೇ ಶತಮಾನ). ಈ ಸಮಾಧಿ ಮಂದಿರದಲ್ಲಿ ಷಹಜಹಾನ್ ಮತ್ತು ಮಮ್ತಾಜಳ ಗೋರಿಗಳಿವೆ. ದಿಲ್ಲಿಯ ಪ್ರಸಿದ್ಧ ಕೆಂಪು ಕೋಟೆಯನ್ನು ಕೂಡ ಷಹಜಹಾನನು ಕಟ್ಟಿಸಿದನು.

**4. ಮೊಗಲ್ ಸಾಮ್ರಾಜ್ಯದ ಅವನತಿಗೆ ಕಾರಣಗಳೇನು?**

- ಸರದಾರರು ಭ್ರಷ್ಟರಾಗತೊಡಗಿದರು.
- ಸಿಂಹಾಸನದ ಉತ್ತರಾಧಿಕಾರಕ್ಕಾಗಿ ಭೀಕರ ಅಂತಃಕಲಹಗಳು ನಡೆದವು.
- ಪ್ರಾಂತಾಧಿಕಾರಿಗಳು ಸ್ವತಂತ್ರರಾಗಿ ಆಳ್ವಿಕೆ ನಡೆಸಿದರು.
- ಎಲ್ಲಕ್ಕಿಂತ ಮುಖ್ಯವಾಗಿ ಔರಂಗಜೇಬನ ನೀತಿಗೆ ಎಲ್ಲೆಡೆ ವಿರೋಧ ವ್ಯಕ್ತವಾಯಿತು.
- ಸಿಖ್ಖರು, ರಜಪೂತರು ಮತ್ತು ಮರಾಠರೊಂದಿಗೆ ದೀರ್ಘಕಾಲದ ಸಂಘರ್ಷಗಳು
- ನಾದಿರ್‌ಷಾ ಎಂಬ ಪರ್ಷಿಯದ ದಾಳಿಕೋರನು ದಿಲ್ಲಿಯ ಮೇಲೆ ಆಕ್ರಮಣ ಗೈದನು.
- ಮೊಗಲರು ಎರಡು ನೂರು ವರ್ಷ ಕಾಲ ಸಂಗ್ರಹಿಸಿದ ಧನಕನಕಾದಿಗಳನ್ನು ಸೂರೆಗೈದನು. ಜಗತ್ಪ್ರಸಿದ್ಧ ಕೊಹಿನೂರ್ ವಜ್ರ ಹಾಗೂ ಷಹಜಹಾನನ ಮಯೂರಸಿಂಹಾಸನವನ್ನೂ ಅವನು ಒಯ್ದನು. ಮೊಗಲರ ಖಜಾನೆ ಬರಿದಾಯಿತು.

**IV ಕೆಳಗಿನ 'ಎ' ಪಟ್ಟಿ ಮತ್ತು 'ಬಿ' ಪಟ್ಟಿಯಲ್ಲಿನ ವಿಷಯಗಳನ್ನು ಹೊಂದಿಸಿ ಬರೆಯಿರಿ.**

| ಎ | ಬಿ | ಉತ್ತರ: |
|---|---|---|
| ತುಳಸಿದಾಸ | ಮಯೂರ ಸಿಂಹಾಸನ | **ರಾಮಚರಿತ ಮಾನಸ** |
| ಅಬುಲ್ ಫಜಲ್ | ತಲೆಕಂದಾಯ | **ಅಕ್ಬರ್ ನಾಮ** |
| ಷಹಜಹಾನ್ | ರಾಮಚರಿತ ಮಾನಸ | **ಮಯೂರ ಸಿಂಹಾಸನ** |
| ಜೆಸಿಯಾ | ಫತೇಪುರ ಸಿಕ್ರಿ | **ತಲೆಕಂದಾಯ** |
| ಅಕ್ಬರ್ | ಅಕ್ಬರ್ ನಾಮ | **ಫತೇಪುರ ಸಿಕ್ರಿ** |

## ಅಧ್ಯಾಯ –8 ಮರಾಠರು

**ಪ್ರಶ್ನೆಗಳು ಮತ್ತು ಉತ್ತರಗಳು:**

**I ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿ.**

1. ಶಿವಾಜಿಯ ಗುರು______________

**ಉತ್ತರ: ದಾದಾಜಿ ಕೊಂಡದೇವ**

2. ಶಿವಾಜಿಯು ಅಫ್ಜಲ್ ಖಾನನನ್ನು _______________ ಎಂಬ ಆಯುಧದಿಂದ ಕೊಂದನು.

**ಉತ್ತರ: ವ್ಯಾಘ್ರನಖ**

3. ಶಿವಾಜಿಯನ್ನು ಸೋಲಿಸಿದ ಔರಂಗಜೇಬನ ದಂಡನಾಯಕ__________

**ಉತ್ತರ: ರಾಜಾಜಯಸಿಂಹ**

**II ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

**1. ಶಿವಾಜಿಯು ಎಲ್ಲಿ ಜನಿಸಿದನು?**

**ಉತ್ತರ:** ಶಿವಾಜಿಯು ಪುಣೆಯ ಬಳಿ ಇರುವ ಶಿವನೇರಿದುರ್ಗದಲ್ಲಿ ಜನಿಸಿದನು

**2. ಶಿವಾಜಿಯ ತಂದೆ ತಾಯಿ ಯಾರು?**

**ಉತ್ತರ:** ಶಿವಾಜಿ ತಂದೆ ಷಹಜಿ ಬೋಸ್ಲೆ ಮತ್ತು ತಾಯಿ ಜೀಜಾಬಾಯಿ

**3. ವಿಜಯಪುರದ ಸುಲ್ತಾನನು ಶಿವಾಜಿಯನ್ನು ಏಕೆ ವಿರೋಧಿಸಿದನು?**

**ಉತ್ತರ:** ಶಿವಾಜಿಯು ತನ್ನ 19ನೇ ವರ್ಷದಲ್ಲಿ ವಿಜಯಪುರದ ಆದಿಲ್‌ಷಾನ ಅಧೀನದಲ್ಲಿದ್ದ ತೋರಣದುರ್ಗವನ್ನು ವಶಪಡಿಸಿಕೊಂಡನು. ನಂತರ ರಾಯಗಡ, ಸಿಂಹಗಡ, ಪ್ರತಾಪಗಡ ಮುಂತಾದ ಕೋಟೆಗಳನ್ನು ಒಂದೊಂದಾಗಿ ಗೆದ್ದುಕೊಂಡನು. ಇದರಿಂದ ಕುಪಿತನಾದ ವಿಜಯಾಪುರ ಸುಲ್ತಾನನು ಶಿವಾಜಿಯನ್ನು ವಿರೋಧಿಸಿದನು

**4. ಷಯಿಸ್ತಾಖಾನ್ ಯಾರು?**

**ಉತ್ತರ:** ಷಯಿಸ್ತಾಖಾನ್ ದಖನ್ ಪ್ರದೇಶದ ಅಧಿಕಾರಿ

**5. ಶಿವಾಜಿಯ ಪಟ್ಟಾಭಿಷೇಕ ಎಲ್ಲಿ ನಡೆಯಿತು? ಮತ್ತು ಅವನು ಧರಿಸಿದ ಬಿರುದು ಯಾವುದು?**

**ಉತ್ತರ:** ಶಿವಾಜಿಯ ಪಟ್ಟಾಭಿಷೇಕ ರಾಯಗಡದಲ್ಲಿ "ಛತ್ರಪತಿ" ಎಂಬ ಬಿರಿದುನಿಂದ ನಡೆಯಿತು

**6. ಮರಾಠ ರಾಜ್ಯವನ್ನಾಳಿದ ಪ್ರಮುಖ ಪೇಶ್ವೆಗಳನ್ನು ಹೆಸರಿಸಿ.**

**ಉತ್ತರ:** ಬಾಲಾಜಿ ವಿಶ್ವನಾಥ, ಒಂದನೆಯ ಬಾಜೀರಾಯ ಮತ್ತು ಬಾಲಾಜಿ ಬಾಜೀರಾಯ

## ಅಧ್ಯಾಯ –9 ನಮ್ಮ ಸಂವಿಧಾನ

### ಪ್ರಶ್ನೆಗಳು ಮತ್ತು ಉತ್ತರಗಳು:

**ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.**

**1. ಸಂವಿಧಾನ ಎಂದರೇನು?**

**ಉತ್ತರ:** ಸಂವಿಧಾನವೆಂದರೆ ಒಂದು ದೇಶವು ಅನುಸರಿಸುವ ಮೂಲಭೂತ ಕಾನೂನು.

**2. ಸಂವಿಧಾನ ರಚನಾ ಸಭೆಯ ಅಧ್ಯಕ್ಷರು ಯಾರಾಗಿದ್ದರು?**

**ಉತ್ತರ:** ಡಾ. ರಾಜೇಂದ್ರ ಪ್ರಸಾದ್

**3. ಡಾ.ಬಿ.ಆರ್.ಅಂಬೇಡ್ಕರ್ ಸಂವಿಧಾನ ರಚನೆಯಲ್ಲಿ ವಹಿಸಿದ ಪಾತ್ರವೇನು?**

**ಉತ್ತರ:** ಡಾ.ಬಿ.ಆರ್.ಅಂಬೇಡ್ಕರ್ ಸಂವಿಧಾನ ರಚನೆಯಲ್ಲಿ

**4. ಭಾರತವನ್ನು ಯಾವ ದಿನದಂದು ಗಣರಾಜ್ಯವೆಂದು ಘೋಷಣೆ ಮಾಡಲಾಯಿತು?**

**ಉತ್ತರ:** ಜನವರಿ 26, 1950ರಂದು ಜಾರಿಗೊಳಿಸಲಾಯಿತು.ಈ ಸಂವಿಧಾನವು ಭಾರತವನ್ನು ಗಣರಾಜ್ಯವೆಂದು ಘೋಷಣೆ ಮಾಡಿತು

**5. ವಯಸ್ಕ ಮತದಾನ ಪದ್ಧತಿ ಎಂದರೇನು?**

**ಉತ್ತರ:** ವಯಸ್ಕ ನಾಗರಿಕರು (18 ವರ್ಷಕ್ಕೆ ಮೇಲ್ಪಟ್ಟವರು) ಮತದಾನ ಮಾಡಿ ಪ್ರತಿನಿಧಿಗಳನ್ನು ಚುನಾಯಿಸುವ ಕ್ರಮವನ್ನು 'ವಯಸ್ಕ ಮತದಾನ ಪದ್ಧತಿ' ಎನ್ನುವರು

**6. ಗಣರಾಜ್ಯವೆಂದರೇನು?**

**ಉತ್ತರ:** ಗಣರಾಜ್ಯದಲ್ಲಿ ರಾಜರ ಆಳ್ವಿಕೆಯಿರುವುದಿಲ್ಲ. ಬದಲಾಗಿ ಪ್ರಜೆಗಳಿಂದ ಚುನಾಯಿತರಾದ ಪ್ರತಿನಿಧಿಗಳ ಆಳ್ವಿಕೆಯಿರುತ್ತದೆ.ಇಂಥ ರಾಜಕೀಯ ವ್ಯವಸ್ಥೆಯನ್ನು ಗಣರಾಜ್ಯ ಎನ್ನುತ್ತಾರೆ

**7. ಸರ್ವಧರ್ಮಸಮಭಾವ ಎಂದರೇನು?**

**ಉತ್ತರ:** ಸರ್ಕಾರವು ಧರ್ಮದ ಹೆಸರಿನಲ್ಲಿ ಪಕ್ಷಪಾತ ಮಾಡದೆ ಎಲ್ಲ ಮತಧರ್ಮಗಳನ್ನು ಸಮಾನ ದೃಷ್ಟಿಯಿಂದ ನೋಡಿಕೊಳ್ಳಬೇಕೆಂಬುದು ಇದರರ್ಥ.

## ಅಧ್ಯಾಯ –10 ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳು

**ಪ್ರಶ್ನೆಗಳು ಮತ್ತು ಉತ್ತರಗಳು:**

**ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.**

**1. ಮೂಲಭೂತ ಹಕ್ಕುಗಳು ಎಂದರೇನು?**

**ಉತ್ತರ:** ವ್ಯಕ್ತಿಯ ವ್ಯಕ್ತಿತ್ವ ವಿಕಾಸಕ್ಕಾಗಿ ಸಂವಿಧಾನ ನೀಡಿರುವ ಅವಕಾಶಗಳನ್ನು ಮೂಲಭೂತ ಹಕ್ಕುಗಳೆಂದು ಕರೆಯಲಾಗುತ್ತದೆ.

**2. ಸಮಾನತೆಯ ಹಕ್ಕು ಎಂದರೇನು?**

**ಉತ್ತರ:** ಕಾನೂನಿನ ಮುಂದೆ ಎಲ್ಲರೂ ಸಮಾನರು; ಯಾರೇ ಆಗಲಿ ಕಾನೂನಿಗಿಂತ ದೊಡ್ಡವರಲ್ಲ; ಮತ್ತು ಎಲ್ಲರಿಗೂ ಸಮಾನ ರಕ್ಷಣೆ..

**3. ಸಾಮಾಜಿಕ ಮತ್ತು ಆರ್ಥಿಕ ಶೋಷಣೆ ಹೇಗೆ ನಡೆಯುತ್ತದೆ? ಉದಾಹರಣೆಗಳನ್ನು ಕೊಡಿ.**

**ಉತ್ತರ:** ಬಡವರು, ಮಹಿಳೆಯರು, ಮಕ್ಕಳು ಮತ್ತು ದುರ್ಬಲರನ್ನು ಶೋಷಣೆ ಮಾಡಬಾರದು ಎಂಬುದು ಈ ಹಕ್ಕಿನ ಉದ್ದೇಶ. ಧರ್ಮ, ಜಾತಿ, ವರ್ಗ ಹಾಗೂ ಲಿಂಗದ ಹೆಸರಿನಲ್ಲಿ ನಡೆಯುವ ಶೋಷಣೆಯನ್ನು ನಿಷೇಧಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನೇಕ ಕಾಯಿದೆಗಳನ್ನು ಜಾರಿಗೆ ತಂದಿವೆ. ಉದಾಹರಣೆಗೆ; ವರದಕ್ಷಿಣೆ. ಜೀತ ಪದ್ಧತಿಯನ್ನು ನಿಷೇಧಿಸಿದೆ

**4. ಮೂಲಭೂತ ಕರ್ತವ್ಯಗಳನ್ನು ಸ್ವಯಂ ಸ್ಫೂರ್ತಿಯಿಂದ ನಾವೇಕೆ ಪಾಲಿಸಬೇಕು?**

**ಉತ್ತರ:** ಮೂಲಭೂತ ಕರ್ತವ್ಯಗಳನ್ನು ಸ್ವಯಂ ಸ್ಫೂರ್ತಿಯಿಂದ ಮಾಡಿದರೆ ದೇಶದ ಅಭ್ಯುದಯ ಸಾಧಿಸುವುದು ಸುಲಭ.

**5. ಯಾವುದಾದರೂ ಮೂರು ಮೂಲಭೂತ ಕರ್ತವ್ಯಗಳನ್ನು ತಿಳಿಸಿ.**

**ಉತ್ತರ:** 1. ಸಂವಿಧಾನ, ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು.

2. ಸ್ವಾತಂತ್ರ್ಯ ಚಳವಳಿಯ ಉನ್ನತ ಆದರ್ಶಗಳನ್ನು ಪಾಲಿಸುವುದು.

3. ಭಾರತದ ಏಕತೆಯನ್ನು ರಕ್ಷಿಸುವುದು

## ಅಧ್ಯಾಯ –11: ರಾಜ್ಯ ನಿರ್ದೇಶಕ ತತ್ವಗಳು

**ಪ್ರಶ್ನೆಗಳು ಮತ್ತು ಉತ್ತರಗಳು:**

**ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.**

**1. ರಾಜ್ಯ ನಿರ್ದೇಶಕ ತತ್ವಗಳು ಎಂದರೇನು?**

**ಉತ್ತರ:** ಸುಖೀರಾಜ್ಯ ಸ್ಥಾಪನೆಯ ಗುರಿಯನ್ನು ಸಾಧಿಸುವುದಕ್ಕಾಗಿ ಸಂವಿಧಾನವು ನೀಡಿದ ಮಾರ್ಗದರ್ಶಿ ಸೂತ್ರಗಳನ್ನು ರಾಜ್ಯ ನಿರ್ದೇಶಕ ತತ್ವಗಳು ಎನ್ನುವರು.

**2. ಮಹಿಳೆ ಮತ್ತು ಮಕ್ಕಳ ಕಲ್ಯಾಣ ಸ್ಥಾಪಿಸುವುದಕ್ಕಾಗಿ ಸಂವಿಧಾನವು ರಾಜ್ಯಕ್ಕೆ ಯಾವ ನಿರ್ದೇಶನಗಳನ್ನು ನೀಡಿದೆ?**

**ಉತ್ತರ:** ಒಂದೇ ರೀತಿಯ ಕೆಲಸಕ್ಕೆ ಪುರುಷರಷ್ಟೇ ಮಹಿಳೆಯರಿಗೂ ಸಮಾನ ವೇತನ; ಮಹಿಳೆಯರಿಗೆ ಹೆರಿಗೆ ಸೌಲಭ್ಯ; ಮಕ್ಕಳ ಶೋಷಣೆಯ ತಡೆ; ಮಕ್ಕಳು ಆರೋಗ್ಯವಂತರಾಗಿ ಬೆಳೆಯಲು ಅವಕಾಶ ಮತ್ತು ಅವರಿಗೆ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣ.

**3. ಸರ್ವರಿಗೂ ಸಮಾನ ಕಾನೂನಿನ ಅವಶ್ಯಕತೆಯನ್ನು ತಿಳಿಸಿ?**

**ಉತ್ತರ:** ಜಾತಿ, ಧರ್ಮ, ಲಿಂಗ, ಭಾಷೆ, ವರ್ಣ, ಪ್ರದೇಶ ಮತ್ತು ಅಂತಸ್ತುಗಳ ಭೇದಭಾವ ಇಲ್ಲದೆ ಎಲ್ಲಾ ನಾಗರಿಕರಿಗೆ ರಕ್ಷಣೆ ನೀಡುವುದು
ಹಾಗೂ ಎಲ್ಲರನ್ನು ಸಮಾನ ದೃಷ್ಟಿಯಿಂದ ನೋಡುವುದೇ ಸಾಮಾಜಿಕ ನ್ಯಾಯ.

**4. ಮದ್ಯಪಾನ ನಿಷೇಧವನ್ನು ಜಾರಿಗೆ ತರಲು ರಾಜ್ಯಕ್ಕೆ ನಿರ್ದೇಶನವನ್ನು ಏಕೆ ನೀಡಲಾಗಿದೆ?**

**ಉತ್ತರ:** ಮದ್ಯಪಾನದಿಂದ ಆರೋಗ್ಯ ಕೆಡುತ್ತದೆ, ಕುಟುಂಬದ ಆರ್ಥಿಕ ಸ್ಥಿತಿ ಹದಗೆಡುತ್ತದೆ ಹಾಗೂ ಮಹಿಳೆಯರ ಶೋಷಣೆ ಹೆಚ್ಚುತ್ತದೆ. ಇದಕ್ಕಾಗಿ ನಮ್ಮ ಸಂವಿಧಾನವು ಮದ್ಯಪಾನ ನಿಷೇಧವನ್ನು ಜಾರಿಗೆ ತರುವಂತೆ ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡಿದೆ.

## ಅಧ್ಯಾಯ –12 : ಉತ್ತರ ಅಮೆರಿಕ–ಪ್ರೈರೀಸ್‌ಗಳ ನಾಡು

**ಪ್ರಶ್ನೆಗಳು ಮತ್ತು ಉತ್ತರಗಳು:**

**I ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

**1. ಉತ್ತರ ಅಮೆರಿಕ ಖಂಡವನ್ನು 'ಪ್ರೈರೀ ನಾಡು' ಎಂದು ಏಕೆ ಕರೆಯುತ್ತಾರೆ?**

**ಉತ್ತರ:** ಉತ್ತರ ಅಮೆರಿಕ ಖಂಡ ಪ್ರಪಂಚದ ಅತಿ ಫಲವತ್ತಾದಮೈದಾನಗಳಲ್ಲೊಂದಾಗಿದ್ದು, ಉತ್ತಮ ಕೃಷಿ ಪ್ರದೇಶವಾಗಿದೆ. ಈ ಪ್ರದೇಶದ ಈ ಮೈದಾನಗಳು ಹೆಚ್ಚು ವಿಸ್ತಾರವಾಗಿದ್ದು ಅಧಿಕ ಸಂಖ್ಯೆಯ ಬಯಲುಗಳು ನಿರ್ಮಾಣಗೊಂಡಿವೆ. ಈ ಕಾರಣದಿಂದಾಗಿ 'ಪ್ರೈರೀ ನಾಡು' ಎಂದು ಕರೆಯುವರು.

**2. ಉತ್ತರ ಅಮೆರಿಕ ಖಂಡದ ಸ್ಥಾನ ಮತ್ತು ವಿಸ್ತೀರ್ಣ ತಿಳಿಸಿರಿ.**

**ಸ್ಥಾನ:** ಉತ್ತರ ಅಮೆರಿಕವು ಸಂಪೂರ್ಣವಾಗಿ ಸಮಭಾಜಕವೃತ್ತದ ಉತ್ತರದಲ್ಲಿ ನೆಲೆಗೊಂಡಿದೆ. ಅದು ಅಕ್ಷಾಂಶಿಕವಾಗಿ 190 ಉತ್ತರ ದಿಂದ 710 ಉತ್ತರ ಅಕ್ಷಾಂಶ, 500 ಪಶ್ಚಿಮದಿಂದ, 1500 ಪಶ್ಚಿಮ ರೇಖಾಂಶಗಳ ನಡುವೆ ಹಬ್ಬಿದೆ.
ಕರ್ಕಾಟಕ ಸಂಕ್ರಾಂತಿ ವೃತ್ತವು (23 1 2 0 ಉ.ಅ) ಈ ಖಂಡದ ದಕ್ಷಿಣದಲ್ಲಿಯೂ ಉತ್ತರ ಮೇರು ವೃತ್ತವು (66 1 2 0 ಉ.ಆರ್ಕ್ಟಿಕ್ ವೃತ್ತ) ಉತ್ತರ ಭಾಗದಲ್ಲಿ ಹಾದು ಹೋಗಿವೆ.

- ಉತ್ತರ ಅಮೆರಿಕವು ವಿಸ್ತೀರ್ಣ: 24.24 ದಶಲಕ್ಷ ಚ.ಕಿ.ಮೀ

**3. ಉತ್ತರ ಅಮೆರಿಕ ಖಂಡದ ಪ್ರಮುಖ ರಾಷ್ಟ್ರಗಳನ್ನು ಪಟ್ಟಿ ಮಾಡಿರಿ.**

**ಉತ್ತರ:** ಉತ್ತರ ಅಮೆರಿಕ ಖಂಡದ ಪ್ರಮುಖ ರಾಷ್ಟ್ರಗಳೆಂದರೆ ನ್ಯೂಯಾರ್ಕ್,ವಾಷಿಂಗ್ ಟನ್, ಚಿಕಾಗೋ, ಮೆಕ್ಸಿಕೋ ,ಕೆನಡ ,ಅಮೆರಿಕ

**4. ಉತ್ತರ ಅಮೆರಿಕದ ಗ್ರ್ಯಾಂಡ್ ಕ್ಯಾನಿಯನ್ ಹೇಗೆ ನಿರ್ಮಾಣಗೊಂಡಿದೆ?**

**ಉತ್ತರ:** ಕೊಲರಾಡೊ ನದಿಯು ಕೊಲರಾಡೊ ಪ್ರಸ್ಥಭೂಮಿಯ ಮೂಲಕ ಹರಿಯುತ್ತಾ ಗ್ರಾಂಡ್ ಕ್ಯಾನಿಯನ್ ಮಹಾಕಂದರವನ್ನು ನಿರ್ಮಾಣ ಮಾಡಿದೆ

**5. ಉತ್ತರ ಅಮೆರಿಕದ ಪ್ರಮುಖ ಸಸ್ಯ ಹಾಗೂ ಪ್ರಾಣಿಗಳನ್ನು ಹೆಸರಿಸಿರಿ.**

**ಉತ್ತರ:** ಟಂಡ್ರಾ ಪೈನ್, ಫರ್, ಸ್ಪ್ರೂಸ್, ಲಾರ್ಚ್ ಹಿಮಜಿಂಕೆ, ಕಾರಿಬೊಹಿಮಕರಡಿಗಳು
ಲಿಂಕ್ಸ್, ಸಾಬಲ್, ಸಿಲ್ವರ್ ತೋಳ ಇತ್ಯಾದಿ. ಉತ್ತರ ಅಮೆರಿಕದ ಪ್ರಮುಖ ಸಸ್ಯ ಹಾಗೂ

ಪ್ರಾಣಿಗಳಾಗಿವೆ

**6. ಉತ್ತರ ಅಮೆರಿಕದ ಪ್ರಮುಖ ನದಿಗಳನ್ನು ಪಟ್ಟಿ ಮಾಡಿರಿ.**

**ಉತ್ತರ:** ಮಿಸಿಸಿಪ್ಪಿ ಮಿಸ್ಸೌರಿ ರೆಡ್‌ರಿವರ್, ಓಹಾವ್ಹೊ, ಅರಕಾನ್ಸ್‌ಸ್, ಟೆನಸ್ಸಿ ಮತ್ತು ಪ್ಲಾಟೆ ಎಂಬುವು ಇತರೆ ಉಪನದಿಗಳು. ಸ್ನೇಕ್, ಫ್ರೇಸರ್, ಕೊಲಂಬಿಯಾ, ಯೂಕಾನ್, ಕೊಲರಾಡೊ, ರಯೊಗ್ರಾಂಡ್, ಮೆಕೆಂಜಿ, ನೆಲ್ಸನ್ ಮತ್ತು ಸೇಂಟ್ ಲಾರೆನ್ಸ್‌ಗಳು ಉತ್ತರ ಅಮೇರಿಕೆಯ ಇತರ ಪ್ರಮುಖ ನದಿಗಳು.

**7. ಉತ್ತರ ಅಮೆರಿಕದಲ್ಲಿ 'ಲಂಬರ್ ಜಾಕ್ಸ್' ಎಂದು ಯಾರನ್ನು ಕರೆಯುತ್ತಾರೆ?**

**ಉತ್ತರ:** ಕೆನಡದಲ್ಲಿ ಮರಕಡಿಯುವ ವೃತ್ತಿಯನ್ನು ಅವಲಂಬಿಸಿರುವ ಜನರನ್ನು ಲಂಬರ್ ಜಾಕ್ಸ್ ಎಂದು ಕರೆಯುತ್ತಾರೆ

**8. ಉತ್ತರ ಅಮೆರಿಕದಲ್ಲಿ ಕಂಡುಬರುವ ಪ್ರಮುಖ ಜನರು ಹಾಗೂ ಅವರ ಭಾಷೆಗಳನ್ನು ತಿಳಿಸಿರಿ.**

**ಉತ್ತರ:** ಉತ್ತರ ಅಮೇರಿಕನ್ನರು ,ಯುರೋಪಿಯನ್ನರು ಅಮೆರಿಕನ್ ಇಂಡಿಯನ್ಸ್ ಮತ್ತು ಆಫ್ರಿಕನ್ನರಾಗಿದ್ದರು .

ಇವರ ಪ್ರಮುಖ ಭಾಷೆ: ಸ್ಪ್ಯಾನಿಚ್ .ಇಂಗ್ಲೀಷ್, ಫ್ರೆಂಚ್ ,ಅಮೆರಿಕನ್ ಇಂಡಿಯನ್ ಭಾಷೆಯನ್ನು ಮಾತಾಡುತ್ತಾರೆ

## ಅಧ್ಯಾಯ –13 : ದಕ್ಷಿಣ ಅಮೆರಿಕ–ಆ್ಯಂಡೀಸ್‌ಗಳ ನಾಡು

**I ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

**1. ದಕ್ಷಿಣ ಅಮೆರಿಕ ಖಂಡದ ಸ್ಥಳೀಯರನ್ನು 'ರೆಡ್ ಇಂಡಿಯನ್ಸ್' ಎಂದು ಏಕೆ ಕರೆಯುತ್ತಾರೆ?**

**ಉತ್ತರ:** ಕ್ರಿಸ್ಟೋಫರ್ ಕೊಲಂಬಸನು ಈ ಭೂಖಂಡವನ್ನು ತಲುಪಿ, ಅದನ್ನು ಭಾರತವೆಂದು ಭಾವಿಸಿದ. ಅಲ್ಲಿನ ಸ್ಥಳೀಯರನ್ನು ರೆಡ್ ಇಂಡಿಯನ್ನರೆಂದು ಕರೆದನು.

**2. ದಕ್ಷಿಣ ಅಮೆರಿಕದ ಸ್ಥಾನ ಮತ್ತು ವಿಸ್ತೀರ್ಣಗಳನ್ನು ತಿಳಿಸಿರಿ.**

ಇದು ಉತ್ತರದಲ್ಲಿ ಅಗಲವಾಗಿಯೂ ಮತ್ತು ದಕ್ಷಿಣದ ಕಡೆಗೆ ಕಿರಿದಾಗಿದ್ದು ತ್ರಿಕೋನಾಕಾರವಾಗಿದೆ.
120 ಉ. ಅಕ್ಷಾಂಶದಿಂದ 560 ದಕ್ಷಿಣ ಅಕ್ಷಾಂಶದವರೆಗೂ ಮತ್ತು
350 ಪ. ರೇಖಾಂಶದಿಂದ 810 ಪಶ್ಚಿಮ ರೇಖಾಂಶದವರೆಗೂ ವಿಸ್ತರಿಸಿದೆ.

- ಒಟ್ಟು ಭೂಭಾಗವು ಸುಮಾರು 177.1 ಲಕ್ಷ ಚ.ಕಿ.ಮೀ.ಗಳಷ್ಟಿದ್ದು, ಅದು ಭಾರತಕ್ಕಿಂತಲೂ ಮೂರುವರೆ ಪಟ್ಟು ದೊಡ್ಡದಾಗಿದೆ.

**3. ದಕ್ಷಿಣ ಅಮೆರಿಕದ ಅತಿ ದೊಡ್ಡ ಹಾಗೂ ಅತಿ ಚಿಕ್ಕ ರಾಷ್ಟ್ರಗಳನ್ನು ಹೆಸರಿಸಿರಿ.**

**ಉತ್ತರ:** ಬ್ರೆಜಿಲ್ ಅತಿ ದೊಡ್ಡ ಮತ್ತು ಫ್ರೆಂಚ್ ಗಯಾನವು ಅತಿ ಚಿಕ್ಕ ರಾಷ್ಟ್ರವಾಗಿದೆ

**4. ದಕ್ಷಿಣ ಅಮೆರಿಕದಲ್ಲಿ ಕಂಡುಬರುವ ಪ್ರಪಂಚದ ಅತಿ ಎತ್ತರ ಜಲಪಾತ ಯಾವುದು? ಅದು ಯಾವ ನದಿಯಿಂದ ನಿರ್ಮಾಣಗೊಂಡಿದೆ?**

**ಉತ್ತರ:** ದಕ್ಷಿಣ ಅಮೇರಿಕಾದಲ್ಲಿರುವ ಪ್ರಪಂಚದ ಅತಿ ಎತ್ತರದ ಜಲಪಾತ ಏಂಜಲ್ ಜಲಪಾತ.ಇದು ಚೂರನ್ ನದಿಯಿಂದ ನಿರ್ಮಾಣಗೊಂಡಿದೆ.

**5. ದಕ್ಷಿಣ ಅಮೆರಿಕದ ಪ್ರಮುಖ ಹುಲ್ಲುಗಾವಲುಗಳನ್ನು ತಿಳಿಸಿರಿ.**

**ಉತ್ತರ:** ಲಾನೋಸ್ (ಕಾಂಪಾಸ್) ಮತ್ತು ಪಂಪಾಸ್ ದಕ್ಷಿಣ ಅಮೆರಿಕಾದ ಪ್ರಮುಖ ಹುಲ್ಲುಗಾವಲಾಗಿವೆ

**6. ದಕ್ಷಿಣ ಅಮೆರಿಕದ ಪ್ರಮುಖ ಸಸ್ಯ ಹಾಗೂ ವನ್ಯಜೀವಿಗಳನ್ನು ಹೆಸರಿಸಿರಿ.**

**ಉತ್ತರ:** ದಕ್ಷಿಣ ಅಮೆರಿಕದ ಪ್ರಮುಖ ಸಸ್ಯ ಮಹಾಗನಿ ಎಬೋನಿ ರಬ್ಬರ್ ಮರ ಇಲ್ಲಿನ ಪ್ರಮುಖ ಸಸ್ಯವಾದರೆ ಹಾರುವ ಮಂಗ ,ಅಳಿಲು ,ಮಂಗಗಳು .ಆನಕೊಂಡ ,ಹೆಬ್ಬಾವು ,ಪ್ಯೂಮ ,ಜಾಗ್ವಾರ್ ,ಲಾಮ ಆಲ್ಪಾಕ ,ಆಮೆ ಇಲ್ಲಿನ ಪ್ರಮುಖ ವನ್ಯ ಜೀವಿಗಳಾಗಿವೆ.

**7. ದಕ್ಷಿಣ ಅಮೆರಿಕದ ಹೆಚ್ಚು ಜನಸಾಂದ್ರತೆಯನ್ನು ಹೊಂದಿರುವ ಪ್ರಮುಖ ನಗರಗಳನ್ನು ಹೆಸರಿಸಿರಿ**

**ಉತ್ತರ:** ಉರುಗ್ವೆ ,ಜ್ಯೂನಸ್ ಐರಿಸ್ ,ರಿಯೋಡಿ ,ಜನೈರೊ ,ಸವೊ ಪೊಲೋ ದಕ್ಷಿಣ ಅಮೆರಿಕಾದ ಹೆಚ್ಚು ಜನಸಾಂದ್ರತೆಯನ್ನು ಹೊಂದಿರುವ ಪ್ರಮುಖ ನಗರಗಳಾಗಿವೆ.

## ದ್ವಿತೀಯ ಸೆಮಿಸ್ಟರ್ ಪಠ್ಯಕ್ರಮ

## ಪಾಠ 1 : ಭಾರತಕ್ಕೆ ಯುರೋಪಿಯನ್ನರ ಆಗಮನ

**ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

**1** ಭಾರತಕ್ಕೆ ವ್ಯಾಪಾರಕ್ಕಾಗಿ ಸಮುದ್ರ ಮಾರ್ಗವಾಗಿ ಮೊದಲಿಗೆ ಬಂದಿದ್ದ ಯುರೋಪಿಯನ್ನರು ಯಾರು?

**ಉ : ಪೋರ್ಚಗೀಸರು**

2. ಭಾರತಕ್ಕೆ ಜಲಮಾರ್ಗವನ್ನು ಕಂಡುಹಿಡಿದವರು ಯಾರು? **ಉ :ವಾಸ್ಕೋಡಗಾಮ**

3. ಡಚ್ಚರ ರಾಜಧಾನಿ ಯಾವುದು? **ಉ: ಪುಲಿಕಾಟ್**

4. ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಯಾವಾಗ ಸ್ಥಾಪನೆಯಾಯಿತು? **ಉ: ಸಾ.ಶ. 1600**

5. ಫ್ರೆಂಚರ ವ್ಯಾಪಾರ ಕೇಂದ್ರಗಳನ್ನು ಹೆಸರಿಸಿ.

**ಉ: ಪಾಂಡಿಚೇರಿ, ಮಚಲಿ ಪಟ್ಟಣ, ಕಲ್ಲಿಕೋಟೆ, ಮಾಹೆ ಕಾರೈಕಲ್ & ಚಂದ್ರನಗರ**

6. ಬ್ರಿಟಿಷರಿಗೆ 'ದಸ್ತಕ್' ನೀಡಿದ ಮೊಗಲ್ ದೊರೆಯಾರು? **ಉ: ಮೊಗಲ್ ದೊರೆ ಫರೂಕ್**

**2. ಈ ಕೆಳಗಿನ ಪ್ರಶ್ನೆಗಳಿಗೆ ಗುಂಪಿನಲ್ಲಿ ಚರ್ಚಿಸಿ ಉತ್ತರಿಸಿರಿ.**

1. ಭಾರತದಲ್ಲಿ ಪೊರ್ಚಗೀಸರ ಅವನತಿಗೆ ಕಾರಣವಾದ ಅಂಶಗಳನ್ನು ಪಟ್ಟಿಮಾಡಿ.

- ★ **ಬಲಿಷ್ಠ ನೌಕಾಪಡೆಯನ್ನು ಹೊಂದಿದ್ದ ಡಚ್ಚರು ಮತ್ತು ಇಂಗ್ಲಿಷರು ಪೋರ್ಚಗೀಸರಪ್ರಬಲ ಪ್ರತಿಸ್ಪರ್ಧಿಗಳಾಗಿದ್ದರು.**
- ★ **ಪೋರ್ಚಗೀಸ್ ಸರ್ಕಾರದ ನೌಕರರು ಭ್ರಷ್ಟರಾಗಿ, ಸ್ವಾಮಿನಿಷ್ಠೆ ಕಳೆದುಕೊಂಡರು. ಮುಂದೆಅವರ ಸರ್ಕಾರ ಹೀನ ಸ್ಥಿತಿಗೆ ಇಳಿಯಿತು.**
- ★ **ಮತಾಂಧತೆಯೇ ಪೋರ್ಚಗೀಸರ ಅವನತಿಗೆ ಮುಖ್ಯ ಕಾರಣವಾಗಿತ್ತು. ಅವರು ಇಲ್ಲಿಯ ವಿವಿಧ ಧರ್ಮಿಯರನ್ನು ಬಲವಂತದಿಂದ ಮತಾಂತರಿಸಿದರು.**
- ★ **ವಿಜಯನಗರ ಸಾಮ್ರಾಜ್ಯದ ಅವನತಿನಂತರ ಅವರ ವ್ಯಾಪಾರ ಕುಂಠಿತವಾಯಿತು.**

2. ಭಾರತದಲ್ಲಿ ಫ್ರೆಂಚರ ಅವನತಿಗೆ ಕಾರಣಗಳು ಯಾವುವು?

- **ಭಾರತದಲ್ಲಿದ್ದ ಫ್ರೆಂಚ್ ಸೇನಾ ನಾಯಕರಿಗೆ ಫ್ರಾನ್ಸ್ ಸರಕಾರಪೂರ್ಣ ಬೆಂಬಲವನ್ನು ನೀಡಲಿಲ್ಲ.**
- **ಫ್ರಾನ್ಸಿನಲ್ಲಿ ರಾಜಕೀಯ ಗೊಂದಲ ಮತ್ತು ಕ್ರಾಂತಿಗಳು ಕಂಡು ಬಂದವು.**
- **ಫ್ರೆಂಚರ ನೌಕಾಪಡೆಯು ಇಂಗ್ಲಿಷರ ನೌಕಾಪಡೆಗಿಂತ ಉತ್ತಮ ದರ್ಜೆಯದಾಗಿರಲಿಲ್ಲ.**

**3. ಈ ಕಳೆಗಿನ "ಎ' ಪಟ್ಟಿಗೆ"ಸರಬಂದಿಸಿದ "ಬಿ' ಪಟ್ಟಿಯಲ್ಲಿನ"ವಿಷಯಗಳನ್ನು ಹೊಂದಿಸಿ ಬರಂಯಿರಿ.**

| ಎ | ಬಿ |
|---|---|
| **ಪೋರ್ಚುಗೀಸರು** | **ಪಾಂಡಿಚೇರಿ 3** |
| **ಡಚ್ಚರು** | **ಕಲ್ಕತ್ತ 4** |
| **ಫ್ರೆಂಚರು** | **ಪುಲಿಕಾಟ್ 2** |
| **ಬ್ರಿಟಿಷರು** | **ಗೋವ 1** |

## ಪಾಠ 2 : ಭಾರತದಲ್ಲಿ ಬ್ರಿಟಿಷರ ರಾಜಕೀಯ ಏಳಿಗೆ

**ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿ.**

1. ಪ್ಲಾಸಿ ಕದನದ ನಂತರ ಬಂಗಾಳದ ನವಾಬನಾದವನು__________

**ಉ: ಮೀರ್ ಜಾಫರ್**

2. ಬಕ್ಸಾರ್ ಕದನದಲ್ಲಿ ಭಾಗವಹಿಸಿದ ಮೊಗಲ್ ದೊರೆ__________

**ಉ: ಎರಡನೇ ಷಾ ಆಲಂ**

3. ಎರಡನೇ ಕರ್ನಾಟಕ್ ಯುದ್ಧವು_______ ಒಪ್ಪಂದದೊಂದಿಗೆ ಕೊನೆಗೊಂಡಿತು.

**ಉ: 1754ರ ಪಾಂಡಿಚೇರಿ ಒಪ್ಪಂದ**

4. ವಾಂಡಿವಾಷ್ ಕದನ__________ ರಲ್ಲಿ ನಡೆಯಿತು. **ಉ: 1760**

**ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಬಕ್ಸಾರ್ ಕದನ ಯಾರ ನಡುವೆ ನಡೆಯಿತು? **ಉ: ಮೀರ್ ಕಾಸಿಂ ಮತ್ತು ಬ್ರಿಟಿಷರು**
2. ಕರ್ನಾಟಿಕ್ ಯುದ್ಧಗಳಲ್ಲಿ ಅಂತಿಮವಾಗಿ ಗೆದ್ದವರು ಯಾರು? **ಉ: ಬ್ರಿಟಿಷರು**
3. ಸಹಾಯಕ ಸೈನ್ಯ ಪದ್ಧತಿಯನ್ನು ಯಾರು ಜಾರಿಗೆ ತಂದರು? **ಉ: ವೆಲ್ಲೆಸ್ಲಿ**
4. ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಯನ್ನು ಯಾರು ಜಾರಿಗೆ ತಂದರು. **ಉ: ಡಾಲ್ ಹೌಸಿ**

**ಈ ಕೆಳಗಿನ ಪ್ರಶ್ನೆಗಳಿಗೆ ಗುಂಪಿನಲ್ಲಿ ಚರ್ಚಿಸಿ ಉತ್ತರಿಸಿರಿ.**

1. ಬಕ್ಸಾರ್ ಕದನದ ಪರಿಣಾಮಗಳು ಯಾವುವು?

ಉ: ಮೀರಜಾಫರನು ಮತ್ತೆ ಬಂಗಾಲದ ನವಾಬನಾದನು. • ಬಕ್ಸಾರ ಕಾಳಗವು ಬಂಗಾಳದಲ್ಲಿ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಆಡಳಿತವನ್ನು ಸ್ಥಿರಪಡಿಸಿತು. • ಈ ಯುದ್ಧವು ಆಂಗ್ಲರ ಪ್ರಭಾವವನ್ನು ಬಂಗಾಲದಿಂದ ಅಲಹಾಬಾದದವರೆಗೆ ವಿಸ್ತರಿಸಲು ಅವಕಾಶ ಮಾಡಿತು. • ಮೊಗಲ್ ದೊರೆ ಎರಡನೇ ಷಾ ಆಲಂನಿಂದ ಬಂಗಾಳ ಪ್ರಾಂತ್ಯದ ದಿವಾನಿ (ಕಂದಾಯ ಸಂಗ್ರಹಿಸುವ) ಹಕ್ಕನ್ನು ಪಡೆದರು. • ಸಾ.ಶ. 1765ರಲ್ಲಿ ಮೀರಜಾಫರನ ಮರಣದ ನಂತರ ನಿಜಾಮ್ ಉದ್ದೌಲನು ಬಂಗಾಳದ ನವಾಬನಾದನು.

2. ಪ್ಲಾಸಿ ಕದನದ ಕಾರಣಗಳು ಯಾವುವು?

ಉ: ಇಂಗ್ಲಿಷರು ತನ್ನ ಆದೇಶಗಳನ್ನು ಪಾಲಿಸದೆ, ವೈರಿಗಳೊಡನೆ ಸೇರಿ ಕುತಂತ್ರ ಮಾಡುತ್ತಿದ್ದಾರೆಂದು ಸಿರಾಜ್ ಉದ್ದೌಲ ಭಾವಿಸಿದನು. ಇದರಿಂದ ಕೋಪಗೊಂಡು ಇಂಗ್ಲಿಷ ಕೋಠಿಗಳನ್ನು ಸ್ವಾಧೀನಪಡಿಸಿಕೊಂಡನು. ಇದೇ ಮುಂದೆ ಪ್ಲಾಸಿ ಕದನಕ್ಕೆ ಕಾರಣವಾಯಿತು.

3. ಸಹಾಯಕ ಸೈನ್ಯ ಪದ್ಧತಿಯ ಪರಿಣಾಮಗಳನ್ನು ತಿಳಿಸಿರಿ.

**ಉ: ಸೈನಿಕ ವೆಚ್ಚದ ಅಗಾಧ ಹೊರೆಯು ಭಾರತದ ರಾಜ್ಯಗಳನ್ನು ಆರ್ಥಿಕವಾಗಿ ದುರ್ಬಲಗೊಳಿಸಿತು.**

- **ಬ್ರಿಟಿಷರು ಭಾರಿ ಭೂಪ್ರದೇಶಗಳನ್ನು ತಮ್ಮ ಹತೋಟಿಗೆ ತೆಗೆದುಕೊಂಡರು.**
- **ಈ ನೀತಿಗೆ ಒಳಪಟ್ಟ ರಾಜ್ಯಗಳು ತಮ್ಮ ಪರಮಾಧಿಕಾರವನ್ನೇ ಕಳೆದುಕೊಂಡವು.**

4. ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಗೆ ಒಳಪಟ್ಟ ಭಾರತೀಯ ರಾಜ್ಯಗಳನ್ನು ಹೆಸರಿಸಿ.

**ಉ: ಹೈದರಾಬಾದ್, ಮೈಸೂರು, ತಿರುವಾಂಕೂರು, ಬರೋಡಾ, ಜೈಪುರ, ಜೋಧ್‌ಪುರ, ಭರತ್‌ಪುರ, ನಾಗಪುರ, ಗ್ವಾಲಿಯರ್, ಔದ್, ತಂಜಾವೂರು, ಸೂರತ್.**

## ಪಾಠ 3 : ಬ್ರಿಟಿಷ್ ಆಳ್ವಿಕೆಯ ಪರಿಣಾಮ

**ಈ ಕೆಳಕಂಡ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಖಾಯಂ ಜಮೀನ್ದಾರಿ ಪದ್ಧತಿಯನ್ನು ಜಾರಿಗೆ ತಂದವರು ಯಾರು? **ಉ: ಕಾರ್ನ್‌ವಾಲೀಸ್**

2. ರೈತವಾರಿ ಪದ್ಧತಿ ಎಂದರೇನು?

**ಉ: ಮಧ್ಯವರ್ತಿಗಳ ಸಹಾಯವಿಲ್ಲದೆ ರೈತನೇ ನೇರವಾಗಿ ಸರ್ಕಾರಕ್ಕೆ ಕಂದಾಯ ಸಂದಾಯ ಮಾಡುವುದೇ ರೈತವಾರಿ ಪದ್ಧತಿಯಾಗಿದೆ.**

3. 1813ರ ಚಾರ್ಟರ್ ಕಾಯ್ದೆಯಲ್ಲಿ ಭಾರತೀಯ ಶಿಕ್ಷಣಕ್ಕೆ ಮೀಸಲಿಟ್ಟ ಹಣದ ಮೊತ್ತವೆಷ್ಟು?

**ಉ: ಒಂದು ಲಕ್ಷ**

4. ಭಾರತದಲ್ಲಿ ರೆಗ್ಯುಲೇಟಿಂಗ್ ಕಾಯ್ದೆಯನ್ನು ಯಾರು, ಯಾವಾಗ ಜಾರಿಗೆ ತಂದರು?

ಉ: **ವಾರನ್ ಹೇಸ್ಟಿಂಗ್, 1773**

5. 1857 ರಲ್ಲಿ ಸ್ಥಾಪನೆಗೊಂಡ ಭಾರತೀಯ ವಿಶ್ವವಿದ್ಯಾಲಯಗಳು ಯಾವುವು?

ಉ: **ಕಲ್ಕತ್ತಾ, ಮುಂಬೈ, ಮದ್ರಾಸ್**

**ಈ ಕೆಳಕಂಡ ಪ್ರಶ್ನೆಗಳಿಗೆ ಗುಂಪಿನಲ್ಲಿ ಚರ್ಚಿಸಿ ಉತ್ತರಿಸಿರಿ.**

1. ಖಾಯಂ ಜಮೀನ್ದಾರಿ ಪದ್ಧತಿಯು ರೈತರ ಮೇಲೆ ಬೀರಿದ ಪರಿಣಾಮಗಳೇನು?

ಉ: **ಅಧಿಕವಾದ ಕಂದಾಯ ಸಂಗ್ರಹಿಸುವ ಮೂಲಕ ಜಮೀನ್ದಾರರು ಕೃಷಿಕರ ಮೇಲೆ ದಬ್ಬಾಳಿಕೆ ನಡೆಸಿದರು.**

**ಭೂಮಾಲೀಕರು ಕೃಷಿ ಉತ್ಪಾದನೆಯನ್ನು ಹೆಚ್ಚಿಸುವಲ್ಲಿ ಯಾವುದೇ ಆಸಕ್ತಿವಹಿಸಲಿಲ್ಲ.**

**ಬೆಳೆನಾಶವಾಗಿದ್ದರೂ ರೈತರು ಗೇಣಿಯನ್ನು ಪಾವತಿಸಬೇಕಿತ್ತು.**

2. ಪಾಶ್ಚಾತ್ಯ ಶಿಕ್ಷಣದ ಪರಿಣಾಮಗಳನ್ನು ತಿಳಿಸಿರಿ.

ಉ: **ಪರಂಪರಾನುಗತ ಶಿಕ್ಷಣ ಪದ್ಧತಿಯು ಕ್ರಮೇಣ ಅವನತಿಯ ಹಾದಿ ಹಿಡಿಯಿತು.**

**ಹೊಸ ಶಿಕ್ಷಣ ಕ್ರಮದಿಂದ ವಿವಿಧ ಭಾಷಿಕ ಭಾರತೀಯರು ಇಂಗ್ಲಿಷ್ ಭಾಷೆಯಲ್ಲಿ ಪರಸ್ಪರ ಸಂವಾದಿಸಲು ಸಾಧ್ಯವಾಯಿತು.**

**ಇದು ರಾಷ್ಟ್ರೀಯತೆಯ ಭಾವನೆಗಳನ್ನು ಜನರಲ್ಲಿ ಬೆಳೆಸಲು ಸಹಕಾರಿಯಾಯಿತು.**

**ಯುರೋಪಿನ ಬೌದ್ಧಿಕ ಚಿಂತನೆಗಳು ಕ್ರಮೇಣ ಭಾರತೀಯ ಸಮಾಜವನ್ನು ಪ್ರವೇಶಿಸಿ ದೂರಗಾಮಿ ಪರಿಣಾಮಗಳನ್ನುಂಟು ಮಾಡಿದವು.**

**ಭಾರತೀಯ ಸಾಹಿತ್ಯದ ಮೇಲೂ ಗಂಭೀರ ಪರಿಣಾಮವನ್ನುಂಟು ಮಾಡಿದವು**

3. ಭಾರತದಲ್ಲಿ ಪ್ರಮುಖ ಶಾಸನಾತ್ಮಕ ಸುಧಾರಣೆಗಳನ್ನು ಹೆಸರಿಸಿ.

ಉ: **ರೆಗಯುಲೇಟಿಂಗ್ ಕಾಯ್ದೆ: 1773, ಪಿಟ್ ಇಂಡಿಯಾ ಕಾಯ್ದೆ: 1784,**
**ಭಾರತ ಸರಕಾರದ ಕಾಯ್ದೆ: 1935, ಮಾರ್ಲೆ–ಮಿಂಟೋ ಸುಧಾರಣೆಗಳು 1909,**
**ಮಾಂಟೆಗೋ–ಚೆಲ್ಮ್ಸ್ ಫರ್ಡ್ ಸುಧಾರಣೆ; 1919,**

**ಈ ಕೆಳಗಿನ ಪದಗಳನ್ನು ಹೊಂದಿಸಿ ಬರೆಯಿರಿ.**

| *'ಅ' ಪಟ್ಟಿ* | *'ಬ' ಪಟ್ಟಿ* | *ಉತ್ತರ* |
|---|---|---|
| 1. ವಾರನ್ ಹೇಸ್ಟಿಂಗ್ | ಅ. ಖಾಯಂ ಜಮೀನ್ದಾರಿ ಪದ್ದತಿ | ಉ: **ಕಂದಾಯ ವಸೂಲಿಯ ಹರಾಜು** |
| 2. ಕಾರ್ನ್‌ವಾಲೀಸ್ | ಆ. ಇಂಗ್ಲೀಷ್ ಶಿಕ್ಷಣ ನೀತಿ | ಉ: **ಖಾಯಂ ಜಮೀನ್ದಾರಿ ಪದ್ದತಿ** |
| 3. ಥಾಮಸ್ ಮನ್ರೋ | ಇ. ಕಂದಾಯ ವಸೂಲಿಯ ಹರಾಜು | ಉ: **ರೈತವಾರಿ ಪದ್ಧತಿ** |
| 4. ವಿಲಿಯಂ ಬೆಂಟಿಂಕ್ | ಈ. ಸಂಪತ್ತಿನ ಸೋರಿಕೆ ಸಿದ್ಧಾಂತ | ಉ: **ಇಂಗ್ಲೀಷ್ ಶಿಕ್ಷಣ ನೀತಿ** |
| 5. ದಾದಾಬಾಯಿ ನವರೋಜಿ | ಉ. ರೈತವಾರಿ ಪದ್ಧತಿ | ಉ: **ಸಂಪತ್ತಿನ ಸೋರಿಕೆ ಸಿದ್ಧಾಂತ** |

## ಪಾಠ 4  ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳು

**ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿ.**

1. ಸಂವಾದ ಕೌಮುದಿ ಪತ್ರಿಕೆಯನ್ನು__________ ಅವರು ಆರಂಭಿಸಿದರು.

**ಉ: ರಾಜಾ ರಾಮಮೋಹನರಾಯ್**

2. ಗುಲಾಮಗಿರಿ ಎಂಬ ಕೃತಿಯನ್ನು ರಚಿಸಿದವರು__________**ಉ: ಮಹಾತ್ಮ ಜ್ಯೋತಿಬಾ ಪುಲೆ**

3. ಲಾಹೋರಿನಲ್ಲಿ 'ದಯಾನಂದ ಆಂಗ್ಲೋವೇದಿಕ್ ಶಾಲೆಯನ್ನು ಆರಂಭಿಸಿದವರು_____

**ಉ: ಲಾಲಾ ಹಂಸರಾಜ್**

4. ಮಹಿಳೆಯರ ಉದ್ಧಾರಕ್ಕಾಗಿ 'ಮುಕ್ತಿಮಿಷನ್' ಸಂಸ್ಥೆಯನ್ನು ಸ್ಥಾಪಿಸಿದವರು__________

**ಉ: ಪಂಡಿತ್ ರಮಾಬಾಯಿ**

**ಈ ಕೆಳಕಂಡ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. 'ಭಾರತದ ನವೋದಯ ಪಿತಾಮಹ' ಎಂದು ಯಾರನ್ನು ಕರೆಯುತ್ತಾರೆ?

ಉ : **ರಾಜಾ ರಾಮಮೋಹನರಾಯ್**

2. ಮಹಾದೇವ ಗೋವಿಂದ ರಾನಡೆ ಯಾರು?    **ಉ: ಬ್ರಹ್ಮ ಸಮಾಜದ ಪ್ರಮುಖ ನಾಯಕರು**

3. ಸತ್ಯಶೋಧಕ ಸಮಾಜದ ಸ್ಥಾಪಕರು ಯಾರು?    **ಉ: ಉ: ಮಹಾತ್ಮ ಜ್ಯೋತಿಬಾ ಪುಲೆ**

4. "ಏಳಿ! ಎದ್ದೇಳಿ! ಗುರಿ ಮುಟ್ಟುವ ತನಕ ನಿಲ್ಲದಿರಿ" ಇದು ಯಾರ ಕರೆಯಾಗಿತ್ತು?

**ಉ: ಸ್ವಾಮಿ ವಿವೇಕಾನಂದ**

5. ಅನಿಬೆಸೆಂಟ್ ಯಾರು?

**ಉ: ಥಿಯಸಾಫಿಕಲ್ ಸೊಸಯಟಿಯ ಅಧ್ಯಕ್ಷರು, ನ್ಯೂ ಇಂಡಿಯಾ ಪತ್ರಿಕೆ ಪ್ರಕಟಿಸಿದರು**

6. ಅಲಿಘರ್ ಚಳುವಳಿಯ ನೇತಾರ ಯಾರಾಗಿದ್ದರು? **ಉ: ಸರ್ ಸೈಯ್ಯದ್ ಅಹ್ಮದ್‌ಖಾನ್**

7. ಶ್ರೀ ನಾರಾಯಣಗುರು ಸ್ಥಾಪಿಸಿದ ಸಂಸ್ಥೆ ಯಾವುದು?

**ಉ: ಶ್ರೀ ನಾರಾಯಣ ಧರ್ಮಪರಿಪಾಲನಾ ಯೋಗಂ**

8. 'ಸ್ತ್ರೀಪುರುಷ ತುಲನಾ' ಕೃತಿಯ ಲೇಖಕಿ ಯಾರು?    **ಉ: ತಾರಾಬಾಯಿ ಶಿಂದೆ**

9. ಭಾರತದ ಪ್ರಸಿದ್ಧ ಕ್ರೈಸ್ತ ಸಮಾಜ ಸುಧಾರಕಿ ಯಾರು?    **ಉ: ಪಂಡಿತ್ ರಮಾಬಾಯಿ**

**ಈ ಕೆಳಕಂಡ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿರಿ.**

1. ರಾಮಮೋಹನ್ ರಾಯರ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣ ಕ್ರಮಗಳನ್ನು ತಿಳಿಸಿ.

**ಉ: 1828 ರಲ್ಲಿ 'ಬ್ರಹ್ಮಸಭಾ'ವನ್ನು ಸ್ಥಾಪಿಸಿದರು. ಅದು ಮರು ವರ್ಷ 'ಬ್ರಹ್ಮಸಮಾಜ' ಎಂದು ನಾಮಕರಣಗೊಂಡಿತು. ಸತಿ ಪದ್ಧತಿ, ಜಾತಿ ಪದ್ಧತಿ, ಮೂರ್ತಿ ಪೂಜೆ, ಬಹುಪತ್ನಿತ್ವ, ಬಾಲ್ಯ ವಿವಾಹ ಹಾಗೂ ಎಲ್ಲಾ ತರಹ ಮೂಢ ನಂಬಿಕೆಗಳನ್ನು ಬ್ರಹ್ಮಸಮಾಜವು ಬಲವಾಗಿ ವಿರೋಧಿಸಿತು. ವಿಧವಾ ವಿವಾಹ ಮತ್ತು ಏಕದೇವತಾರಾಧನೆಯ ಪರವಾಗಿದ್ದರು. 'ಸಂವಾದ ಕೌಮುದಿ' ಪತ್ರಿಕೆಯ ಮೂಲಕ ಸಾಮಾಜಿಕ ಸುಧಾರಣಾ ಚಳವಳಿಯ ಪ್ರಕ್ರಿಯೆಯನ್ನು ಆರಂಭಿಸಿದರು.**

2. ಸಮಾಜ ಸುಧಾರಣೆಯಲ್ಲಿ ಜ್ಯೋತಿ ಬಾಪುಲೆಯವರ ಪಾತ್ರವೇನು?

ಉ: ಸತ್ಯಶೋಧಕ ಸಮಾಜವನ್ನು ಸ್ಥಾಪಿಸಿದರು. ಅಸ್ಪೃಶ್ಯರು, ಅನಾಥರು ಮತ್ತು ವಿಧವೆಯರಿಗಾಗಿ ಶಾಲೆಗಳನ್ನು ತೆರೆದರು. ಬ್ರಾಹ್ಮಣ ಪುರೋಹಿತಶಾಹಿಯನ್ನು ಖಂಡಿಸಿದರು. ಗುಲಾಮಗಿರಿ ಪತ್ರಿಕೆ ಆರಂಭಿಸಿದರು. ಪುಣೆಯಲ್ಲಿ ಬಾಲಕಿಯರ ಶಾಲೆಯನ್ನು ಆರಂಭಿಸಿದರು. ಬಾಲ ವಿಧವೆಯರಿಗೆ 1863 ರಲ್ಲಿ ಪುನರ್ ವಸತಿ ಕೇಂದ್ರವನ್ನು ತೆರೆಯುವ ಮೂಲಕ ನಡೆಯುತ್ತಿದ್ದ ಶಿಶುಹತ್ಯೆ ಪ್ರಕರಣಗಳನ್ನು ಕೊನೆಗಾಣಿಸುವ ಪ್ರಯತ್ನ ಮಾಡಿದರು. ವಿಧವಾ ವಿವಾಹವನ್ನು ಉತ್ತೇಜಿಸಿದರು.

3. ಥಿಯಸಾಫಿಕಲ್ ಸೊಸೈಟಿಯ ಉದ್ದೇಶಗಳೇನು?

ಉ: 1. ಭೇದವೆಲ್ಲವ ಬಿಟ್ಟು ವಿಶ್ವ ಭ್ರಾತೃತ್ವವನ್ನು ನೆಲೆಗೊಳಿಸುವುದು.

2. ಧರ್ಮ, ತತ್ತ್ವಶಾಸ್ತ್ರ ಮತ್ತು ವಿಜ್ಞಾನ ಇವುಗಳ ತುಲನಾತ್ಮಕ ಅಧ್ಯಯನ ನಡೆಸುವುದು.

3. ಪ್ರಕೃತಿಯ ನಿಗೂಢ ತತ್ವಗಳು ಮತ್ತು ಮನುಷ್ಯನಲ್ಲಿ ಅಡಗಿರುವ ಸುಪ್ತಶಕ್ತಿಗಳನ್ನು ಕುರಿತು ಶೋಧ ನಡೆಸುವುದ

4. ಮುಸ್ಲಿಂ ಸಮುದಾಯವನ್ನು ಸುಧಾರಿಸುವಲ್ಲಿ ಸಯ್ಯದ್ ಅಹ್ಮದ್ ಖಾನರ ಪಾತ್ರವೇನು?

ಉ: ಪರ್ದಾಪದ್ಧತಿ, ಬಹುಪತ್ನಿತ್ವ ಹಾಗೂ ವಿವಾಹ ವಿಚ್ಛೇದನ ಪದ್ಧತಿಗಳನ್ನು ವಿರೋಧಿಸಿದರು. ಟ್ರಾನ್ಸ್‌ಲೇಷನ್ ಸೊಸೈಟಿಯನ್ನು ಪ್ರಾರಂಭಿಸಿದರು. ಅನಂತರದಲ್ಲಿ ಈ ಸಂಸ್ಥೆ 'ಸೈಂಟಿಫಿಕ್ ಸೊಸೈಟಿ' ಎಂದು ನಾಮಕರಣಗೊಂಡಿತು. 'ಆಲಿಘರ್ ಇನ್‌ಸ್ಟಿಟ್ಯೂಟ್ ಗೆಸೆಟ್' ಎಂಬ ಪತ್ರಿಕೆಯನ್ನು ಪ್ರಾರಂಭಿಸಿದರು. 1875 ಮಹಮಡನ್ ಆಂಗ್ಲೊ ಓರಿಯಂಟಲ್ ಕಾಲೇಜನ್ನು ಆರಂಭಿಸಿದರು. ಈ ಸಂಸ್ಥೆಯೇ 1920 ರಲ್ಲಿ ಅಲಿಘರ್ ಮುಸ್ಲಿಂ ವಿಶ್ವವಿದ್ಯಾಲಯವಾಗಿ ಮಾರ್ಪಟ್ಟಿತು.

5. ಹಿಂದುಳಿದ ಸಮುದಾಯಗಳನ್ನು ಸುಧಾರಿಸುವಲ್ಲಿ ನಾರಾಯಣ ಗುರು ಕೈಗೊಂಡ ಕ್ರಮಗಳೇನು?

ಉ: ಜಾತಿ ಪದ್ಧತಿಯನ್ನು, ಪ್ರಾಣಿಬಲಿಯನ್ನು ವಿರೋಧಿಸಿದರು. ಸಂಸ್ಕೃತ ಶಾಲೆಗಳನ್ನು ತೆರೆದು ಅಲ್ಲಿ ಜಾತಿಮತ ಭೇದರಹಿತವಾಗಿ ಎಲ್ಲರಿಗೂ ಪ್ರವೇಶ ನೀಡಿದರು. ಅವರು ಸುಮಾರು ಮೂವತ್ತು ದೇವಸ್ಥಾನಗಳನ್ನು ನಿರ್ಮಿಸಿದರು. ಕೇರಳದ ಅಸ್ಪೃಶ್ಯರೂ ಸೇರಿದಂತೆ ಎಲ್ಲಾ ಜಾತಿಯವರಿಗೂ ಪ್ರವೇಶ ಕಲ್ಪಿಸಿದರು.

6. ಮಹಿಳಾ ಸುಧಾರಣೆಯಲ್ಲಿ ಪಂಡಿತ್ ರಮಾಬಾಯಿ ಅವರ ಪಾತ್ರವೇನು?

ಉ: ಮಹಿಳೆಯ ಉದ್ಧಾರಕ್ಕಾಗಿ ಜೀವನವನ್ನೇ ಮುಡುಪಿಟ್ಟು 1889 ರಲ್ಲಿ 'ಮುಕ್ತಿ ಮಿಷನ್' ಸಂಸ್ಥೆಯನ್ನು ಹುಟ್ಟು ಹಾಕಿದರು. ಈ ಸಂಸ್ಥೆಯು ವಿಧವೆಯರು, ಅನಾಥರು ಹಾಗೂ ಕುಡುಕರಿಗೆ ಜೀವನೋಪಾಯ ಕಲ್ಪಿಸುತ್ತಾ ಇಂದಿಗೂ ಕಾರ್ಯಶೀಲವಾಗಿದೆ.

**ಈ ಕೆಳಗಿನ ಪದಗಳನ್ನು ಹೊಂದಿಸಿ ಬರೆಯಿರಿ.**

| 'ಅ' ಪಟ್ಟಿ | 'ಬ' ಪಟ್ಟಿ | ಉತ್ತರ |
|---|---|---|
| 1. ಸ್ವಾಮಿ ವಿವೇಕಾನಂದ | ಅಲಿಘರ್ ಚಳುವಳಿ | **ರಾಮಕೃಷ್ಣ ಮಿಷನ್** |
| 2. ಸ್ವಾಮಿ ದಯಾನಂದ ಸರಸ್ವತಿ | ಸತ್ಯಶೋಧಕ ಸಮಾಜ | **ಆರ್ಯಸಮಾಜ** |
| 3. ಸಯ್ಯದ್ ಅಹ್ಮದ್ ಖಾನ್ | ಥಿಯಸಾಫಿಕಲ್ ಸೊಸೈಟಿ | **ಅಲಿಘರ್ ಚಳುವಳಿ** |
| 4. ಜ್ಯೋತಿ ಬಾಫುಲೆ | ರಾಮಕೃಷ್ಣ ಮಿಷನ್ | **ಸತ್ಯಶೋಧಕ ಸಮಾಜ** |
| 5. ಅನಿಬೆಸೆಂಟ್ | ಆರ್ಯಸಮಾಜ | **ಥಿಯಾಸಾಫಿಕಲ್ ಸೊಸೈಟಿ** |

## ಪಾಠ 5 : ಸ್ವಾತಂತ್ರ್ಯ ಹೋರಾಟಗಳು:

**ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ತಕ್ಷಣದ ಕಾರಣ ಯಾವುದಾಗಿತ್ತು?

**ಉ: ಸಾ.ಶ. 1857ರಲ್ಲಿ ಒಂದು ಹೊಸ ಮಾದರಿಯ ಬಂದೂಕನ್ನು (ಎನ್‌ಫೀಲ್ಡ್ ರೈಫಲ್) ಸೇನೆಯಲ್ಲಿ ತೊಡಗಿಸಿದ್ದು ಸಿಪಾಯಿ ದಂಗೆಗೆ ತಕ್ಷಣದ ಕಾರಣವಾಯಿತು.**

2. ಮಂಗಲ ಪಾಂಡೆ ಯಾರು?

**ಉ: ಮೀರತ್‌ನ ಬ್ಯಾರಕ್‌ಪುರದ (ಬಂಗಾಲ) ಭಾರತೀಯ ಸಿಪಾಯಿ ಮಂಗಲ್‌ಪಾಂಡೆ ಕೊಬ್ಬು ಸವರಿದ ಬಂದೂಕನ್ನು ಬಳಸಲು ತಿರಸ್ಕರಿಸಿ, ಬಹಿರಂಗವಾಗಿಯೇ ಬ್ರಿಟಿಷ್ ಅಧಿಕಾರಿಯೊಬ್ಬನಿಗೆ ಗುಂಡಿಕ್ಕಿಕೊಂದನು**

3. ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಯಾವುದಾದರೂ ಒಂದು ಪರಿಣಾಮವನ್ನು ತಿಳಿಸಿರಿ.

**ಉ: ಈಸ್ಟ್ ಇಂಡಿಯಾ ಕಂಪನಿಯ ಆಳ್ವಿಕೆ ಅಂತ್ಯಗೊಂಡು ಅದರ ಕೈಯಲ್ಲಿದ್ದ ಭಾರತದ ಆಳ್ವಿಕೆಯನ್ನು ಬ್ರಿಟಿಷ್ ರಾಣಿ ವಹಿಸಿಕೊಂಡಳು. ಸಾ.ಶ. 1858ರಲ್ಲಿ ಬ್ರಿಟನ್ನಿನ ರಾಣಿ ವಿಕ್ಟೋರಿಯಾ ಭಾರತೀಯರ ಧಾರ್ಮಿಕ ಸ್ವಾತಂತ್ರ್ಯದಲ್ಲಿ ಹಸ್ತಕ್ಷೇಪಮಾಡುವುದಿಲ್ಲವೆಂದು 'ಘೋಷಣೆ' ಯನ್ನು ಹೊರಡಿಸಿದಳು.**

4. 1857ರ ಹೋರಾಟವನ್ನು ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವೆಂದು ಮೊದಲು ಕರೆದವರು ಯಾರು?

**ಉ: ವಿನಾಯಕ ದಾಮೋದರ ಸಾವರ್ಕರ್**

5. ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ ಮೊಗಲ್ ದೊರೆ ಯಾರು?

**ಉ: ಎರಡನೇ ಬಹಾದ್ದೂರ್ ಷಾ**

6. ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಿದ ಮಹಿಳಾ ನಾಯಕಿಯನ್ನು ಹೆಸರಿಸಿ.

**ಉ: ಝಾನ್ಸಿ ರಾಣಿ ಲಕ್ಷ್ಮೀಬಾಯಿ**

**ಈ ಕೆಳಗಿನ ಪ್ರಶ್ನೆಗಳಿಗೆ ಗುಂಪಿನಲ್ಲಿ ಚರ್ಚಿಸಿ ಉತ್ತರಿಸಿರಿ**

1. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಕಾರಣಗಳನ್ನು ಪಟ್ಟಿ ಮಾಡಿ.

**ಉ: ರಾಜಕೀಯ, ಆಡಳಿತ, ಆರ್ಥಿಕ, ಸಾಮಾಜಿಕ, ಧಾರ್ಮಿಕ, ಸೈನಿಕ & ತಕ್ಷಣದ ಕಾರಣಗಳು**

2. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ ಕರ್ನಾಟಕದ ನಾಯಕರನ್ನು ಹೆಸರಿಸಿ.

**ಉ: ಕರ್ನಾಟಕದಲ್ಲಿ ಮುಂಡರಗಿ ಭೀಮರಾವ್, ಹಲಗಲಿ ಬೇಡರು, ಸುರಪುರದ ನಾಲ್ವನೇ ವೆಂಕಟಪ್ಪ ನಾಯಕ ಮತ್ತು ನರಗುಂದದ ಬಾಬಾಸಾಹೇಬ ಮುಖ್ಯ ನಾಯಕರಾಗಿದ್ದರು.**

**ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ರಾಷ್ಟ್ರೀಯತೆ ಎಂದರೇನು?

**ಉ: "ಒಂದು ನಿರ್ದಿಷ್ಟ ಭೌಗೋಳಿಕ ಪ್ರದೇಶದ ಜನರ ಮನದಲ್ಲಿ ಮೂಡುವ 'ನಾವೆಲ್ಲರೂ ಒಂದೇ' ಎಂಬ ಏಕತೆಯ ಭಾವನೆಯೇ ರಾಷ್ಟ್ರೀಯತೆ."**

2. ಭಾರತೀಯ ರಾಷ್ಟ್ರೀಯ ಕಾಂಗ್ರೆಸನ್ನು ಯಾರು, ಯಾವಾಗ ಸ್ಥಾಪಿಸಿದವರು?

**ಉ: 1885 ರಲ್ಲಿ ಮುಂಬೈಯಲ್ಲಿ ಎ.ಓ.ಹ್ಯೂಮ್.**

3. ಬಂಗಾಲ ವಿಭಜನೆ ಯಾವಾಗ ಆಯಿತು? **ಉ: ಸಾ.ಶ.1905.**

4. ಬಾಲಗಂಗಾಧರ ತಿಲಕರ ಪ್ರಸಿದ್ಧ ಘೋಷಣೆ ಯಾವುದು?

**ಉ: "ಸ್ವರಾಜ್ಯವು ನನ್ನ ಜನ್ಮ ಸಿದ್ಧ ಹಕ್ಕು; ನಾನು ಅದನ್ನು ಪಡೆದೇ ತಿರುತ್ತೇನೆ.**

5. ಭಾರತ ಮುಸ್ಲಿಂ ಲೀಗ್ ಯಾವಾಗ ಸ್ಥಾಪನೆಯಾಯಿತು? **ಉ: ಸಾ.ಶ.1906**

6. 'ಲಾಲ್, ಬಾಲ್, ಮತ್ತು ಪಾಲ್' ಎಂದು ಜನಪ್ರಿಯರಾದ ರಾಷ್ಟ್ರೀಯ ನಾಯಕರು ಯಾರು?

**ಉ: ಲಾಲಾ ಲಜಪತ್‌ರಾಯ್, ಬಾಲಗರಗಾದರ ತಿಲಕ್ ಮತ್ತು ಬಿಪಿನ್‌ಚಂದ್ರ ಪಾಲ್**

7. ಹೋಂ ರೂಲ್ ಚಳವಳಿಗಳನ್ನು ಆರಂಭಿಸಿದವರು ಯಾರು? **ಉ: ಲೋಕಮಾನ್ಯ ತಿಲಕರು ಮತ್ತು ಆ್ಯನಿ ಬೆಸೆಂಟರು**

8. ಜಲಿಯನ್‌ವಾಲಾಬಾಗ್ ಹತ್ಯಾಕಾಂಡ ಯಾವಾಗ ಸಂಭವಿಸಿತು? ಈ ಘಟನೆಗೆ ಕಾರಣವಾದ ಬ್ರಿಟಿಷ್ ಪೊಲೀಸ್ ಅಧಿಕಾರಿ ಯಾರು?

**ಉ: ಸಾ.ಶ. 1919 ಏಪ್ರಿಲ್ 13ರಂದು, ಜನರಲ್ ಡೈಯರ್**

9. ಯಾವುದಾದರೂ ಒಂದು ಗುಪ್ತ ಕ್ರಾಂತಿಕಾರಿ ಸಂಘವನ್ನು ಹೆಸರಿಸಿರಿ. **ಉ: ಮಿತ್ರಮೇಳ.**

10. 'ಇಂಕ್ವಿಲಾಬ್ ಜಿಂದಾಬಾದ್' ಘೋಷಣೆ ನೀಡಿದವರು ಯಾರು? **ಉ: ಭಗತ್ ಸಿಂಗ್**

**ಈ ಕೆಳಗಿನ ಪ್ರಶ್ನೆಗಳಿಗೆ ಗುಂಪಿನಲ್ಲಿ ಚರ್ಚಿಸಿ ಉತ್ತರಿಸಿರಿ.**

1. ಭಾರತದ ರಾಷ್ಟ್ರೀಯತೆಯ ಬೆಳವಣಿಗೆಗೆ ಕಾರಣವಾದ ಅಂಶಗಳನ್ನು ತಿಳಿಸಿ.

**ಉ: ಪಾಶ್ಚಿಮಾತ್ಯ ಶಿಕ್ಷಣ ಮತ್ತು ಆಧುನಿಕ ಜ್ಞಾನವಿಜ್ಞಾನದ ಪರಿಚಯ, ಏಕರೂಪ ಆಡಳಿತಾತ್ಮಕ ವ್ಯವಸ್ಥೆ, ಆರ್ಥಿಕ ಶೋಷಣೆ, ಪರಂಪರೆಯ ಪರಿಚಯ, ಸಾಮಾಜಿಕ ಧಾರ್ಮಿಕ ಚಳವಳಿಗಳು, ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಸ್ಫೂರ್ತಿ, ಜನಾಂಗೀಯ ತಾರತಮ್ಯ.**

2. ಭಾರತೀಯ ರಾಷ್ಟ್ರೀಯ ಕಾಂಗ್ರೆಸಿನ ಉದ್ದೇಶಗಳನ್ನು ಪಟ್ಟಿ ಮಾಡಿ.

**ಉ: ದೇಶದ ವಿವಿಧ ಭಾಗಗಳಲ್ಲಿರುವ ರಾಜಕೀಯ ಕಾರ್ಯಕರ್ತರ ನಡುವೆ ಸ್ನೇಹ ಸಂಬಂಧವನ್ನು ಬೆಸೆಯುವುದು.**

**ರಾಷ್ಟ್ರೀಯ ಏಕತೆಯನ್ನುಂಟುಮಾಡುವುದು. ಪ್ರಾಂತೀಯತೆಯನ್ನು ತೊರೆದು ರಾಷ್ಟ್ರೀಯತೆಯನ್ನು ಮೂಡಿಸುವುದು**

**ಜನತೆಯ ಬೇಡಿಕೆಗಳನ್ನು ಸರ್ಕಾರದ ಮುಂದೆ ಮಂಡಿಸಿ, ಜನಾಭಿಪ್ರಾಯವನ್ನು ರೂಪಿಸುವುದು.**

3. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಕ್ರಾಂತಿಕಾರಿಗಳ ಪಾತ್ರವೇನು?

**ಉ: ಭಾರತಕ್ಕೆ ಸಂಪೂರ್ಣ ಸ್ವಾತಂತ್ರ್ಯವನ್ನು ತುರ್ತಾಗಿ ದೊರಕಿಸುವ ಧ್ಯೇಯ ಇವರದಾಗಿತ್ತು. ಗಾಢವಾದ ದೇಶಭಕ್ತಿ ಮತ್ತು ತ್ಯಾಗಮನೋಭಾವವು ಕ್ರಾಂತಿಕಾರಿ ರಾಷ್ಟ್ರೀಯವಾದದ ಮೂಲತತ್ವವಾಗಿತ್ತು.**

**ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿ.**

1. ಗಾಂಧೀಯವರ ರಾಜಕೀಯ ಗುರು ______________ . **ಉ: ಗೋಪಾಲ ಕೃಷ್ಣ ಗೋಖಲೆ**
2. ಗಾಂಧೀಜಿ ಅವರು ಅಹಮದಾಬಾದ್ ಬಳಿ ಸ್ಥಾಪಿಸಿದ ಆಶ್ರಮ_______ **ಉ: ಸಾಬರಮತಿ**
3. ಚೌರಿಚೌರ ಘಟನೆಯು _______________ ರಲ್ಲಿ ಸಂಭವಿಸಿತು. **ಉ: ಸಾ.ಶ. 1922**
4. "ಸಂಪೂರ್ಣ ಸ್ವರಾಜ್ಯ" ನಿರ್ಣಯವು ____________ ರಲ್ಲಿ ಅಂಗೀಕರಿಸಲ್ಪಟ್ಟಿತು.
**ಉ: ಸಾ.ಶ. 1929**
5. ಕಾಂಗ್ರೆಸ್ ಸೋಷಲಿಸ್ಟ್ ಪಕ್ಷದ ಮಹಾಕಾರ್ಯದರ್ಶಿ _________ ಆಗಿದ್ದರು.
6. ಸಂಪೂರ್ಣ ಕ್ರಾಂತಿ ಆಂದೋಲನವನ್ನು __________ರವರು ಹುಟ್ಟು ಹಾಕಿದರು.
**ಉ: ಸುಭಾಷ್‌ಚಂದ್ರ ಬೋಸ್**
7. ಸ್ವತಂತ್ರ ಭಾರತದ ಮೊದಲ ಪ್ರಧಾನಿಮಂತ್ರಿ _________ ಆಗಿದ್ದರು.
**ಉ: ಜವಹರಲಾಲ್ ನೆಹರು**

**ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಗಾಂಧೀಜಿ ಅವರು ಎಲ್ಲಿ, ಯಾವಾಗ ಜನಿಸಿದರು?
**ಉ: ಸಾ.ಶ. 1869 ಅಕ್ಟೋಬರ್ 2, ಗುಜರಾತ್‌ನ ಪೋರಬಂದರ್**
2. ಗಾಂಧೀಜಿ ಅವರ ರಾಜಕೀಯ ಗುರು ಯಾರು? **ಉ: ಗೋಪಾಲ ಕೃಷ್ಣ ಗೋಖಲೆ**
3. ಪೂನಾ ಒಪ್ಪಂದ ಯಾರ್‍ಯಾರ ನಡುವೆ ಏರ್ಪಟ್ಟಿತು? **ಉ: ಗಾಂಧೀಜಿ & ಅಂಬೇಡ್ಕರ್**
4. 'ಫಾರ್ವರ್ಡ್ ಬ್ಲಾಕ್' ಆರಂಭಿಸಿದವರು ಯಾರು? **ಉ: ಸುಭಾಷ್‌ಚಂದ್ರ ಬೋಸ್**
5. ಐ.ಎನ್.ಎ ವಿಸ್ತರಿಸಿ. **ಉ: ಇಂಡಿಯನ್ ನ್ಯಾಷನಲ್ ಆರ್ಮಿ**
6. 'ಭಾರತ ಬಿಟ್ಟು ತೊಲಗಿ' ಚಳವಳಿಯಲ್ಲಿ ಗಾಂಧೀಜಿ ನೀಡಿದ ಘೋಷಣೆ ಯಾವುದು?
**ಉ: ಮಾಡು ಇಲ್ಲವೇ ಮಡಿ**
7. 'ನನಗೆ ರಕ್ತ ಕೊಡಿ,ನಿಮಗೆ ಸ್ವಾತಂತ್ರ್ಯ ಕೊಡುತ್ತೇನೆ'ಎಂಬ ಘೋಷಣೆ ನೀಡಿದವರಾರು?

**ಉ: ಸುಭಾಷ್‌ಚಂದ್ರ ಬೋಸ್**

8. ಅಂಬೇಡ್ಕರ್ ಯಾವಾಗ ಜನಿಸಿದರು?

**ಉ: ಮಧ್ಯಪ್ರದೇಶದ 'ಮ್ಹೋ' ಎಂಬಲ್ಲಿ 14 ಏಪ್ರಿಲ್ 1891ರಂದು ಜನಿಸಿದರು**

9. ಭಾರತದ 'ಸಂವಿಧಾನ ಶಿಲ್ಪಿ' ಎಂದು ಯಾರನ್ನು ಕರೆಯುತ್ತಾರೆ?

**ಉ: ಡಾ. ಬಿ.ಆರ್. ಅಂಬೇಡ್ಕರ್**

10. 'ಲೋಕ ನಾಯಕ' ಎಂದು ಯಾರನ್ನು ಕರೆಯುತ್ತಾರೆ? **ಉ: ಜಯಪ್ರಕಾಶ ನಾರಾಯಣ.**

**ಈ ಕೆಳಗಿನ ಪ್ರಶ್ನೆಗಳಿಗೆ ಗುಂಪಿನಲ್ಲಿ ಚರ್ಚಿಸಿ ಉತ್ತರಿಸಿ.**

1. ಗಾಂಧೀಜಿಯವರ ಕನೂನುಭಂಗ ಚಳುವಳಯನ್ನು ಕುರಿತು ಬರೆಯಿರಿ.

- ✓ **ಉ: ನಾಗರಿಕ ಕಾನೂನುಭಂಗ ಚಳವಳಿಯನ್ನು ಸಾ.ಶ. 1930ರ ಮಾರ್ಚ್ 12ರಂದು ಗಾಂಧೀಜಿ ಅವರು ಪ್ರಸಿದ್ಧ ದಂಡಿಯಾತ್ರೆಯೊಂದಿಗೆ ಆರಂಭಿಸಿದರು.**
- ✓ **ಉದ್ದೇಶ: ಆಯ್ದ 78 ಮಂದಿ ಅನುಯಾಯಿಗಳೊಡನೆ ಗಾಂಧೀಜಿ ಸಾಬರಮತಿ ಆಶ್ರಮದಿಂದ ಗುಜರಾತಿನ ಕಡಲತೀರದ ದಂಡಿಯವರೆಗೂ ಸುಮಾರು 375 ಕಿ.ಮೀ. ದೂರವನ್ನು ಕ್ರಮಿಸಿದರು. ಜನರಿಂದ ಉಪ್ಪನ್ನು ಉತ್ಪಾದಿಸುವುದರ ಮೂಲಕ ಉಪ್ಪಿನ ಕಾನೂನನ್ನು ಮುರಿಯುವುದು.**
- ✓ **ಕರ್ನಾಟಕದ ಅಂಕೋಲೆಯ ಉಪ್ಪಿನ ಸತ್ಯಾಗ್ರಹವು ದಾಖಲೆಯನ್ನು ನಿರ್ಮಿಸಿ ಭಾರತಾದ್ಯಂತ ಖ್ಯಾತಿ ಗಳಿಸಿತು.**

2. ಭಾರತ ಬಿಟ್ಟು ತೊಲಗಿ ಚಳುವಳಿಯನ್ನು ವಿವರಿಸಿ.

- **ಉ: ಕ್ರಿಪ್ಸ್ ಆಯೋಗದ ವೈಫಲ್ಯವು ಭಾರತೀಯರನ್ನು ಕೆರಳಿಸಿತು.**
- **ಗಾಂಧೀಜಿ ಅವರು ಸಾ.ಶ. 1942ರ ಆಗಸ್ಟ್ 8ರಂದು ಮುಂಬೈನಲ್ಲಿ ಕಾಂಗ್ರೆಸಿನ ಸಭೆ ಕರೆದರು. ಅಲ್ಲಿ ಪ್ರಸಿದ್ಧ 'ಭಾರತ ಬಿಟ್ಟು ತೊಲಗಿ' ಎಂಬ ನಿರ್ಣಯವನ್ನು ಅಂಗೀಕರಿಸಿದರು.**
- **ಭಾರತೀಯರಿಗೆ 'ಮಾಡು ಇಲ್ಲವೆ ಮಡಿ' ಎಂಬ ಘೋಷಣೆ ನೀಡಿದರು.**
- **"ಭಾರತ ಬಿಟ್ಟು ತೊಲಗಿ" ಚಳವಳಿಯು ಕೂಡ ತತ್‌ಕ್ಷಣದ ರಾಜಕೀಯ ಉದ್ದೇಶವನ್ನು ಸಾಧಿಸುವಲ್ಲಿ ವಿಫಲವಾಯಿತು.**
- **ಆದರೆ ಭಾರತದ ಜನತೆ ಸ್ವತಂತ್ರರಾಗಲು ದೃಢ ನಿರ್ಧಾರ ತಳೆದಿದ್ದಾರೆ ಎಂಬ ಸಂದೇಶ ಸ್ಪಷ್ಟವಾಗಿತ್ತು. ಇದು ಗಾಂಧಿ ಯುಗದ ಬಹುದೊಡ್ಡ ಜನಾಂದೋಲನವಾಗಿತ್ತು.**

3. ಸುಭಾಷ್ ಚಂದ್ರ ಬೋಸರ ಸ್ವಾತಂತ್ರ್ಯ ಹೋರಾಟವನ್ನು ಸಂಕ್ಷಿಪ್ತವಾಗಿ ವಿವರಿಸಿ.

- **ಅವರು ಮೋಹನ್ ಸಿಂಗ್ ನೇತೃತ್ವದಲ್ಲಿ ಭಾರತೀಯ ರಾಷ್ಟ್ರೀಯ ಸೇನೆ (ಇಂಡಿಯನ್ ನೇಷನಲ್ ಆರ್ಮಿ – ಐ.ಎನ್.ಎ.) ಅಥವಾ ಆಜಾದ್ ಹಿಂದ್ ಫೌಜ್ ಎಂಬ ಹೆಸರಿನಿಂದ ಸಂಘಟಿತರಾಗಿದ್ದರು.**
- **1943 ರಲ್ಲಿ ಸುಭಾಷ್‌ಚಂದ್ರರು ಸಿಂಗಾಪುರಕ್ಕೆ ಬಂದು ಐ.ಎನ್.ಎ.ಯ ನಾಯಕತ್ವ ವಹಿಸಿಕೊಂಡರು.**

- ▲ ಸುಭಾಷರನ್ನು 'ನೇತಾಜಿ' ಎಂದು ಕರೆಯಲಾಯಿತು. ಶೀಘ್ರವೇ ನೇತಾಜಿಯವರು ಸಿಂಗಾಪುರದಲ್ಲಿ 'ಸ್ವತಂತ್ರ ಭಾರತದ ಹಂಗಾಮಿ ಸರ್ಕಾರ'ವನ್ನು ಸ್ಥಾಪಿಸಿದರು.
- ▲ 'ಚಲೋ ದಿಲ್ಲಿ' ಎಂಬ ಘೋಷಣೆಯೊಂದಿಗೆ ನೇತಾಜಿಯವರ ನಾಯಕತ್ವದಲ್ಲಿ ಐ.ಎನ್.ಎ. ಬರ್ಮದ ಕಡೆಯಿಂದ ಭಾರತದ ಪ್ರದೇಶದಲ್ಲಿ (ಈಗಿನ ಮಣಿಪುರ) ಸುಮಾರು 150 ಮೈಲಿಗಳಷ್ಟು ಮುನ್ನುಗ್ಗಿತು.
- ▲ ಅಲ್ಲಿ ಭಾರತದ ತ್ರಿವರ್ಣ ಧ್ವಜವನ್ನು ಭಾರತೀಯ ನೆಲದ ಮೇಲೆ ಹಾರಿಸಿತು.
- ▲ ಇದೇ ವೇಳೆ ಅಣುಬಾಂಬ್ ದಾಳಿಗೆ ಒಳಗಾದ ಜಪಾನ್ 1945 ಆಗಸ್ಟ್ ತಿಂಗಳಲ್ಲಿ ಶರಣಾಯಿತು.
- ▲ ಆಗಸ್ಟ್ 18 ರಂದು ನೇತಾಜಿ ಅವರು ವಿಮಾನದಲ್ಲಿ ಹೊರಟವರು ನಿಗೂಢವಾಗಿ ಕಣ್ಮರೆಯಾದರು.
- ▲ . "ನೀವು ನನಗೆ ರಕ್ತ ಕೊಡಿ, ನಾನು ನಿಮಗೆ ಸ್ವಾತಂತ್ರ್ಯವನ್ನು ನೀಡುತ್ತೇನೆ" ಎಂದು ನೇತಾಜಿ ಅವರು ಭಾರತೀಯರಿಗೆ ಕರೆ ನೀಡಿದರು.

## ಪಾಠ 6 : ಕರ್ನಾಟಕ ಸಮಾಜಮುಖಿ ಚಳುವಳಿಗಳು

**ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿರಿ.**

1. 'ತುಂಗಾಮೂಲವನ್ನು ಉಳಿಸಿ' ಆಂದೋಲನ ಏಕೆ ಆರಂಭವಾಯಿತು?

**ಉ: ಸಹ್ಯಾದ್ರಿ ಶ್ರೇಣಿಯ ಪ್ರಮುಖ ನದಿಯಾದ ತುಂಗಾ ಕಲುಷಿತವಾಗುತ್ತಿರುವುದನ್ನು ವಿರೋಧಿಸಲು.**

2. 'ಅಪ್ಪಿಕೋ' ಚಳವಳಿ ಎಂದರೇನು?

**ಉ: ಗಿಡಮರಗಳು ಉಳಿಸಿ ಬೆಳೆಸುವ ಉದ್ದೇಶದಿಂದ ಅದರ ನಾಶವನ್ನು ತಡೆಯಲು ಭಾರತದ ವಿವಿಧ ಪ್ರದೇಶಗಳಲ್ಲಿ 'ಚಿಪ್ಕೊ' ಅಥವಾ 'ಅಪ್ಪಿಕೊ' ಚಳವಳಿಗಳು ಆರಂಭಗೊಂಡವು.**

3. 'ಸಾಮಾಜಿಕ ಅರಣ್ಯ' ಎಂದರೇನು?

**ಉ: ಅರಣ್ಯ ಇಲಖೆಯು ನೀಲಗಿರಿ, ಅಕೇಷಿಯಾಗಳಂತಹ ಆಮದು ಸಸ್ಯಗಳನ್ನು ನೆಡಲಾರಂಭಿಸಿತು. ಈ ಯೋಜನೆಯನ್ನು 'ಸಾಮಾಜಿಕ ಅರಣ್ಯ'ವೆನ್ನುವರು.**

4. ಕರ್ನಾಟಕದ ಮೊದಲ ಮಹಿಳಾ ಬಿ.ಎ. ಆನರ್ಸ್ ಪದವೀಧರರು ಯಾರು?

**ಉ: ಶ್ರೀರಂಗಮ್ಮ ಮತ್ತು ರುಕ್ಮಿಣಮ್ಮ**

**ಎರಡು / ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

1. ನಾವೇಕೆ ಪ್ರಾಚೀನ ಕೆರೆಗಳನ್ನು ಉಳಿಸಬೇಕು?

**ಉ: ನೀರು ಅತ್ಯಮೂಲ್ಯವಾದ ವಸ್ತು. ಸಕಲ ಪ್ರಾಣಿ ಪಕ್ಷಿಗಳು, ಗಿಡ ಮರಗಳಿಗೆ ನೀರು ಅತ್ಯವಶ್ಯಕ. ನೀರಿನ ಪ್ರಮುಖ ಮೂಲವಾದ ಕೆರೆಗಳನ್ನು ಉಳಿಸುವುದರಿಂದ ಅಂತರ್ಜಲ ಹೆಚ್ಚುತ್ತದೆ. ಈ ಎಲ್ಲಾ ಜೀವರಾಶಿಗಳಿಗೆ ಬದುಕು ನೀಡಿದಂತಾಗುತ್ತದೆ.**

2. ಪ್ರಮುಖ ಪರಿಸರ ಚಳುವಳಿಗಳನ್ನು ಹೆಸರಿಸಿರಿ.

- ★ ಸಹ್ಯಾದ್ರಿ ಗಣಿ ವಿರೋಧಿ ವೇದಿಕೆ : ಕುದುರೆಮುಖ ಪ್ರದೇಶದಲ್ಲಿ ಗಣಿಘಾರಿಕೆ ವಿರೋಧ.
- ★ 284 ಸಾಲು ಮರಗಳ ತಾಯಿ ತಿಮ್ಮಕ್ಕ ಪರಿಸರ ಉಳಿವಿಗಾಗಿ ಹೋರಾಟ
- ★ ತುಂಗಾ ಮೂಲ ಉಳಿಸಿ ಆಂದೋಲನ : ತುಂಗ ನದಿ ಮಾಲಿನ್ಯದ ವಿರುದ್ಧ ಹೋರಾಟ.

★ ಚಿಪ್ಕೋ / ಅಪ್ಪಿಕೋ ಚಳುವಳಿ : ಸುಂದರಲಾಲ್ ಬಹುಗುಣ ಗಿಡಮರ ಕಡಿಯಲು ವಿರೋಧ.

3. ದಲಿತ ಚಳುವಳಿ ಏಕೆ ಪ್ರಾರಂಭವಾಯಿತು?

**ಉ : 20 ನೇಶತಮಾನದಲ್ಲಿ ಹುಟ್ಟಿ ಬೆಳೆದ ಬ್ರಾಹ್ಮಣೇತರ ಚಳುವಳಿಗಳು ದಲಿತರನ್ನು ಹೆಚ್ಚು ಒಳಗೊಳ್ಳಲಿಲ್ಲ. ಇದನ್ನು ಪ್ರಶ್ನಿಸುತ್ತಾ1970 ರ ದಶಕದಲ್ಲಿ ದಲಿತ ಚಳುವಳಿ ಪ್ರಾರಂಭವಾಯಿತು?**

4. ದಲಿತ ಚಳುವಳಿಯ ಬೀಜಮಂತ್ರಗಳು ಯಾವುವು?

**ಉ: ಅಂಬೇಡ್ಕರರ ಶಿಕ್ಷಣ, ಸಂಘಟನೆ, ಹೋರಾಟ.**

5. ಪಂಚಾಯತ್ ರಾಜ್ ವ್ಯವಸ್ಥೆ ಏಕೆ ಮಹತ್ವದ್ದಾಗಿದೆ?

- ಉ: ಪಂಚಾಯತ್ ರಾಜ್ ವ್ಯವಸ್ಥೆಯನ್ನು ಆಡಳಿತದ ವಿಕೇಂದ್ರೀಕರಣ ವ್ಯವಸ್ಥೆ ಎನ್ನುವರು.
- ಆಶಯ : ಆಡಳಿತದಲ್ಲಿ ಸ್ಥಳೀಯರ ಭಾಗವಹಿಸುವಿಕೆ.
- 1955 : ಬಲವಂತರಾಯ್ ಮೆಹತಾ ಸಮಿತಿ : 3 ಹಂತದ ಸ್ಥಳೀಯ ಆಡಳಿತ ವ್ಯವಸ್ಥೆ ಶಿಫಾರಸ್ಸು ಮಾಡಿತು.
- 1959 : ಮೈಸೂರು ಗ್ರಾಮ ಪಂಚಾಯಿತಿಗಳ ಅಧಿನಿಯಮ : 3 ಹಂತದ ಸ್ಥಳಿಯ ಸಂಸ್ಥೆಗಳು
- ಗ್ರಾಮ, ತಾಲ್ಲೂಕು, ಜಿಲ್ಲಾ ಪಂಚಾಯಿತಿಗಳ ರಚನೆ
- 1983 : ಜನತಾ ಸರ್ಕಾರದ ಸಚಿವರಾಗಿದ್ದ ನಜೀರ್ ಸಾಬ್ ರವರ ಅವಧಿಯಲ್ಲಿ ಆಡಳಿತದಲ್ಲಿ ದಲಿತ, ಹಿಂದುಳಿದ & ಮಹಿಳೆಯರಿಗೆ ಸ್ಥಾನ ಮೀಸಲಾಗಿರಿಸಿತು.

## ಪಾಠ 7 :ಕರ್ನಾಟಕ ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆ

**ಬಿಟ್ಟ ಜಾಗದಲ್ಲಿ ಸೂಕ್ತವಾದ ಪದವನ್ನು ತುಂಬಿರಿ.**

1. ಬಿ.ಡಿ.ಜತ್ತಿಯವರು ಭಾರತದ ______________ ಆಗಿದ್ದರು. **ಉ ಉಪರಾಷ್ಟ್ರಪತಿ**

2. 1974ರಲ್ಲಿ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿದ್ದವರು ___________ .

**ಉ: ಡಿ. ಏವರಾಜ ಅರಸ್**

3. 1975ರಲ್ಲಿ ನೇಮಕವಾದ ಪ್ರಥಮ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರು

**ಉ: ಸಿ.ಮಿಲ್ಲರ್**

**ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಭೂಸುಧಾರಣೆ ಎಂದರೇನು?

**ಉ: ಭೂಮಿಯ ಹಿಡುವಳಿಗಲ್ಲಿ ಇರುವ ಸಮಸ್ಯೆಗಳನ್ನು ಹೋಗಲಡಿಸಲು ಜಾರಿಗೊಳಿಸಲಾಗಿರುವ ಕ್ರಮಗಳನ್ನು ಭೂಸುಧಾರಣೆ ಎನ್ನುವರು**

2. ಮುಖ್ಯವಾದ ಭೂಸುಧಾರಣೆಗಳು ಯಾವುವು?

**ಉ: ಜಮಿನ್ದಾರಿ ಪದ್ಧತಿಯ ನಿರ್ಮೂಲನೆ, ಗೇಣಿ ಪದ್ದತಿಯಲ್ಲಿ ಸುಧಾರಣೆ, 1974ರ ಭೂ ಸುಧಾರಣಾ ಕಾಯ್ದೆ, ಗರಿಷ್ಟ ಹಿಡುವಳಿಯ ಮಿತಿ, ಆರ್ಥಿಕ ಹಿಡುವಳಿ ರಚನೆ, ಸಹಕಾರಿ ಬೇಸಾಯ ಪದ್ಧತಿ.**

3. ಆರ್ಥಿಕ ಹಿಡುವಳಿ ಎಂದರೇನು?

**ಉ: ಬೇಸಾಯಗಾರನು ಬೇಸಾಯ ವೆಚ್ಚಗಳನ್ನು ಕಳೆದು ತನಗೂ ತನ್ನ ಕುಟುಂಬಕ್ಕೂ ನೆಮ್ಮದಿಯಾಗಿರಲು ಬೇಕಾದ ಆದಾಯ ಗಳಿಸಬಲ್ಲನೋ ಅಂತಹ ಜೀವಣಾಧಾರ ಗಳಿಸಬಲ್ಲನೋ ಅಂತಹ ಹಿಡುವಳಿಯನ್ನು ಆರ್ಥಿಕ ಹಿಡುವಳಿ ಎನ್ನುವರು.**

4. ಒಂದು ಕುಟುಂಬ ಹೊಂದಬಹುದಾದ ಭೂಮಿಯ ಗರಿಷ್ಠಮಿತಿಯನ್ನು ಕರ್ನಾಟಕ ಸರ್ಕಾರವು ಏಕೆ ನಿಗದಿ ಪಡಿಸಿದೆ?

5. ಸಹಕಾರಿ ಬೇಸಾಯ ಪದ್ಧತಿ ಎಂದರೇನು?

**ಉ: ರೈತರು ಸಹಕಾರಿ ಸಂಘಗಳನ್ನು ಸ್ಥಾಪಿಸಿಕೊಂಡು ತಮ್ಮ ಎಲ್ಲಾ ಹಿಡುವಳಿಯನ್ನು ಒಟ್ಟಾಗಿ ಸೇರಿ ಸಾಗುವಳಿ ಮಾಡುತ್ತಾರೆ. ಉತ್ಪಾದನೆಯು ಕೈಗೆ ಬಂದಾಗ ಜಮೀನಿನ ಶಾಶ್ವತ ಅಭಿವೃದ್ಧಿಗೆ ಅಗತ್ಯ ಬಂಡವಾಳವನ್ನು ತೆಗೆದಿಟ್ಟು ಉಳಿದ ಭಾಗವನ್ನು ಹಂಚಿಕೊಳ್ಳುತ್ತಾರೆ. ಇದನ್ನು 'ಸಹಕಾರಿ ಬೇಸಾಯ ಪದ್ಧತಿ' ಎನ್ನುತ್ತೇವೆ.**

6. ಎಲ್.ಜಿ. ಹಾವನೂರು ಆಯೋಗವು ಹಿಂದುಳಿಯುವಿಕೆಯನ್ನು ಹೇಗೆ ಗುರುತಿಸಿತು?

**ಉ: 1975ನೇ ಇಸವಿಯ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿವಿಧ ಜಾತಿಯ ವಿದ್ಯಾರ್ಥಿಗಳ ಶೇಕಡಾವಾರನ್ನು ಜಾತಿಗಳ ಹಿಂದುಳಿದಿರುವಿಕೆಯನ್ನು ಗುರುತಿಸಲು ಮಾನದಂಡವನ್ನಾಗಿ ತಗೆದುಕೊಳ್ಳಲಾಯಿತು.**

## ಪಾಠ 8: ಮಹಿಳಾ ಸ್ವಾತಂತ್ರ್ಯ ಹೋರಾಟಗಾರರು

**ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ಭರ್ತಿಮಾಡಿ.**

1. ರಾಣಿ ಅಬ್ಬಕ್ಕನ ಸ್ಮರಣಾರ್ಥವಾಗಿ ಉಳ್ಳಾಲದಲ್ಲಿ __________ ಆಚರಿಸುತ್ತಾರೆ.

**ಉ: ವೀರರಾಣಿ ಅಬ್ಬಕ್ಕನ ಉತ್ಸವ**

2. ಬಳ್ಳಾರಿ ಸಿದ್ಧಮ್ಮ ______________ ರಲ್ಲಿ ಜನಿಸಿದರು. **ಉ: 1903**

3. 1938ರಲ್ಲಿ ಯಶೋಧರಮ್ಮನವರು ____________ ದಲ್ಲಿ ಭಾಗವಹಿಸಿದರು.

**ಉ: ಶಿವಪುರ ಧ್ವಜಸತ್ಯಾಗ್ರಹ**

4. ಯಶೋಧರಮ್ಮನವರು ________________ ಸಚಿವರಾಗಿದ್ದರು.

**ಉ: ಸಮಾಜ ಕಲ್ಯಾಣ**

5. ಸ್ವದೇಶಿ ವ್ರತ ನಾಟಕ ರಚಿಸಿದವರು ____________ .

**ಉ: ಉಮಾಬಾಯಿ ಕುಂದಾಪುರ**

**ಈ ಕೆಳಗಿನ ಪ್ರಶ್ನೆಗಳಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.**

1. ಉಳ್ಳಾಲದ ರಕ್ಷಣೆಯಲ್ಲಿ ಪೋರ್ಚುಗೀಸರ ವಿರುದ್ಧ ರಾಣಿ ಅಬಕ್ಕದೇವಿಯ ಹೋರಾಟವನ್ನು ವಿವರಿಸಿ.

- ಪೋರ್ಚುಗೀಸರು ಅಬ್ಬಕ್ಕಳಿಗೆ ಕಪ್ಪ ನೀಡಲು ಒತ್ತಾಯಿಸಿದಾಗ ಇವರು ತಿರಸ್ಕರಿಸಿದರು. ಪರಿಣಾಮವಾಗಿ 1555ರಲ್ಲಿ ಪೋರ್ಚುಗೀಸರು "ರಾಣಿ" ಮೇಲೆ ಯುದ್ಧ ಸಾರಿದರು. ಯುದ್ಧದಲ್ಲಿ ಅಬ್ಬಕ್ಕ ಜಯವನ್ನು ಸಾಧಿಸಿದಳು.
- ನಂತರ 1568ರಲ್ಲಿ ಪೋರ್ಚುಗೀಸರು ವೈಸರಾಯ್ ಆದ "ಆಂಟೋನಿಯೋಮೋರಹ" ರವರನ್ನು ಸೋಲಿಸಿದಳು. & ಜನರಲ್ 'ಪೆಕ್ಸೆಟೋ' ಈ ಯುದ್ಧದಲ್ಲಿ ಅಸುನೀಗಿದನು.
- ಪೋರ್ಚುಗೀಸರ ಅಡ್ಮಿರಲ್ 'ಮಾಸ್‌ಕಾರೆನ್ಸ್' ನು ಉಳ್ಳಾಲದ ಸೈನಿಕರಿಂದ ಹತನಾದನು.
- 1570 ರಲ್ಲಿ ಬಿಜಾಪುರದ ಸುಲ್ತಾನ ಮತ್ತು ಕಲ್ಲಿಕೋಟೆಯ ಜಾಮೋರಿನ್‌ರವರೊಂದಿಗೆ ಮೈತ್ರಿ ಒಪ್ಪಂದವನ್ನು ಅಬ್ಬಕ್ಕ ಮಾಡಿಕೊಂಡಳು.
- ಜಾಮೋರಿನ್ ದೊರೆಯ ದಂಡನಾಯಕನಾದ "ಕುಲ್ಟಿಪೊಕರ್ ಮಾರ್ಕಕರ್", ಅಬ್ಬಕ್ಕದೇವಿಯ ಪರವಾಗಿ ಯುದ್ಧ ಮಾಡಿ ಮಂಗಳೂರು ಕೋಟೆಯನ್ನು ವಶಪಡಿಸಿಕೊಂಡು ಹಿಂತಿರುಗಿ ಬರುವಾಗ ಪೋರ್ಚುಗೀಸರಿಂದ ಹತನಾದನು.
- ಅಬ್ಬಕ್ಕದೇವಿಯ ಪತಿಯಾದ ಲಕ್ಷ್ಮರಸನ ಸರಕಾರದಿಂದ ಪೋರ್ಚುಗೀಸರು ಅಬ್ಬಕ್ಕದೇವಿಯನ್ನು ಯುದ್ಧದಲ್ಲಿ ಸೋಲಿಸಿ ಸೆರೆಮನೆಗೆ ತಳ್ಳಿದರು. ಅಬ್ಬಕ್ಕ ಸೆರೆಮನೆಯಲ್ಲಿಯೆ ತೀರಿಕೊಂಡಳು.

2. ಬಹುಮುಖ ಪ್ರತಿಭೆಯವರಾಗಿದ್ದ ಕಮಲಾದೇವಿ ಚಟೋಪಾಧ್ಯಾಯರವರು ಕನಾಟಕದ ಹೆಮ್ಮೆ ಸಮರ್ಥಿಸಿರಿ?

- ಇವರು ಗಾಂಧೀಜಿ ಮತ್ತು ಸರೋಜಿನಿ ನಾಯ್ಡುರವರಿಂದ ಪ್ರಭಾವಿತರಾಗಿ ಅಸಹಕಾರ ಚಳುವಳಿಯಲ್ಲಿ ಭಾಗವಹಿಸಿದರು.
- ಉಪ್ಪಿನ ಸತ್ಯಾಗ್ರಹ & ಕಾನೂನು ಭಂಗ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು.
- ರಾಷ್ಟ್ರ ಮಟ್ಟದಲ್ಲಿ ಕಾಂಗ್ರೆಸಿನ ಸೇವಾದಳದ ಮಹಿಳೆಯರ ತಂಡದ ಜವಾಬ್ದಾರಿಯನ್ನು ವಹಿಸಿಕೊಂಡರು
- ಕಾಂಗ್ರೆಸ್ ಪಕ್ಷದಲ್ಲೆ 'ಕಾಂಗ್ರೆಸ್ ಸೊಶಿಯಲಿಸ್ಟ್ ಪಕ್ಷ' ಎಂಬ ಒಳಬಣವೊಂದನ್ನು ಸ್ಥಾಪಿಸಿದರು.
- ಕಮಲಾದೇವಿ ಚಟ್ಟೋಪಾಧ್ಯಾಯರು 1934 ರಲ್ಲಿ ಈ ಪಕ್ಷದ ಸದಸ್ಯತ್ವವನ್ನು ಪಡೆದರು.
- ಕಮಲಾದೇವಿಯವರು ಸ್ವಾತಂತ್ರ್ಯ ಹೋರಾಟಗಾರರಷ್ಟೇ ಅಲ್ಲದೇ ಸಮಾಜ ಸುಧಾರಕರು, ಸ್ತ್ರೀವಾದಿ, ಚಿಂತಕರು, ಸಾಹಿತಿ ಮತ್ತು ಚಲನಚಿತ್ರ ನಟರೂ ಆಗಿದ್ದರು.

3. ಸ್ವಾತಂತ್ರ್ಯ ಹೋರಾಟಕ್ಕೆ ಉಮಾದೇವಿ ಕುಂದಾಪುರವರು ನೀಡಿದ ಕೊಡುಗೆಗಳನ್ನು ಪಟ್ಟಿಮಾಡಿ.

- ಮರಾಠಿ ಭಾಷೆಯಲ್ಲಿ 'ಸ್ವದೇಶಿ ವ್ರತ' ಎಂಬ ನಾಟಕವನ್ನು ರಚಿಸಿ ಸ್ವದೇಶಿ ತತ್ವದ ಮಹತ್ವವನ್ನು ಸಾರಿದರು.
- ಮುಂಬೈಯಲ್ಲಿ ಸಾರಸ್ವತ ಸಾಹಿತ್ಯಿಕ ಸಮಾಜ ಮತ್ತು ಭಗಿನೀ ಮಂಡಳಿ ಹಾಗೂ ತಿಲಕ್ ಶಾಲೆಯ ಜವಾಬ್ದಾರಿಯನ್ನು ವಹಿಸಿಕೊಂಡರು.
- 1924 ರ ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ ಪ್ರಮುಖ ಪಾತ್ರವಹಿಸಿದರು.

❖ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ಇದರಿಂದ ನಾಲ್ಕು ತಿಂಗಳ ಕಾಲ ಹಿಂಡಲಗ ಮತ್ತು ಯರವಾಡ ಜೈಲುಗಳಲ್ಲಿ ಬಂಧನದಲ್ಲಿದ್ದರು.
❖ ನಂತರ ಅಂಕೋಲ, ಶಿರಸಿ, ಸಿದ್ದಾಪುರ ಮುಂತಾದ ಕಡೆ ನಡೆದ ಸತ್ಯಾಗ್ರಹಗಳಲ್ಲಿ ಭಾಗವಹಿಸಿ ಶಿಕ್ಷೆ ಅನುಭವಿಸಿದರು.
❖ ಗಾಂಧೀಜಿಯವರ ಸಲಹೆಯಂತೆ ಕಸ್ತೂರ ಬಾ ನಿಧಿಯ ಜವಾಬ್ದಾರಿಯನ್ನು ವಹಿಸಿಕೊಂಡು ಸಮಾಜ ಸುಧಾರಣೆ ಕೆಲಸವನ್ನು ಮುಂದುವರಿಸಿದರು.

## ಪಾಠ 9 : ಕರ್ನಾಟಕ ಏಕೀಕರಣ ಮತ್ತು ಗಡಿ ವಿವಾದಗಳು

**ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಕರ್ನಾಟಕ ವಿದ್ಯಾವರ್ಧಕ ಸಂಘ ಯಾವ ವರ್ಷ ಸ್ಥಾಪಿತವಾಯಿತು? **ಉ: 1890**

2. 'ಕರ್ನಾಟಕ ಕುಲಪುರೋಹಿತ' ಎಚಿದು ಯಾರನ್ನು ಕರೆಯುತ್ತಾರೆ?

**ಉ: ಆಲೂರು ವೆಂಕಟರಾಯರು**

3. ಕರ್ನಾಟಕ ಏಕೀಕರಣಕ್ಕೆ ಕೊಡುಗೆ ನೀಡಿದ ಎರಡು ಸಂಘಟನೆಗಳನ್ನು ಹೆಸರಿಸಿರಿ?

**ಉ: ಕರ್ನಾಟಕ ವಿದ್ಯಾವರ್ಧಕ ಸಂಘ, ಕನ್ನಡ ಸಾಹಿತ್ಯ ಪರಿಷತ್ತು.**

4. 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಎಂಬ ಗ್ಭಿತೆಯನ್ನು ಬರೆದವರು ಯಾರು?

**ಉ: ಹುಯಿಲಗೊಳ ನಾರಾಯಣರಾವ್**

5. ವಿಶಾಲ ಮೈಸೂರು ರಾಜ್ಯ ಯಾವಾಗ ಅಸ್ತಿತ್ವಕ್ಕೆ ಬಂದಿತು? **ಉ: 1956 ನವೆಂಬರ್ 1**

6. ಕರ್ನಾಟಕ ಎಚಿದು ಯಾರು? ಯಾವಾಗ ನಾಮಕರಣ ಮಾಡಿದರು?

**ಉ: ಡಿ. ದೇವರಾಜ ಅರಸರು 1973 ನವೆಂಬರ್1**

**ಈ ಕೆಳಗಿನ ಪ್ರಶ್ನೆಗಳನ್ನು ಗುಂಪಿನಲ್ಲಿ ಚ್ಚರ್ಚಿಸಿ ಉತ್ತರಿಸಿ.**

1. ಕರ್ನಾಟಕ ಏಕೀಕರಣಕ್ಕೆ ಪ್ರೇರಣೆನೀಡಿದ ಕವಿಗಳು ಯಾರು ಮತ್ತು ಅವರ ಕವಿತೆಗಳು ಯಾವುವು?

**ಉ: ಹುಯಿಲಗೊಳ ನಾರಾಯಣರಾವ್– 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು'**

**ಕುವೆಂಪು – 'ಜಯಹೇ ಕರ್ನಾಟಕ ಮಾತೆ'**

2. ರಾಜ್ಯ ಪುನರ್ ವಿಂಗಡಣಾ ಆಯೋಗದ ಅಧ್ಯಕ್ಷರು ಹಾಗೂ ಸದಸ್ಯರು ಯಾರು?

**ಉ: ಅಧ್ಯಕ್ಷರು: ಎಸ್. ಫಜಲ್ ಅಲಿ, ಸದಸ್ಯರು: ಕುಂಜ್ರು, ಫಣಿಕ್ಕರ್, 1955 ರಲ್ಲಿ**

## ಪಾಠ 10 : ನಮ್ಮ ರಕ್ಷಣಾ ಪಡೆಗಳು

**ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.**

1. ರಕ್ಷಣಾಪಡೆಗಳ ಸರ್ವೋಚ್ಚ ಅಧಿಕಾರ ಯಾರಿಗೆ ನೀಡಲಾಗಿದೆ? **ಉ: ರಾಷ್ಟ್ರಪತಿಗಳು**

2. ರಕ್ಷಣಾಪಡೆಯ ವಿಭಾಗಗಳಾವುವು? **ಉ: ಭೂಸೇನೆ, ವಾಯುಸೇನೆ, ನೌಕಾಸೇನೆ.**

3. ಭೂಸೇನೆಯ ಮುಖ್ಯಸ್ಥರನ್ನು ಏನೆಂದು ಕರೆಯುವರು? **ಉ: ಜನರಲ್(ದಂಡನಾಯಕ)**

4. ಭೂಸೇನೆಯ ಆಡಳಿತ ಕಚೇರಿ ಎಲ್ಲಿದೆ? **ಉ: ನವದೆಹಲಿ**

5. ನೌಕಾದಳದ ಮುಖ್ಯಸ್ಥರನ್ನು ಏನೆಂದು ಕರೆಯುತ್ತಾರೆ? **ಉ: ಆಡ್ಮಿರಲ್**

6. ಎನ್‌ಸಿಸಿಯ ಧ್ಯೇಯ ವಾಕ್ಯ ಯಾವುದು? **ಉ: ಶಿಸ್ತು & ಒಗ್ಗಟ್ಟು**

7. ಭೂಸೇನೆಯ ಪ್ರಮುಖ ಕಾರ್ಯಗಳಾವುವು?

**ಉ: ದೇಶದ ಗಡಿಗಳ ರಕ್ಷಣೆಯ ಜೊತೆಗೆ ನೈಸರ್ಗಿಕ ವಿಕೋಪಗಳಾದ ಭೂಕಂಪ, ಪ್ರವಾಹ, ಬರಗಾಲ, ಭೂಕುಸಿತ, ಬಿರುಗಾಳಿ ಮುಂತಾದ ಸಂದರ್ಭಗಳಲ್ಲಿ ಮಾನವೀಯ ಕಾರ್ಯಗಳನ್ನು ಭೂಸೇನೆ ನಿರ್ವಹಿಸುತ್ತದೆ.**

8. ಗಡಿರಸ್ತೆಗಳ ಸಂಘಟನೆಯ ಕಾರ್ಯಗಳಾವುವು?

**ಉ: ಗಡಿರಸ್ತೆಗಳ ಸಂಘಟನೆಯು ಮುಚ್ಚಿರುವ ರಸ್ತೆಗಳನ್ನು ತೆರವು ಮಾಡಿ ಸೈನಿಕ ಕಾರ್ಯಾಚರಣೆಗಳಿಗೆ ತಕ್ಷಣದ ಸಹಾಯವನ್ನು ಮಾಡುತ್ತದೆ. ರಸ್ತೆ ನಿರ್ಮಾಣ, ಸೇತುವೆ ನಿರ್ಮಾಣ.**

9. ರೆಡ್‌ಕ್ರಾಸ್ ಸಂಸ್ಥೆಯ ಧ್ಯೇಯ ಯಾವುದು? **ಉ: ಮಾನವೀಯತೆ & ಸ್ವಯಂಸೇವೆ.**

10. ಪೂರಕ ರಕ್ಷಣಾಪಡೆಗಳು ಯಾವುವು?

**ಉ: ಗಡಿಭದ್ರತಾ ದಳ, ಗಡಿರ್ತೆಗಳ ಸಂಘಟನೆ, ಕರಾವಳಿ ಪಹರೆಯವರು, ಕೇಂದ್ರ ಕೈಗಾರಿಕಾ ಭದ್ರತಾ ಪಡೆ.**

11. ಸಹಾಯಕ ರಕ್ಷಣಾ ಪಡೆಗಳು ಯಾವುವು?

**ಉ: ರಾಷ್ಟ್ರೀಯ ಸೈನ್ಯ ದಳ, ಗೃಹ ರಕ್ಷಕದಳ, ನಾಗರಿಕ ಪೊಲೀಸ್ ಪಡೆ, ಭಾರತೀಯ ರೆಡ್‌ಕ್ರಾಸ್ ಸಂಸ್ಥೆ.**

## ಪಾಠ 11 ಸಂವಿಧಾನ ತಿದ್ದುಪಡಿ

1. ಸಂವಿಧಾನ ತಿದ್ದುಪಡಿ ಎಂದರೇನು?

**ಉ: ನಿರಂತರವಾಗಿ ನಡೆಯುವ ಸಾಮಾಜಿಕ ಬದಲಾವಣೆ ಹಾಗೂ ಬದಲಾದ ಪರಿಸ್ಥಿತಿಗೆ ಹೊಂದಿಕೊಳ್ಳಲು ಸಂವಿಧಾನವನ್ನು ಕಾನೂನುಬದ್ದವಾಗಿ ಮಾರ್ಪಡಿಸುವ ವ್ಯವಸ್ಥೆಯೇ ಸಂವಿಧನ ತಿದ್ದುಪಡಿ.**

2. ಭಾರತದ ಸಂವಿಧಾನ ತಿದ್ದುಪಡಿ ವಿಧಾನಗಳಾವುವು?

ಉ : **1. ಸರಳ ಬಹುಮತ ತಿದ್ದುಪಡಿ ವಿಧಾನ**

**2. ವಿಶೇಷ ಬಹುಮತ ತಿದ್ದುಪಡಿ ವಿಧಾನ**

**3. ವಿಶೇಷ ಬಹುಮತದೊಂದಿಗೆ ಕನಿಷ್ಠ ಅರ್ಧದಷ್ಟು ರಾಜ್ಯಗಳ ಒಪ್ಪಿಗೆ**

3. ಸರಳ ಬಹುಮತ ತಿದ್ದುಪಡಿ ವಿಧಾನವೆಂದರೇನು?

**ಉ: ಸಂಸತ್ತಿನ (ಲೋಕ ಸಭೆ ಹಾಗೂ ರಾಜ್ಯ ಸಭೆ ಎರಡೂ ಸದನಗಳು) ಸಾಮಾನ್ಯ ಶಾಸನೀಯ ಪ್ರಕ್ರಿಯೆಯ ಸರಳ ಬಹುಮತದ(ಸಂಸತ್ತಿನ ಸದಸ್ಯರಲ್ಲಿ ಅರ್ಧಕ್ಕಿಂತ ಹೆಚ್ಚು ಸದಸ್ಯರ ಒಪ್ಪಿಗೆ) ಮೂಲಕ ತಿದ್ದುಪಡಿ ಮಾಡಬಹ**

4. ವಿಶೇಷ ಬಹುಮತ ತಿದ್ದುಪಡಿ ವಿಧಾನವನ್ನು ತಿಳಿಸಿ.

**ಉ: ಸಂಸತ್ತಿನ ಸದಸ್ಯರಲ್ಲಿ ಮೂರನೇ ಎರಡು ಭಾಗದಷ್ಟು ಸದಸ್ಯರು ಒಪ್ಪಿಗೆ ಸೂಚಿಸಿ ಸಂವಿಧಾನಕ್ಕೆ ತಿದ್ದುಪಡಿ ಮಾಡಬಹುದು.**

5. ಭಾರತ ಸಂವಿಧಾನವನ್ನು ತಿದ್ದುಪಡಿ ಮಾಡುವ ಮೂರನೇ ವಿಧಾನವನ್ನು ವಿವರಿಸಿ.

**ಉ: ಸಂಸತ್ತಿನ ವಿಶೇಷ ಬಹುಮತದೊಂದಿಗೆ ಅರ್ಧದಷ್ಟು ರಾಜ್ಯಗಳ ಒಪ್ಪಿಗೆ ಪಡೆದು ಸಂವಿಧಾನದ ಕೆಲವು ಭಾಗಗಳನ್ನು ತಿದ್ದುಪಡಿ ಮಾಡಬಹುದು.**

## ಪಾಠ 12 : ಆಸ್ಟ್ರೇಲಿಯ : ಅತ್ಯಂತ ಸಮತಟ್ಟಾದ ಭೂಖಂಡ

1. ಆಸ್ಟ್ರೇಲಿಯವನ್ನು 'ಅತ್ಯಂತ ಸಮತಟ್ಟಾದ ಭೂಖಂಡ' ಎನ್ನುವರು. ಏಕೆ?

**ಉ: ಆಸ್ಟ್ರೇಲಿಯದ ಒಟ್ಟು ವಿಸ್ತೀರ್ಣದಲ್ಲಿ ಸುಮಾರು ಶೇ.94 ಭಾಗವು ಸಮುದ್ರಮಟ್ಟಕ್ಕೆ 600 ಮೀ.ಗಳಿಗಿಂತ ತಗ್ಗಿನಲ್ಲಿದ್ದು ಸಮತಟ್ಟಾಗಿದೆ. ಆದ್ದರಿಂದ ಅದನ್ನು 'ಅತ್ಯಂತ ಸಮತಟ್ಟಾದ ಭೂಖಂಡ' ಎಂದು ಕರೆಯಲಾಗಿದೆ.**

2. ಆಸ್ಟ್ರೇಲಿಯ ಖಂಡದ ಸ್ಥಾನ ಮತ್ತು ಸನ್ನಿವೇಶಗಳನ್ನು ತಿಳಿಸಿರಿ.

**ಉ: ಆಸ್ಟ್ರೇಲಿಯ ಖಂಡವು ಪೂರ್ಣವಾಗಿ ದಕ್ಷಿಣ ಮತ್ತು ಪೂರ್ವ ಗೋಳಾರ್ಧದಲ್ಲಿದೆ. ಇದು 100 451 ದಕ್ಷಿಣದಿಂದ 430 391 ದಕ್ಷಿಣ ಅಕ್ಷಾಂಶ ಹಾಗೂ 1130 91 ಪೂರ್ವದಿಂದ 1530 391 ಪೂರ್ವ ರೇಖಾಂಶಗಳ ನಡುವೆ ವಿಸ್ತರಿಸಿದೆ.**

3. ಆಸ್ಟ್ರೇಲಿಯದ ಪ್ರಮುಖ ಪ್ರಾಕೃತಿಕ ವಿಭಾಗಗಳಾವುವು?

**ಉ: 1. ಪೂರ್ವದ ಉನ್ನತ ಪ್ರದೇಶ 2. ಮಧ್ಯದ ತಗ್ಗು ಮೈದಾನ 3. ಪಶ್ಚಿಮದ ಪ್ರಸ್ತಭೂಮಿ.**

4. ಆಸ್ಟ್ರೇಲಿಯದ ನದಿಗಳನ್ನು ಹೆಸರಿಸಿ.

**ಉ: ಮರ್ರೆ, ಡಾರ್ಲಿಂಗ್, ಡಾಲಿ, ವಿಕ್ಟೋರಿಯಾ, ಮುಕುಂಬ, ಮಿಟ್ಚೆಲ್, ಕೂಪರ್ ಕ್ರಿಕ್, ಅವೋನ್, ಲಾಚ್‌ಲೈನ್.**

5. ಆಸ್ಟ್ರೇಲಿಯದ ಪ್ರಮುಖ ಬೆಳೆಗಳಾವುವು?

**ಉ: ಗೋಧಿ, ಕಬ್ಬು, ಹತ್ತಿ, ತಂಬಾಕು, ಮೆಕ್ಕೆಜೋಳ, ಸೇಬು, ದ್ರಾಕ್ಷಿ, ಪೇರು, ಕಿತ್ತಳೆ.**

6. ಆಸ್ಟ್ರೇಲಿಯ ಖಂಡದ ಪ್ರಮುಖ ಖನಿಜಗಳಾವುವು?

**ಉ: ಕಬ್ಬಿಣ, ಬಾಕ್ಸೈಟ್, ಸತು, ನಿಕ್ಕಲ್, ತಾಮ್ರ, ಮ್ಯಾಂಗನೀಸ್, ಚಿನ್ನ, ತವರ, ಸೀಸ, ಯುರೇನಿಯಂ.**

7. ಆಸ್ಟ್ರೇಲಿಯದ ಪ್ರಮುಖ ಕೈಗಾರಿಕೆಗಳನ್ನು ತಿಳಿಸಿರಿ.

**ಉ: ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ * ಜವಳಿ ಉದ್ಯಮ * ಸ್ವಚಾಲಿತ ವಾಹನ ಕೈಗಾರಿಕೆ * ಕಾಗದ, ರಟ್ಟು ಮತ್ತು ಮರದ ತಿರುಳು * ಹಡಗು ನಿರ್ಮಾಣ * ತೈಲ ಶುದ್ಧೀಕರಣ * ವಿದ್ಯುದುಪಕರಣ**

8. ಆಸ್ಟ್ರೇಲಿಯದ ಹುಲ್ಲುಗಾವಲುಗಳನ್ನು ಹೆಸರಿಸಿ.

**ಉ: ಉಷ್ಣವಲಯದ ಹುಲ್ಲುಗಾವಲು ಅಥವಾ ಸವನ್ನ; ಸಮಶೀತೋಷ್ಣವಲಯದ ಹುಲ್ಲುಗಾವಲು ಅಥವಾ ಡೌನ್ಸ್.**

## ಪಾಠ 12 : ಅಂಟಾರ್ಕ್‌ಟಿಕ್ ಶ್ವೇತ ಭೂಖಂಡ

1. ಅಂಟಾರ್ಕ್‌ಟಿಕ ಭೂಖಂಡದ ಸ್ಥಾನ ಮತ್ತು ವಿಸ್ತೀರ್ಣ ತಿಳಿಸಿರಿ.

**ಉ : ದಕ್ಷಿಣ ಧ್ರುವದ ಸುತ್ತ ವ್ಯಾಪಿಸಿರುವ ಭೂಖಂಡ. ಅಂಟಾರ್ಕ್‌ಟಿಕ ವೃತ್ತ ಅಥವಾ $66^{0}30^{1}$ ದಕ್ಷಿಣ ಅಕ್ಷಾಂಶದೊಳಗೆ ಹರಡಿರುವ ಖಂಡ.**

2. ಅಂಟಾರ್ಕ್‌ಟಿಕ ಖಂಡದ ಭೌಗೋಳಿಕ ಸನ್ನಿವೇಶ ಕುರಿತು ವಿವರಿಸಿ.

**ಉ : ಅಂಟಾರ್ಕ್‌ಟಿಕ ಖಂಡವನ್ನು ಸುತ್ತಲೂ ಜಲರಾಶಿಗಳು ಆವರಿಸಿವೆ. ಈ ಜಲರಾಶಿಯನ್ನು ದಕ್ಷಿಣ ಸಾಗರವೆಂದೇ ಕರೆಯಲಾಗಿದೆ. ಆದರೆ ಇದು ಪ್ರತ್ಯೇಕ ಜಲರಾಶಿಯಲ್ಲ, ಬದಲಾಗಿ ಹಿಂದೂ ಮಹಾಸಾಗರ ಮತ್ತು ಪೆಸಿಫಿಕ್ ಮಹಾಸಾಗರಗಳು ಒಂದುಗೂಡಿರುವ ಭಾಗ. ಈ ಖಂಡದ**

**ಪೂರ್ವಕ್ಕೆ ಹಿಂದೂ ಮಹಾಸಾಗರ, ಪಶ್ಚಿಮಕ್ಕೆ ಪೆಸಿಫಿಕ್ ಮಹಾಸಾಗರ ಹಾಗೂ ವಾಯುವ್ಯಕ್ಕೆ ಅಟ್ಲಾಂಟಿಕ್ ಮಹಾಸಾಗರಗಳಿವೆ.**

3. ಅಂಟಾರ್ಕ್‌ಟಿಕವನ್ನು 'ಶ್ವೇತ ಖಂಡ' ಎನ್ನುವರು. ಏಕೆ?

**ಉ : ಮಂಜುಗಡ್ಡೆಯ ಪದರ ಸುಮಾರು 2,300 ಮೀಟರ್‌ಗಿಂತ ಹೆಚ್ಚು ಮಂದವಾಗಿದ್ದು , ಎಲ್ಲಡೆಯೂ ಶ್ವೇತ (ಬಿಳಿ ಬಣ್ಣದಿಂದ) ಕೂಡಿದ್ದು , ಹಾಗಾಗಿ ಶ್ವೇತ ಖಂಡವೆಂದು, 'ಹಿಮದ ಮರುಭೂಮಿ' ಎಂತಲೂ ಹಾಗೂ ಅತ್ಯಂತ ಶೀತವಾಗಿರುವುದರಿಂದ 'ಶೀತಲ ಖಂಡ' ಎಂದೂ ಕರೆಯಲಾಗಿದೆ.**

4. ಅಂಟಾರ್ಕ್‌ಟಿಕ ಖಂಡದ ಪ್ರಮುಖ ಪರ್ವತ ಮತ್ತು ಶಿಖರಗಳನ್ನು ತಿಳಿಸಿ.

**ಉ : ಟ್ರಾನ್ಸ್, ಎಲ್ಸ್‌ವರ್ತ್, ಪ್ರಿನ್ಸ್ ಚಾರ್ಲ್ಸ್**

5. ಅಂಟಾರ್ಕ್‌ಟಿಕ ಖಂಡದ ಸಸ್ಯ ಮತ್ತು ಪ್ರಾಣಿಗಳನ್ನು ಹೆಸರಿಸಿ.

**ಉ: : ಸಸ್ಯ : ಪಾಚಿ, ಶಿಲಾವಲ್ಕ, ಹಾವಸೆ ಪ್ರಾಣಿ ಪಕ್ಷಿ : ಪೆಂಗ್ವಿನ್, ತಿಮಿಂಗಿಲಾ, ಸೀಲ್, ಕ್ರೀಲ್, ಸೀಗಡಿ ಮೀನು**

6. ಅಂಟಾರ್ಕ್‌ಟಿಕದಲ್ಲಿ ಭಾರತದ ಸಂಶೋಧನಾ ಕೇಂದ್ರಗಳ ಹೆಸರನ್ನು ತಿಳಿಸಿ

**ಉ : ದಕ್ಷಿಣ ಗಂಗೋತ್ರಿ, ಮೈತ್ರಿ, ಪ್ರಿಯದರ್ಶಿನಿ, ಭಾರತಿ.**

# ಭಾರತದ ಪ್ರಮುಖ ರಾಜಮನೆತನಗಳ ಸಂಕ್ಷಿಪ್ತ ಮಾಹಿತಿ

| | ರಾಜ ಮನೆತನಗಳು | ಸ್ಥಾಪಕರು | ಕಾಲಾವಧಿ | ಪ್ರಸಿದ್ಧ ದೊರೆ | ಲಾಂಛನ | ರಾಜಧಾನಿ |
|---|---|---|---|---|---|---|
| 1 | ವಿಜಯನಗರ | ಹರಿಹರ & ಬುಕ್ಕರಾಯ | 1336–1646 | ಶ್ರೀ ಕೃಷ್ಣದೇವರಾಯ | ವರಾಹ | ಹಂಪೆ |
| 2 | ಬಹಮನಿ | ಅಲ್ಲಾವುದ್ದೀನ್ ಹಸನ್ ಗಂಗು ಬಹಮನ್ ಷಾ | 1347–1527 | ಫಿರೋಜ್ ಷಾ | | ಕಲಬುರಗಿ ಬೀದರ್ |
| 3 | ವಿಜಯಪುರದ ಆದಿಲ್ ಶಾಹಿಗಳು | ಯೂಸೂಫ್ ಆದಿಲ್ ಶಾ | 1489–1686 | 2ನೇ ಇಬ್ರಾಹಿಂ ಆದಿಲ್ ಶಾ | | ವಿಜಯಪುರ |
| 4 | ಬೀದರ್ ಬರೀದ್ ಶಾಹಿ | ಖಾಸಿಂ | 1489–1619 | | | ಬೀದರ್ |
| 5 | ಗೋಲ್ಕಂಡದ ಕುತುಬ್ ಶಾಹಿ | ಖುಲಿ ಕುತುಬ್ ಶಾಹಿ | 1512–1687 | ಇಬ್ರಾಹಿಂ | | ಗೊಲ್ಕಂಡ, ಹೈದ್ರಾಬಾದ್ |
| 6 | ಅಹಮದ್‌ನಗರ ನಿಜಾಂ ಶಾಹಿ | ಮಲಿಕ್ ಅಹ್ಮದ | 1490–1636 | | | ಅಹಮದ್ ನಗರ |
| 7 | ಬೀರಾರ್‌ನ ಇಮದ್ ಶಾಹಿ | ಫತಾ ಉಲ್ಲಾ | 1490–1580 | | | ಎಲಿಚಪುರ, ಬೀರಾರ್ |
| 8 | ಕೆಳದಿ ನಾಯಕರು | | 1499–1763 | ಹಿರಿಯ ವೆಂಕಟಪ್ಪ ನಾಯಕ ಶಿವಪ್ಪ ನಾಯಕ | | ಕೆಳದಿ |
| 9 | ಚಿತ್ರದುರ್ಗದ ನಾಯಕರು | ಮತ್ತಿ ತಿಮ್ಮಣ್ಣ ನಯಕ | 1568–1749 | ರಾಜವೀರ ಮದಕರಿ ನಯಕ | | ಚಿತ್ರದುರ್ಗ |
| 10 | ಸುರಪುರದ ನಾಯಕರು | ಗಡ್ಡಿಪಿಡ್ಡ ನಯಕ | 1636–1858 | ವೆಂಕಟಪ್ಪ ನಾಯಕ | | ಸುರಪುರ |
| 11 | ಯಲಹಂಕ ನಾಡಪ್ರಭುಗಳು | ರಣ ಭೈರೇಗೌಡ | | ಹಿರಿಯ ಕೆಂಪೇಗೌಡ, ಇಮ್ಮಡಿ ಕೆಂಪೇಗೌಡ | | ಯಲಹಂಕ ಬೆಂಗಳೂರು ಮಾಗಡಿ |
| 12 | ಮೈಸೂರು ಒಡೆಯರು | ಯದುರಾಯ | 1399–1947 | ನಾಲ್ವಡಿ ಕೃಷ್ಣರಾಜ ಒಡೆಯರ್ | ಗಂಡಭೇರುಂಡ | ಶ್ರೀರಂಗಪಟ್ಟಣ ಮೈಸೂರು |
| 13 | ಮೊಗಲರು | ಬಾಬರ್ | 1526–1857 | ಅಕ್ಬರ್ | | ಆಗ್ರಾ, ಫತೆಪುರ್ ಸಿಕ್ರಿ, ಲಾಹೋರ್ |
| 14 | ಮರಾಠರು | ಶಿವಾಜಿ | 1674–1818 | ಶಿವಾಜಿ | ರಾಯಗಡ, ಜಿಂಜಿ, ಸತಾರ, ಪುಣೆ | |
| 15 | ಗುಲಾಮಿ | ಕುತುಬುದ್ದೀನ್ ಐಬಕ್ | | | | |
| 16 | ಖಿಲ್ಜಿ | ಅಲಾವುದ್ದೀನ್ ಖಿಲ್ಜಿ | 17 | ತುಘಲಕ್ | ಮಹಮದ್ ಬಿನ್ ತುಘಲಕ್ | |


ಭಾರತ
ರಾಜಕೀಯ ವಿಭಾಗಗಳು
ಜಮ್ಮು ಮತ್ತು ಕಾಶ್ಮೀರ
ಹಿಮಾಚಲ ಪ್ರದೇಶ
ಉತ್ತರಖಂಡ
ಚೀನಾ
ದೆಹಲಿ
ಉತ್ತರ ಪ್ರದೇಶ
ಬಿಹಾರ್
ಗುಜರಾತ್
ಗಾಂಧಿನಗರ
ಮಧ್ಯಪ್ರದೇಶ
ಭೂಪಾಲ್
ಪಶ್ಚಿಮ ಬಂಗಾಳ
ಬಾಂಗ್ಲಾದೇಶ
ಮಿಜೋರಂ
ತ್ರಿಪುರ
ಒಡಿಶಾ
ಮಹಾರಾಷ್ಟ್ರ
ತೆಲಂಗಾಣ
ಹೈದರಾಬಾದ್
ಅಮರಾವತಿ
ಆಂಧ್ರಪ್ರದೇಶ
ಗೋವ
ಕರ್ನಾಟಕ
ಬಂಗಾಳ ಕೊಲ್ಲಿ
ಪಾಂಡಿಚೇರಿ
ತಮಿಳುನಾಡು
ಶ್ರೀಲಂಕಾ
N
ಹಿಂದೂ ಮಹಾಸಾಗರ
ಪೋರ್ಟ್ ಬ್ಲೇರ್